# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಏಪ್ರಿಲ್, ೨೦೧೮** **ಸಂಪುಟ: ೭ ಸಂಚಿಕೆ: ೩**

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ :** ರೂ. ೧೫೦/- (ಫೆಬ್ರುವರಿಯಿಂದ ಸೆಪ್ಟಂಬರ್, ೨೦೧೮ವರೆಗೆ)**ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦



**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಜ್ಯ ವಿಧಾನಸಭಾ ಚುನಾವಣೆಗಳ ದಿನಾಂಕ ಪ್ರಕಟವಾಗಿದೆ. ಇನ್ನು ಸುಮಾರು ಒಂದೂವರೆ ತಿಂಗಳಲ್ಲಿ ನಾವು ಹೊಸ ಸರ್ಕಾರವೊಂದನ್ನು ಪಡೆಯಬಹುದು. ಅದು ಯಾರ ಸರ್ಕಾರ ಎಂಬುದನ್ನು ಮುಂದಿನ ದಿನಗಳಲ್ಲಿ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ನಡೆಸುವ ಪ್ರಚಾರ ವೈಖರಿ ನಿರ್ಧರಿಸಲಿದೆ. ಕಾಂಗ್ರೆಸ್ ತನ್ನ ಐದು ವರ್ಷಗಳ ಸಾಧನೆಗಳನ್ನು ಮತ್ತು ಬಿಜೆಪಿ ಹಾಗೂ ಜೆಡಿಎಸ್ ಕಾಂಗ್ರೆಸ್ ಸರ್ಕಾರದ ವೈಫಲ್ಯ-ದೌರ್ಬಲ್ಯಗಳನ್ನು ಹೇಗೆ ನಿರೂಪಿಸಬಲ್ಲವು ಎಂಬುದೇ ಈ ಪ್ರಚಾರ ವೈಖರಿಯ ಸ್ವರೂಪವನ್ನು ನಿರ್ಧರಿಸಲಿದೆ. ಈಗಾಗಲೇ ಬಿಜೆಪಿ ಮತ್ತು ಕಾಂಗ್ರೆಸ್ ಇದನ್ನು ಜನರ ಮನಸ್ಸಿನ ನಿರ್ವಹಣೆಯ ಕೆಲಸವಾಗಿ ಪರಿಗಣಿಸಿ ಇದಕ್ಕಾಗಿ ಸಮೂಹ ಮತ್ತು ಸಾಮಾಜಿಕ ಮಾಧ್ಯಮಗಳ ನಿರ್ವಾಹಕ ಪರಿಣತರನ್ನು, ಅವರ 'ಸಂಶೋಧನಾ' ಸಂಸ್ಥೆಗಳನ್ನು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ನೇಮಿಸಿಕೊಂಡು ಕಾರ್ಯನಿರತವಾಗಿವೆ.. ಈ ಸಂಬಂಧವಾಗಿ ಈ ಎರಡೂ ಪಕ್ಷಗಳು ಮತದಾರರನ್ನು ಕುರಿತ ಮಾಹಿತಿಯ ದುರ್ಬಳಕೆ ಕುರಿತು ಪರಸ್ಪರ ಆರೋಪಗಳನ್ನು ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಇನ್ನು ಈ ವಿಷಯದಲ್ಲಿ ಜೆಡಿಎಸ್ ಹಿಂದೆ ಬಿದ್ದಿರುವಂತೆ ಕಾಣುತ್ತಿದೆ. ಅದು ಮತದಾರರ ಮನಸ್ಸನ್ನು ಗೆಲ್ಲಲು ಬೇರೆ 'ಮಾರ್ಗ'ಗಳ ಮೇಲೆ ಹೆಚ್ಚು ಹಣ ಹೂಡುವ ಯೋಜನೆ ಹಾಕಿಕೊಂಡಿರುವಂತಿದೆ. ಅದೇನೇ ಇರಲಿ, ತತ್ವ-ಕಾರ್ಯಕ್ರಮಗಳ ಬಹಿರಂಗ ಚರ್ಚೆ-ಹೋರಾಟವಾಗಬೇಕಿದ್ದ ನಮ್ಮ ಚುನಾವಣೆಗಳು ಮತದಾರರ ಮಾನಸಿಕ ನಿರ್ವಹಣಾ ಶಾಸ್ತ್ರದ ದಂಧೆಕೋರರ ಗುಪ್ತ ಕಾರ್ಯಾಚರಣೆಯ ಬಲಿಪಶುವಾಗಿರುವುದು ನಮ್ಮ ಪ್ರಜಾತಂತ್ರದ ದೃಷ್ಟಿಯಿಂದ ಶುಭ ಸೂಚನೆಯಲ್ಲ.

ನಮ್ಮ ಸಿದ್ಧರಾಮಯ್ಯನವರು ದಿನ ನಿತ್ಯ ಪತ್ರಿಕೆಗಳಲ್ಲಿ ತಮ್ಮ ಸರ್ಕಾರದ ಸಾಧನೆಗಳ ಬಣ್ಣಬಣ್ಣದ ಜಾಹೀರಾತುಗಳ ಹುಚ್ಚುಹೊಳೆ ಹರಿಸುತ್ತಿರುವುದನ್ನು ನೋಡಿ ಜನ ದಂಗಾಗಿ ಹೋಗಿದ್ದಾರೆ. ಇದಕ್ಕೊಂದು ಮಿತಿ ಬೇಡವೇ? ಈ ಜಾಹೀರಾತುಗಳನ್ನು ನೋಡಿ ಜನ ನಿಮ್ಮ ಸರ್ಕಾರದ ಸಾಧನೆಗಳನ್ನು ತಿಳಿದುಕೊಳ್ಳುವರೇ? ನಿಮ್ಮ ಕಾರ್ಯಕ್ರಮಗಳು ನಿಜವಾಗಿ ಜನಹಿತವಾದವುಗಳಾಗಿದ್ದರೆ ಸಹಜವಾಗಿಯೇ ಜನ ನಿಮಗೆ ಮತ ಹಾಕುತ್ತಾರೆ. ದಿನ ನಿತ್ಯ ಪತ್ರಿಕೆಗಳಲ್ಲಿ ನಿಮ್ಮ ಡಂಗುರ ಮತ್ತು ಚಿತ್ರ ನೋಡಿ ಜನರ ಮನಸ್ಸಿನಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುವ ಎಲ್ಲ ಸಾಧ್ಯತೆಗಳಿವೆ ಎಂದು ಇವರ ಮಾಧ್ಯಮ ನಿರ್ವಾಹಕ ಪರಿಣತರು ಇವರಿಗೆ ಈವರೆಗೆ ಹೇಳದಿರುವುದು ಆಶ್ಚರ್ಯಕರ.

ಇನ್ನು ಬಿಜೆಪಿ ಕಡೆಯಿಂದ ಅವರ ಚಾಣಾಕ್ಷ ಅಧ್ಯಕ್ಷ ಅಮಿತ್‌ಶಾ ಈಗಾಗಲೇ ಎರಡು ಮೂರು ಬಾರಿ ರಾಜ್ಯ ಪ್ರವಾಸ ಮಾಡಿ ಪಕ್ಷದ ನಾಯಕರೊಂದಿಗೆ ಮುಗುಮ್ಮಾಗಿ ಚುನಾವಣಾ ಪ್ರಚಾರದ ಸೂಕ್ಷ್ಮ ಅಂಶಗಳ ಬಗ್ಗೆ ಚರ್ಚಿಸಿ ಹೋಗಿದ್ದಾರೆ. ಅದರ ಭಾಗವಾಗಿಯೇ ಇತ್ತೀಚಿನ ಪ್ರವಾಸದಲ್ಲಿ ಅವರು ಶಿವಮೊಗ್ಗ ಜಿಲ್ಲೆ ಹಳೆಯ ಕೋಮು ಗಲಭೆಗಳ ಚರಿತ್ರೆಯನ್ನು ಕೆದಕಿ ಹೋಗಿದ್ದಾರೆ. ತೀರ್ಥಹಳ್ಳಿ ಮತ್ತು ಶಿವಮೊಗ್ಗಗಳ ಇಂತಹ ಗಲಭೆಗಳ 'ಬಲಿ'ಗಳೆಂದು ಅವರ ಪಕ್ಷ ಪ್ರಚಾರ ಮಾಡಿದ್ದ ನಂದಿತಾ ಮತ್ತು ವಿಶ್ವನಾಥರ ಮನೆಗಳಿಗೆ ಭೇಟಿ ನೀಡಿ ಹೋಗಿದ್ದಾರೆ.. ರಾಜ್ಯದ ಜನರ ಮನಸ್ಸಿನಲ್ಲಿ ಈಗಾಗಲೇ ಮಾಗಿ ಹೋಗಿರುವ ಮತ್ತು ಮಾಗುತ್ತಿರುವ ಇನ್ನೆಷ್ಟು ಗಾಯಗಳನ್ನು ತೆರೆದು ಮತ್ತೆ ವ್ರಣ ಮಾಡುವ ಯೋಜನೆ ಇವರದ್ದಾಗಿದೆಯೋ ತಿಳಿಯದೆ ಆತಂಕವುಂಟಾಗುತ್ತಿದೆ. ಜೊತೆಗೆ ಈ ಪಕ್ಷ ಎಷ್ಟು ಭಂಡವೆಂದರೆ ತಮ್ಮ ಅಧ್ಯಕ್ಷರನ್ನು ಕುಪ್ಪಳ್ಳಿಯ ಕುವೆಂಪು ಸಮಾಧಿಯ ಬಳಿಯೂ ಕಳಿಸಿ ಪುಷ್ಪನಮನದ ನಾಟಕವಾಡಿದೆ. ಎಲ್ಲಿಯ ಹಿಂದುತ್ವ? ಎಲ್ಲಿಯ ಕುವೆಂಪು? ಎಲ್ಲಿಯ ಅಮಿತ್‌ಶಾ? ಈ ಪಕ್ಷಕ್ಕೆ ಹಿಂದುತ್ವವವೂ ಒಂದು ನಂಬಿಕೆಯ ತತ್ವವಾಗಿರದೆ ರಾಜಕೀಯ ಆಟದ ಸಾಧನವಾಗಿರುವಂತಿದೆ. ಉ.ಪ್ರ.ದ ಇತ್ತೀಚಿನ ಉಪಚುನಾವಣೆಗಳಲ್ಲಿನ ಸೋಲುಗಳಿಂದ ಅದು ಕಂಗೆಟ್ಟಂತಿದೆ.

ಜನರನ್ನು ಮಡ್ಡರಂತೆ ತಿಳಿದಂತಿವೆ ಈ ರಾಜಕೀಯ ಪಕ್ಷಗಳು! ಅಥವಾ ಅವರನ್ನು ಮಡ್ಡ ಮಾಡುವುದೇ ಇವರ ಗುರಿಯಾಗಿದೆಯೋ? ಸಿದ್ಧರಾಮಯ್ಯನವರು ಮೊದಲು ಸದಾಶಿವ ಆಯೋಗದ ಶಿಫಾರ್ಸುಗಳು ಮತ್ತು ಜಾತಿ ಆಧಾರಿತ ಬಡ್ತಿ ಮತ್ತು ಕೆಪಿಎಸ್ಸಿ ಹಗರಣಗಳಿಗೆ ಸಂಬಂಧಿಸಿದಂತೆ ಪರಿಹಾರ ಹುಡುಕುವ ನಿಜವಾದ ಜನೋಪಯೋಗಿಯಾದ ಕೆಲಸ ಮಾಡದೆ ಲಿಂಗಾಯತರು ಹಿಂದೂಗಳಲ್ಲ ಎಂದು ಘೋಷಿಸಿ ಅವರಿಗೆ ಅಲ್ಪಸಂಖ್ಯಾತ ಧರ್ಮೀಯರ 'ಸೌಲಭ್ಯ'ಗಳನ್ನು ಕಲ್ಪಿಸುವ ಅಪ್ಪಟ ಅವಕಾಶವಾದಿ ರಾಜಕೀಯ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಆ ಮೂಲಕ 'ಲಿಂಗಾಯತ-ವೀರಶೈವ(ಬಸವ ತತ್ವವನ್ನು ನಂಬುವವರು)' ಎಂಬ ಜಗತ್ತಿನ ಅತ್ಯಂತ ಉದ್ದನೆಯ ಹೆಸರಿನ ಧರ್ಮವೊಂದರ ಸಂಸ್ಥಾಪಕರಾಗುವ (ಇದಕ್ಕೆ ಕೇಂದ್ರದ ಒಪ್ಪಿಗೆ ದೊರೆತರೆ) ಕೀರ್ತಿಗೆ ಭಾಜನರಾಗಿದ್ದಾರೆ!

ಅಲ್ಲಾ ಸಿದ್ಧರಾಮಯ್ಯನವರೇ, ಲಿಂಗಾಯ್ತರನ್ನು ಹಿಂದೂಗಳಿಂದ ಪ್ರತ್ಯೇಕಿಸುತ್ತವೆಂದು ಹೇಳಲಾದ ಜಾತಿ-ಉಪಜಾತಿ ಪದ್ಧತಿ, ಅಸ್ಪೃಶ್ಯತೆ, ಪುರೋಹಿತಶಾಹಿ, ದೇವಾಲಯ ಸಂಸ್ಕೃತಿ ಇತ್ಯಾದಿ ಈ ಸಮುದಾಯದಲ್ಲಿ ಆಚರಣೆಯಲ್ಲಿಲ್ಲವೇ? ಏಕೀ ಆತ್ಮವಂಚನೆ? ಇನ್ನು ಬಸವತತ್ವದಲ್ಲಿನ ನಂಬಿಕೆಯ ಷರತ್ತನ್ನು ಹೇಗೆ ಪರೀಕ್ಷಿಸಿ ಅವರನ್ನು ಹೊಸ ಧರ್ಮದ ಜನರೆಂದು ಮಾನ್ಯ ಮಾಡುವಿರಿ? ಆಫಿಡವಿಟ್ ಕೊಡಬೇಕೆ? ಲಿಂಗಾಯತ ಮಠಾಧೀಶರೊಬ್ಬರಿಂದ ಅದಕ್ಕೆ ಮಾನ್ಯತೆ ಬೇಕಾಗುತ್ತದೆಯೇ? ಅಥವಾ ಸರ್ಕಾರ ಬಸವ ತತ್ವ ಪ್ರವೇಶ ಪರೀಕ್ಷೆ ನಡೆಸುವುದೇ? ಯಾವುದನ್ನು ಬಿಜೆಪಿ ಮಾಡುತ್ತಿದೆಯೆಂದು ಕಾಂಗ್ರೆಸ್ ಆಪಾದಿಸುತ್ತಿತ್ತೋ ಆ ಧರ್ಮದ ರಾಜಕೀಯೀಕರಣಕ್ಕೆ ಈಗ ಕಾಂಗ್ರೆಸ್ ಕೈಹಾಕಿದೆ! ಇದು ನಿಜವಾಗಿಯೂ ಅಪಾಯದ ಆಟವೇ ಆಗಿದೆ. ಚುನಾವಣಾ ಫಲಾಫಲಗಳ ದೃಷ್ಟಿಯಿಂದಲೂ. ಈ ಬಗ್ಗೆ ಹಿಂದೂವಾದಿ ಬಿಜೆಪಿ ತಾಳಿರುವ ಮೌನವು ಬಿರುಗಾಳಿಗೆ ಮುನ್ನದ ಅರ್ಥಗರ್ಭಿತ ಮೌನವಾಗಿದ್ದರೆ ಆಶ್ಚರ್ಯವಿಲ್ಲ! ಕಾದು ನೋಡಬೇಕಷ್ಟೆ.

ಇನ್ನು ಈ ಎರಡು ದೈತ್ಯ ಪಕ್ಷಗಳ ಮಧ್ಯೆ ಜೆಡಿಎಸ್ ಹೆಚ್ಚು ಅಬ್ಬರವಿಲ್ಲದೆ ತನ್ನ ಚುನಾವಣಾ ತಂತ್ರ ಹೆಣೆಯುತ್ತಿದೆ. ಕಳೆದ ಐದು ವರ್ಷಗಳಲ್ಲಿ ಸಿದ್ಧರಾಮಯ್ಯನವರ ಅಹಿಂದವಾದದ 'ಪ್ರತಿಕೂಲ ಪರಿಣಾಮ'ಗಳಿಂದ 'ನೊಂದ' ಒಕ್ಕಲಿಗ ಸಮುದಾಯ ಈ ಬಾರಿ ಕುಮಾರಣ್ಣ ಪರ ಹೆಚ್ಚು ಸಂಘಟಿತವಾಗಿರುವಂತೆ ತೋರುತ್ತಿದೆ. ಜೊತೆಗೆ ಇತರ ಸಮುದಾಯಗಳ ಕೆಲ ಜನರೂ ಎರಡು ದೊಡ್ಡ ಪಕ್ಷಗಳ ಆಡಳಿತಾವಧಿಗಳ ಹಗರಣಗಳನ್ನು ನೆನಪಿಸಿಕೊಂಡು ಕುಮಾರಣ್ಣನೇ ವಾಸಿ ಎಂಬ ಮಾತನ್ನೂ ಆಡುತ್ತಿರುವುದು ಇತ್ತೀಚೆಗೆ ಕೇಳಿ ಬರುತ್ತಿದೆ. ಆದರೆ ಈ ಪಕ್ಷ ತನ್ನ ಕುಟುಂಬ ರಾಜಕಾರಣದ ಚಹರೆಗಳನ್ನು ಕಳೆದುಕೊಳ್ಳುವ ಪ್ರಜ್ಞಾಪೂರ್ವಕ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಅದು ಅಧಿಕಾರದ ಹತ್ತಿರಕ್ಕೂ ಬರುವುದು ಕಷ್ಟವೇನೋ! ಕನಿಷ್ಠ ಅದು ತಾನು ಯಾವ ಕಾರಣಕ್ಕೂ ಬಿಜೆಪಿ ಜೊತೆ ಸೇರುವುದಿಲ್ಲ ಎಂಬ ಘೋಷಣೆಯನ್ನಾದರೂ ಮಾಡಿ ತನ್ನ ಅವಕಾಶವಾದಿ ರಾಜಕಾರಣದ ಇತಿಹಾಸದ ಕಳಂಕವನ್ನಾದರೂ ತೊಳೆದುಕೊಳ್ಳಬೇಕು.

**-ಸಂಪಾದಕ**

# ಶಿವಮೊಗ್ಗದಲ್ಲಿ 'ಲೋಹಿಯಾ ನೆನಪು'




**ಶಿ**ವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಶಿವಮೊಗ್ಗದ ಪ್ರೆಸ್ ಟ್ರಸ್ಟ್‌ನ ಸಹಯೋಗದೊಂದಿಗೆ ಕಳೆದ ಮಾರ್ಚ್ ೨೩ರಂದು ಲೋಹಿಯಾರ ೧೦೮ನೇ ಜನ್ಮ ದಿನವನ್ನು 'ಲೋಹಿಯಾ ನೆನಪು' ಕಾರ್ಯಕ್ರಮವಾಗಿ ಆಯೋಜಿಸಿತ್ತು.

ಟಿ.ಎಲ್ ರೇಖಾಂಬ ಹಾಡಿದ ಕುವೆಂಪು ಅವರ ಗೀತೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಮೊದಲಿಗೆ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ. ಎಸ್. ನಾಗಭೂಷಣ ಅವರು, ಲೋಹಿಯಾ ಅವರು ತಮ್ಮ ಜೀವನವಿಡೀ ಯಾವ ಮೌಲ್ಯಗಳಿಗಾಗಿ ಹೋರಾಡಿದರೋ ಆ ಜಾತ್ಯತೀತ ಪ್ರಜಾತಂತ್ರ, ಸಂಸದೀಯ ರಾಜಕಾರಣ, ಮಾನವ ಹಕ್ಕುಗಳು, ಸಮಾನತೆ ಮತ್ತು ಪ್ರಜೆಯ ಖಾಸಗಿತನದ ಹಕ್ಕಿಗೆ ಇಂದು ಕುತ್ತು ಬಂದು ಪ್ರಜೆಗಳ ಕುತ್ತಿಗೆಗೆ ಆಧಾರ್ ಕಾರ್ಡ್‌ನ್ನು ತೂಗುಹಾಕಿ ಸರ್ಕಾರದ ಗುಲಾಮಗಿರಿಗೆ ತಳ್ಳುವ ಸರ್ಕಾರದ ಸನ್ನಾಹದ ಈ ದಿನಗಳಲ್ಲಿ ಲೋಹಿಯಾ ನೆನಪು ನಮಗೆ ಈ ಸನ್ನಾಹವನ್ನು ಎದುರಿಸುವ ಶಕ್ತಿಯನ್ನು ನೀಡಬಹುದು ಎಂದರು.

ಮಾಜಿ ಶಾಸಕ ಕೋಣಂದೂರು ಲಿಂಗಪ್ಪ ಅವರು ಲೋಹಿಯಾ ಕುರಿತ ಒಂದು ಸ್ವರಚಿತ ಕವನ ವಾಚಿಸುವುದರೊಂದಿಗೆ ಕಾರ್ಯಕ್ರಮ ವಿಧ್ಯುಕ್ತವಾಗಿ ಆರಂಭವಾಯಿತು. ನಂತರ ಮಾತನಾಡಿದ ಮುಖ್ಯ ಅತಿಥಿಗಳಲ್ಲಿ ಒಬ್ಬರಾದ ಪ್ರೊ. ಎಂ.ಬಿ. ನಟರಾಜ್ ಅರವತ್ತರ ದಶಕದಲ್ಲಿ ಲೋಹಿಯಾ ಮಾಡಿದ ಪ್ರಧಾನಿ ನೆಹ್ರೂ ಅವರ ದೈನಂದಿನ ಸಾವಿರಾರು ರೂಪಾಯಿಗಳ ವೆಚ್ಚಕ್ಕೆ ಹೋಲಿಸಿದಂತೆ ದೇಶದ ಶ್ರೀಸಾಮಾನ್ಯನ ದೈನಂದಿನ ಆದಾಯ ಕೇವಲ ಎರಡು ಆಣೆ ಮಾತ್ರವಾಗಿರುವ ಕಟು ವಾಸ್ತವದ ವಿಶ್ಲೇಷಣೆ ದೇಶದ ಜನರನ್ನು ಬೆಚ್ಚಿಬೀಳಿಸಿತು ಎಂದರು. ಮತ್ತೋರ್ವ ಮುಖ್ಯ ಅತಿಥಿ ಹಿರಿಯ ಸಮಾಜವಾದಿ ಪುಟ್ಟಯ್ಯನವರು ಎಂದಿಗೂ ಜನಸಾಮಾನ್ಯರ ಜೊತೆ ಗುರುತಿಸಿಕೊಂಡಿದ್ದ ಲೋಹಿಯಾ ತಮ್ಮ ಅಕಾಲಿಕ ಸಾವಿಗೆ ಕಾರಣವಾದ ಅನಾರೋಗ್ಯಕ್ಕೆ ದೇಶ ವಿದೇಶಗಳ ಪರಿಣತರ ವೈದ್ಯೋಪಚಾರವನ್ನು ನಿರಾಕರಿಸಿ ಸರ್ಕಾರಿ ಆಸ್ಪತ್ರೆಯೊಂದಕ್ಕೆ ಸೇರಿಕೊಂಡಿದ್ದನ್ನು ಸ್ಮರಿಸಿಕೊಂಡರು.

ನಂತರ ಎಂ. ರಾಜು, ಶೃಂಗೇಶ್, ಸುಮನಸ, ಮಂಜುಳಾ ರಾಜು, ಎನ್. ಎಂ.ಕುಲಕರ್ಣಿ ಅವರು ಸಮಾಜವಾದಿ ತತ್ವ ಮತ್ತು ರಾಜಕಾರಣದ ವಿವಿಧ ಆಯಾಮಗಳನ್ನು ಪರಿಚಯಿಸುವ ಲೋಹಿಯಾ ಕೃತಿಗಳಿಂದ ಆಯ್ದ ಭಾಗಗಳನ್ನು ವಾಚಿಸಿದರು. ಈ ವಾಚನಗಳ ಮಧ್ಯೆ ಸವಿತಾ ನಾಗಭೂಷಣ ಲೋಹಿಯಾ ಅವರ 'ರಾಮ ಕೃಷ್ಣ ಶಿವ' ಲೇಖನದಿಂದ ಸ್ಫೂರ್ತಿ ಪಡೆದು ತಾವು ರಚಿಸಿದ ಕವನವೊಂದನ್ನು ವಾಚಿಸಿದರು ಕೊನೆಯಲ್ಲಿ ಹೊನ್ನಾಳಿ ಚಂದ್ರು ಅವರು ಲೋಹಿಯಾ ಕುರಿತು ಕನ್ನಡದ ಹಿರಿಯ ಕವಿ ಎಚ್.,ಎಂ. ಚನ್ನಯ್ಯನವರು ಬರೆದ ಕವಿತೆಯೊಂದನ್ನು ವಾಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗ ಪ್ರೆಸ್ ಟ್ರಸ್ಟ್‌ನ ಅಧ್ಯಕ್ಷ ಮಂಜುನಾಥ್ ಅವರು ಇಂದಿನ ಬರೀ ಸುಳ್ಳಿನ ರಾಜಕಾರಣದ ದಿನಗಳಲ್ಲಿ ಲೋಹಿಯಾ ಅವರ ಸತ್ವದ ರಾಜಕಾರಣದ ದಿನಗಳ ನೆನಪುಗಳು ಹೋರಾಟದ ಕೆಚ್ಚನ್ನು ಮೂಡಿಸಬಲ್ಲುದು ಎಂದರು.

ಪತ್ರಕರ್ತ ಮತ್ತು ರಂಗಕರ್ಮಿ ಹೊನ್ನಾಳಿ ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು. ಇನ್ನೋರ್ವ ಪತ್ರಕರ್ತ ಮತ್ತು ಸಾಮಾಜಿಕ ಹೋರಾಟಗಾರ ಶೃಂಗೇಶ ಕಾರ್ಯಕ್ರಮ ನಿಯೋಜನೆಯಲ್ಲಿ ನೆರವಾಗಿದ್ದರು.

(ವರದಿ : **ಸವಿತಾ ನಾಗಭೂಷಣ**)

---

## ನಿಮ್ಮ ಪತ್ರ

**ಪ್ರಿ**ಯ ಸಂಪಾದಕರೇ,

ಈ ಬಾರಿಯ ಮಹಿಳಾ ವಿಶೇಷ ಸಂಚಿಕೆ ಸ್ವಸ್ಥ ಸಮಾಜದ ತಳಹದಿಯಾದ ಸಮಾನತೆಯ ಮುಖ್ಯ ಭೂಮಿಕೆಯಾದ ಲಿಂಗ ಸಮಾನತೆಯ ಚಿಂತನೆಯ ಹಲವು ಆಯಾಮಗಳನ್ನು ಪರಿಚಯಿಸುತ್ತಾ ಚಿಂತನೆಗೆ ಹಚ್ಚಿದೆ. ಈ ಲಿಂಗ ಸಮಾನತೆ ಪಡೆಯುವಲ್ಲಿನ ಹಲವು ಹಾದಿಗಳನ್ನೂ, ಸವಾಲುಗಳನ್ನೂ ಅವುಗಳ ವೈಶಿಷ್ಟ್ಯದ ಜತೆಗೇ ಸೀಮಿತ ನೆಲೆಗಳನ್ನೂ ಆಯಾ ಹಾದಿಯ ಪರಿಣಿತರ ಲೇಖನಗಳ ಮೂಲಕ ಪರಿಚಯಿಸಿದ ಈ ಸಂಚಿಕೆ ವಿಚಾರಪೂರ್ಣ.

ಜನ ಜಾಗೃತಿಗಾಗಿ ಅನಿವಾರ್ಯವಾದ ಹೋರಾಟದ ಮಾರ್ಗದ ಲೇಖನದಿಂದ ಹಿಡಿದು (ದು.ಸರಸ್ವತಿ, ಆರ್ ಪ್ರತಿಭಾ, ಸಬಿತಾ ಬನ್ನಾಡಿ) ಸ್ತ್ರೀ ತಾತ್ವಿಕ ನೆಲೆಗಳ ಚಿಂತನೆಯ ವರೆಗಿನ ಹರಹಿನ (ಲಕ್ಷ್ಮೀಶ ತೋಳ್ಪಾಡಿ, ತಾರಿಣಿ ಶುಭದಾಯಿನಿ) ಲೇಖನಗಳು, ಸವಿತಾ, ರೂಪ, ಕಾವ್ಯ ಅವರ ಕವನಗಳು, "ಅತ್ಯಾಚಾರ"ದಂತಹ ಪ್ರಸ್ತುತ ಸಮಸ್ಯೆಯ ನೆಲೆಗಳ ಕುರಿತ ಪ್ರಶ್ನೋತ್ತರ – ಎಲ್ಲ ಸೊಗಸಾಗಿ ಮೂಡಿಬಂದಿವೆ. ಲಕ್ಷ್ಮೀಶ ಅವರ ಹೆಣ್ಣು–ಗಂಡು ಕುರಿತ ಬದುಕಿನ ಸಾರ್ಥಕತೆಯ ಭಾಷ್ಯದಂತಿರುವ "ಲೋಕವನ್ನು ಹೆಣ್ಣು ಗಂಡೆಂದು ಎರಡಾಗಿ ನೋಡಿದರೆ, ಹೆಣ್ಣನ್ನು ತಿಳಿಯುವುದೇ ಗಂಡಿನ, ಗಂಡನ್ನು ತಿಳಿಯುವುದೇ ಹೆಣ್ಣಿನ ಸಾರ್ಥಕತೆಯಾಗಿ ಕಂಡುಬರುತ್ತದೆ. ಇದಕ್ಕಿಂತ ಹೆಚ್ಚಿನ ಉದ್ದೇಶವೇ ಬದುಕಿಗೆ ಇಲ್ಲವೇನೋ ಎನ್ನಿಸುತ್ತದೆ" ಮಾತು ಬಹು ಇಷ್ಟವಾಯಿತು ಹಾಗೂ ಈ ಸಂಚಿಕೆಯ ಮುಖ್ಯ ಕಾಣ್ಕೆ ಎಂದು ನನಗೆನಿಸಿತು. ಹಾಗೆಯೇ ಪ್ರಕಾಶ್ ರೈ ಕುರಿತ ಸಂಪಾದಕರ ಮಾತು ತುಸು ಅವಸರದ್ದೇನೋ ಎನಿಸಿತು.

–**ಅಶ್ವತ್ಥ**, ಶಿಕಾರಿಪುರ

ಮಹಿಳಾ ವಿಶೇಷ ಸಂಚಿಕೆಯಲ್ಲಿನ ರೂಪ ಹಾಸನ ಬರೆದ ಪದ್ಯ ನನ್ನನ್ನು ಇನ್ನೂ ಕಾಡುತ್ತಿದೆ. ದು. ಸರಸ್ವತಿ ಅವರ ಪದ್ಯ ಮತ್ತು ಆರ್.ಪ್ರತಿಭಾ ಅವರು ಗಾರ್ಮೆಂಟ್ಸ್ ಕಾರ್ಮಿಕರ ಬಗ್ಗೆ ಬರೆದಿರುವ ಲೇಖನ ವಾಸ್ತವ ಜಗತ್ತಿನ ಕಟುತ್ವದ ಅನಾವರಣ ಮಾಡಿವೆ; ಅನುಭವಜನ್ಯತೆ ಬರಹಕ್ಕೆ ಒಂದು ತೂಕ ತಂದಿವೆ.

ಹೆಣ್ಣಿನ ಮೇಲಿನ ಅತ್ಯಾಚಾರದ ಬಗೆಗಿನ ಟಿಪ್ಪಣಿಗಳಲ್ಲಿ ಶಾರದಾ ಗೋಪಾಲ ಅವರ ಬರಹ ಅವರ ಕ್ಷೇತ್ರಾನುಭವದ ಹಿನ್ನೆಲೆಯಿಂದಾಗಿ ಗಟ್ಟಿಯಾದುದು.

**–ಪ್ರೊ. ಶಿವರಾಮು ಕಾಡನಕುಪ್ಪೆ, ಮೈಸೂರು**

ಅರೆ! ಇದೇನಿದು, ಇಷ್ಟು ಚಿಕ್ಕ ಪತ್ರಿಕೆ. ಎಷ್ಟೊಂದು ಅಗಾಧ ವಿಷಯ. ಚರ್ಚೆ, ವಿಶ್ಲೇಷಣೆ. ನಿಜಕ್ಕೂ ಶ್ಲಾಘನೀಯ. ಈ ಮಾತು ಮೂರು ತಿಂಗಳಿಂದ ಈ ಪತ್ರಿಕೆ ಕೊಂಡು ಓದಿದಾಗಿನಿಂದ ಬಂದಿದೆ. ಮಾರ್ಚ್ ಮಾಹೆಯ ಮಹಿಳಾ ವಿಶೇಷ ಸಂಚಿಕೆ ಚಿಂತನೀಯ. "ಹೆಣ್ಣಿನ ಮೇಲೆ ಅತ್ಯಾಚಾರ:ಕೆಲ ಪ್ರಶ್ನೋತ್ತರಗಳು" ಬರಹ ಮತ್ತಿತರ ಲೇಖನಗಳು ಹಾಗು ಕವಿತೆಗಳು ಇಷ್ಟವಾದವು.

**–ನೂರುಲ್ಲಾ** ತ್ಯಾಮಗೊಂಡ್ಲು

ಗಂಡಸರು ಕೂಡ ಆತ್ಮೀಯವಾಗಿ ಸ್ವಾಗತಿಸುವಂತೆ ಈ ಮಹಿಳಾ ಸಂಚಿಕೆ ಹೊರಹೊಮ್ಮಿದೆ. ಸಂಪಾದಕೀಯ, ಸುದರ್ಶನ ರೆಡ್ಡಿ, ಸರಸ್ವತಿ ಸಾಲಾಗಿ ಓದಿಸಿಕೊಂಡರು. ತೋಳ್ಪಾಡಿ, ಸವಿತಾ, ರೂಪಾ, ಕಾವ್ಯಾ ಎಲ್ಲ ನಿರೀಕ್ಷೆಯ ಮೇಲಿನವರೇ! ಅತ್ಯಾಚಾರದ ಕುರಿತಾದ ಎಲ್ಲರ ಮಾತುಗಳಲ್ಲಿ ಸಾಕಷ್ಟು ಸಾಮ್ಯಗಳಿರುವುದು ಸಹಜವೇ. ಆರ್.ಪ್ರತಿಭಾರ ಗಾರ್ಮೆಂಟ್ ಲೇಖನ, ಪ್ರತಿಭಾ ಕಾವ್ಯ ಹಾಗು ವೈದೇಹಿ ಕತೆಗಳ ಬಗೆಗಿನ ಗುಣಮಟ್ಟದ ಬರೆಹಗಳು, ವಚನಕಾರ್ತಿಯರಲ್ಲಿಯ ಸ್ತ್ರೀತ್ವದ ಶೋಧಗಳು ಸಂಚಿಕೆಯ ಅಗತ್ಯಗಳಾಗಿವೆ. ಗೀತಾ ವಸಂತ, ಸಬಿತಾ ಹಾಗು ತಾರಿಣಿಯರು ಅಭಿನಂದನಾರ್ಹರು. ಇನ್ನು ವಿನಯಾರವರ ಕತೆಯಂತೂ ನಮ್ಮೊಳಗಿನವರನ್ನೇ ಮುಂದೆ ನಿಲ್ಲಿಸಿ, ಪರಿಚಯಿಸಿ ನಮ್ಮನ್ನು ಮೃದುವಾಗಿಸುತ್ತದೆ.ಈ ಎಲ್ಲದರ ನಡುವೆ ಮಹಿಳೆಯರ ಪುಸ್ತಕ ಪರಿಚಯಕ್ಕೂ ಜಾಗ ಮಾಡಿದ್ದೀರಿ. ಇದೊಂದು ಒಂದು ಮಾದರಿ ಮಹಿಳಾ ಸಂಚಿಕೆ. ಅಭಿನಂದನೆಗಳು.

.–**ವಿಜಯೇಂದ್ರ ಪಾಟೀಲ**, ಬೆಂಗಳೂರು

(೫ನೇ ಪುಟದಲ್ಲಿ ಇನ್ನಷ್ಟು ಪತ್ರಗಳು)

# ನವಿಲುಗರಿ


ಚಿತ್ರ : ಸಂಘಮಿತ್ರೆ

## ಶಿಲಾ–ಬಾಲಿಕೆ

ಒಳನುಗ್ಗಿದಂತೆ ಎದುರಾದದ್ದು
ಗೋಡೆಗೊರಗಿ ನಿಂತ
ಶಿಲಾ ಬಾಲಿಕೆ.

ಆ ನಿಮೀಲಿತ ನೇತ್ರೆಯ ಮೈ ಮೇಲೆ
ಹಬ್ಬಿದ್ದವು ಶಿಲಾ ವಲ್ಲರಿಗಳು
ಸೊಂಟವನ್ನಪ್ಪಿಕೊಂಡಿತ್ತು ಒಡ್ಯಾಣ
ಮುಖದಲ್ಲಿ ಹೊರಹೊಮ್ಮಿದಂತಿತ್ತು
ಶಿಲಾಸ್ಮಿತ!ನೋಡುತ್ತಿದ್ದಂತೆಯೇ

ಕಣ್ಣುಗಳು ನನ್ನ ಕಡೆ ಚಲಿಸಿದವು
ಒಡ್ಯಾಣ ಕಣ್ತೆರೆದು ಗಿಲುಕೆಂದಿತು–
ಮೆಲು ನಗುವಿನ ಪುಟಾಣಿ ಅಲೆಗಳು
ನನ್ನ ಮೈ ಸ್ಪರ್ಶಿಸಿ,
ರೋಮಾಂಚನಗೊಳಿಸಿದವು.

ನಿಧಾನ
ಗೋಡೆಯಿಂದೆದ್ದ ಆ ಬಾಲಿಕೆ
ನನ್ನತ್ತ ನಡೆದು ಬಂದು
ಕೈ ಹಿಡಿದು,ನಡೆಸಿದಳು ಸುತ್ತ.ಹಿಡಿದ ಕೈ ತಣ್ಣಗಿತ್ತು

ಮೈ ಮುಟ್ಟಿದರೆ
ರಕ್ತದ ಹರಿವಿರದಂತಿತ್ತು
ಲಾಲಿತ್ಯದ ಬದಲು ಕಾಠಿಣ್ಯದ
ಯಾಂತ್ರಿಕ ನಡೆಯಿತ್ತು
ಮೆಲು ನಗು ನಿಧಾನಕ್ಕೆ
ಕರ್ಕಶವಾಗುತ್ತಾ ಹೋಯಿತು.



ಗಾಬರಿಯಲ್ಲಿ ಮೈ ಮುಟ್ಟಿಕೊಂಡೆ
ಮೈಯಿಡೀ ಶಿಲೆಯಾಗಿತ್ತು
ಗೋಡೆಗೆ ಹೋಗಿ ಅಂಟಿಕೊಳ್ಳುವ
ಹಾದಿಯಲ್ಲಿತ್ತು!

**–ಸುಬ್ರಾಯ ಚೊಕ್ಕಾಡಿ.**

## ಸ್ವಯಂಸಂಭ್ರಮೆ!

ಮಜ್ಜನದ ತೊಟ್ಟಿಯಲಿ ಅತಿಲೋಕ ಸುಂದರಿ ಅಸುನೀಗಿದರು
ನಾಟ್ಯವಾಡುತ್ತಲೇ ನೀಲಾಂಜನೆ ನೀರವತೆಗೆ ಜಾರಿದರು
ಸ್ವಯಂಸಂಭ್ರಮೆ ಗೋಡೆಗೆ ಬಣ್ಣ ಹಚ್ಚುವುದನ್ನು
ಬಿಡುವುದಿಲ್ಲ

ಮೂಟೆ ಕಟ್ಟಿಟ್ಟ ಸಿರಿಯಾ ಮಕ್ಕಳ 'ಸಾಲು ಹೆಣ'ದ ಚಿತ್ರ
ಕಂಡರೆ ಸಿಕ್ಕ ಮಕ್ಕಳೆಲ್ಲ ತನ್ನವೇ ಎಂಬಂತೆ ಮುತ್ತಿಟ್ಟು
ಬೀದಿಯಲ್ಲಿ ಬಿದ್ದ ನೆತ್ತರಲ್ಲಿ ಹೊಸ ನಾಳೆಯ ಸೂರ್ಯನ
ಬಿಡಿಸುತ್ತಾಳೆ

ಯಾರೋ ಕಣ್ಣಿಗೆ ಮಣ್ಣು ಕೆಸರೆರೆಚಿ ಮಾಯವಾದರು
ಓಕುಳಿಯ ರಂಗು ಮುಖಕ್ಕೆ ಮೆತ್ತಿಕೊಂಡ ಖುಷಿಯಲ್ಲಿ
ಕಣ್ಣು, ತುಟಿಗಳಲ್ಲಿ ಹೊಳಪು ಸೂಸುತ್ತ ದಿವ್ಯತೆಯಲ್ಲಿ
ಮೀಯುತ್ತಾಳೆ

ಅನಾಥತೆಯೇ ನೆವವಾಗಿ ಕಲ್ಲೇಟು ತಿಂದ ಬೀದಿ ನಾಯಿ
ಕುರ್ರೋ ಮರ್ರೋ ಎಂದು ದಿಕ್ಕೆಟ್ಟು ಓಡಿ ನರಳುವಾಗ
ತಪ್ಪಲೆಯಲ್ಲಿ ಹಾಲನ್ನ ಕಲೆಸಿ ಮನೆಯೆದುರು ಕೂತು
ತುತ್ತುಣಿಸುತ್ತಾಳೆ



ನಿಮ್ಮ ಕೆಣಕು, ಕೆಸರು, ಕ್ರೌರ್ಯ, ಕಚಡಾತನಗಳೆಲ್ಲ
ಬೆಳಕು ಬಣ್ಣವಾಗಿ, ಹಸಿರಾಗಿ, ಜೀವದುಸಿರಾಗಿ
ಸ್ವಯಂಪ್ರಭೆಯ ಸೂರ್ಯ ಚುಕ್ಕೆಗಳಾಗುವುದನ್ನು
ತಪ್ಪಿಸಲಾಗುವುದಿಲ್ಲ!

**–ಎಂ.ಆರ್.ಕಮಲ**

## ರಕ್ತ ರುಚಿಯಾಗಿದೆ!

ಕುರಿ ಕೋಳಿಯ ರಕ್ತದ
ರುಚಿ ಗೊತ್ತಿರುವ ನನಗೆ
ಮನುಷ್ಯರ ರಕ್ತದ
ರುಚಿ ತಿಳಿದಿಲ್ಲ.


ಚಿತ್ರ : ರೂಪ ಹಾಸನ

ಮಾರಿಹಬ್ಬದಲ್ಲಿ
ದೇವರಕಾರ್ಯಗಳಲ್ಲಿ
ಪ್ರಾಣಿಬಲಿ ಕೊಡುತ್ತೇನೆ.
ನರಬಲಿ ನನಗೆ
ತಿಳಿದಿಲ್ಲ.

ಖುಷಿಯಾದಾಗ
ಮನಸು ಬಯಸುತದೆ
ಮಾಂಸದೂಟವನ್ನು.
ಅದಕಾಗಿ ಹೊಂಚು
ಹಾಕುವುದಿಲ್ಲ, ಕತ್ತಲಿಗಾಗಿ
ಕಾಯುವುದೂ ಇಲ್ಲ,
ಕತ್ತಿಯೂ ಬೇಕಿಲ್ಲ.

ಕೊಯ್ದ ಆ ಪ್ರಾಣಿಗಳನ್ನು
ಬೀದಿಯಲ್ಲಿ
ಹರಾಜಿಗಿಡುವುದಿಲ್ಲ.
ರಾಜಕಾರಣ ತಿಳಿದಿಲ್ಲ
ಓಟು ನನಗೆ ಬೇಕಿಲ್ಲ.

ನನ್ನ ಊಟ ನನದು.
ಅದಕೆ
ಇನ್ನೊಬ್ಬರ ಬಗ್ಗೆ
ದ್ವೇಷವೂ ಇಲ್ಲ
ಪ್ರೀತಿಯೂ ಇಲ್ಲ



ಮನುಷ್ಯರ
ಮಾಂಸರಕ್ತದ
ರುಚಿ ಹತ್ತಿದವರ ಬಗ್ಗೆ ನನಗೆ ತಿಳಿದಿಲ್ಲ!?

**–ಪ್ರಕಾಶ್ ಮರ್ಗನಳ್ಳಿ**



ಏಪ್ರಿಲ್ ೧೪, ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನ

ಅಂಬೇಡ್ಕರ್ ನೆನಪು

# ಅಂಬೇಡ್ಕರ್-ಗಾಂಧಿ ಸಮೀಪೀಕರಣದ ಸಾಧ್ಯತೆಗಳನ್ನು ತೆರೆದಿಟ್ಟ 'ಸಮಾಸ್'

-ಯೋಗೇಶ್ ಎಸ್.



**ಅಂಬೇಡ್ಕರ್ ಅವರ ಮಗ ಪ್ರಕಾಶ್ ಅಂಬೇಡ್ಕರ್ ಮತ್ತು ಗಾಂಧೀಜಿಯ ಮೊಮ್ಮಗ ರಾಜ್‌ಮೋಹನ ಗಾಂಧಿಯವರು ಭಾಗವಹಿಸಿದ್ದ 'ಸಮಾಸ್' ಸಮಾವೇಶದಲ್ಲಿ ಅಂಬೇಡ್ಕರ್ ಮತ್ತು ಗಾಂದಿ ಅವರ ನಡುವೆ ಇರುವ ಸಮಾನ ಅಂಶಗಳನ್ನು ಗುರುತಿಸುವ ಮೂಲಕ ಅವರ ವಿಚಾರಗಳ ಒಂದು ವಿಶಿಷ್ಟ ಐಕ್ಯತೆಯನ್ನು ಸಾಧಿಸುವ ಮೂಲಕ ಸಾಂವಿಧಾನಿಕ ಮೌಲ್ಯಗಳಿಗೇ ಬೆದರಿಕೆ ಒಡ್ಡಿರುವ ಇಂದಿನ ರಾಜಕೀಯ ಸವಾಲನ್ನು ಎದುರಿಸುವ ಸಾಧ್ಯತೆಗಳ ಬಗ್ಗೆ ನಡೆದ ಚರ್ಚೆಯ ಮುಖ್ಯಾಂಶಗಳನ್ನು ಈ ವರದಿಯಲ್ಲಿ ನೀಡಲಾಗಿದೆ.-ಸಂ.**



**'ಸ**ಮಾಸ್' ಎಂದು ಕರೆಯಲ್ಪಡುವ, ದಕ್ಷಿಣಾಯನದ ಮೂರನೆಯ ರಾಷ್ಟ್ರೀಯ ಸಮ್ಮೇಳನವು ಜನವರಿ ೨೯ ಮತ್ತು ೩೦ ರಂದು ನಾಗಪುರದಲ್ಲಿನಡೆಯಿತು. ದಕ್ಷಿಣಾಯನದ ಪ್ರವರ್ತಕರಾದ ಗಣೇಶ್ ದೇವಿಯವರು ಈ ಹೆಸರಿನ ಪ್ರಸ್ತುತತೆಯ ಬಗ್ಗೆ ವಿವರಿಸುತ್ತಾ, 'ಸಮಸ್' ಎಂದರೆ ಅರ್ಥದ ವಿವಿಧ ಘಟಕಗಳನ್ನು ಒಂದುಗೂಡಿಸಿ ಹೊಸ ಅರ್ಥವನ್ನು ಮೂಡಿಸುವುದು ಎಂದು, ಹಾಗಾಗಿ ವಿವಿಧ ಚಿಂತನೆಗಳನ್ನು ಒಟ್ಟುಗೂಡಿಸುವ ಉದ್ದೇಶಶ ಈ ನಾಗಪುರ ಸಮಾವೇಶಕ್ಕೆ ಇರುವುದರಿಂದ ಇದನ್ನು ಸಮಾಸ್ ಎಂದು ಕರೆಯುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಡಾ|| ಬಿ. ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಯಶವಂತ್ ಅಂಬೇಡ್ಕರ್ ಮತ್ತು ಗಾಂಧೀಜಿಯವರ ಮೊಮ್ಮಗನಾದ ರಾಜ್‌ಮೋಹನ್ ಗಾಂಧಿ ಯವರುಗಳು ಕ್ರಮವಾಗಿ ವಾರ್ಧಾದ ಗಾಂಧೀಜಿಯವರ ಸೇವಾಗ್ರಾಮದಲ್ಲೂ, ಮತ್ತು ನಾಗಪುರದ ದೀಕ್ಷಾಭೂಮಿಯಲ್ಲೂ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಸಮ್ಮೆಳನವು ದೇಶದ ಎಲ್ಲೆಡೆಯಿಂದ ಆಗಮಿಸಿದ್ದ, ಲೇಖಕರು, ಕಾರ್ಯಕರ್ತರು ಮತ್ತು ಕಲಾವಿದರ ಸಂಗಮವಾಗಿತ್ತು

ರವೀಂದ್ರನಾಥ ಟ್ಯಾಗೋರರ, *ಚಿತ್ತೋ ಜೇಥ ಭೋಯ್‌ಶುನ್ಯೋ* ಎಂಬ ಪದ್ಯದ ಸಾಲುಗಳ ಅನುವಾದವಾದ 'ಎಲ್ಲಿ ಮನವು ಭಯರಹಿತವಾಗಿರುವುದೋ'ಎಂಬ ಘೋಷಣೆಯ ಅಡಿಯಲ್ಲಿ ಅವರೆಲ್ಲರೂ ಒಂದಾಗಿದ್ದರು

ಐತಿಹಾಸಿಕ ವ್ಯಕ್ತಿಗಳಾದ ಅಂಬೇಡ್ಕರ್ ಮತ್ತು ಗಾಂಧೀಜಿ, ಇಬ್ಬರನ್ನೂ ಇಂದಿನ ಬಿ.ಜೆ.ಪಿ. ಸರ್ಕಾರವು ಬಳಸಿಕೊಳ್ಳುತ್ತಿದೆ. ಆಲಿ ಖಾನ್ ಮಹುದಾಬಾದ್ ಅವರು ಹೇಳುವಂತೆ 'ರಾಜಕೀಯ ಐಕಾನ್‌ಗಳನ್ನು ಬಹಳ ಸುಲಭವಾಗಿ ಹೀಗೆ ಬಳಸಿಕೊಳ್ಳಲಾಗುತ್ತಿದೆ. ಇತ್ತೀಚಿನ ದಿನಗಳ ವಿಶೇಷವಾಗಿ ಕಳೆದ ಎರಡು ವರ್ಷಗಳ ಬಿ.ಜೆ.ಪಿ.ಯ ಭಾಷಾವೈಖರಿಯ ಒಂದು ಲಕ್ಷಣವೆಂದರೆ, ಅವರು ಸ್ವಾಧೀನ ಪಡಿಸಿಕೊಂಡ ವ್ಯಕ್ತಿಗಳ ಭಾಷೆಯನ್ನು ತಮ್ಮ ಸ್ವಂತ ಭಾಷೆಯೊಡನೆ ಮೇಳೈಸಲು ಪ್ರಯತ್ನಿಸುವುದು ಈ ಅಪಹೃತ ಭಾಷೆಯು ಬಿಜೆಪಿಯ ಸ್ವಂತ ಭಾಷೆಯೊಡನೆ ಹೊಂದದೆ, ಅಸಂಬದ್ಧವೆನಿಸುವಂತೆ ಉಳಿಯುವುದು. ಈ ಇಬ್ಬರು ನಾಯಕರ ತಾತ್ವಿಕತೆ ಮತ್ತು ಕಾರ್ಯಗಳು, ಜಾತ್ಯತೀತತೆಯ ವಿರೋಧಿ, ಸಂವಿಧಾನ ವಿರೋಧಿ ಹಾಗೂಬಿಜೆಪಿ ಮತ್ತು ಆರ್‌ಎಸ್‌ಎಸ್‌ಗಳ ಹಿಂಸಾತ್ಮಕ ತಾತ್ವಿಕತೆಯ ಖಂಡನೆಗಳಾಗಿದ್ದವು. ವಿಶ್ವವಿದ್ಯಾಲಯಗಳಲ್ಲಿನ ಪ್ರತಿರೋಧದ ಎಡೆಗಳ ಮೇಲೆ ದಾಳಿ ನಡೆಸುತ್ತಿರುವ ಕೇಂದ್ರ ಸರ್ಕಾರವು ಇತಿಹಾಸದಲ್ಲಿ ಪ್ರಜಾಸತ್ತಾತ್ಮಕ ಭಾರತದ ನಿರ್ಮಾಣದಲ್ಲಿ ಸಂಘ ಪರಿವಾರದ ಪಾತ್ರವೇನಾದರೂ ಇತ್ತೇ( ಅಥವಾ ಇರಲೇ ಇಲ್ಲವೇ) ಎಂಬುದನ್ನು ತಿಳಿಯಲು ತುಸು ಹಿಂದಕ್ಕೆ ಹೋಗಿ ನೋಡಬೇಕು. ಅಂಬೇಡ್ಕರ್ ಅವರ ಸಂವಿಧಾನವನ್ನು ವಿರೋಧಿಸುವ, ಗಾಂಧೀಜಿಯವರ ಸಾವನ್ನು ಸಂಭ್ರಮಿಸುವ ಜನರು ಈಗ ರಾಜ್ಯವನ್ನಾಳುತ್ತಿದ್ದು ಅವರು ರಾಜಾರೋಷವಾಗಿ ಸಾಂವಿಧಾನಿಕ ಹಕ್ಕುಗಳ ಮೇಲೆ ದಾಳಿ ನಡೆಸುತ್ತಾ, ದೇಶದ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಚೇತನವನ್ನು ನಾಶಗೊಳಿಸುತ್ತಿದ್ದಾರೆ.

ಈ ಈರ್ವ ನಾಯಕರ ನಡುವಿನ ಚರ್ಚೆ,ಮತ್ತು ಭಿನ್ನಾಭಿಪ್ರಾಯಗಳ ಮಧ್ಯೆ ಸಿಲುಕಿಕೊಂಡು ನಾವಿಂದು, ತಮ್ಮ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ, ಈ ಇಬ್ಬರೂ ನಾಯಕರು ಪರಸ್ಪರ ಸಂವಾದ ನಡೆಸುತ್ತಿದ್ದುದನ್ನೂ ಮತ್ತು ಅವರು ಹಿಂಸೆಗೆ ಅವಕಾಶ ನೀಡದುದನ್ನೂ ಮರೆತುಬಿಡುತ್ತೇವೆ. ದೇಶದಲ್ಲಿದ್ದ ಭಿನ್ನಾಭಿಪ್ರಾಯಗಳ ನಡುವೆಯೂ ಒಂದು ಸಂವಾದದ ಸಾಧ್ಯತೆಯಿದ್ದ ನಮ್ಮ ಪರಂಪರೆಯನ್ನು ಜ್ಞಾಪಿಸಿಕೊಳ್ಳುವುದು ಇಂದಿನ ತುರ್ತು. ಇದು ಇಂದಿನ ತುರ್ತು ಏಕೆಂದರೆ ಸಂವಾದದ ಪರಂಪರೆಯ ಮೇಲೆ ಇಂದು ವ್ಯವಸ್ಥಿತ ದಾಳಿಗಳು ನಡೆಯುತ್ತಿವೆ. ಜಾತಿವ್ಯವಸ್ಥೆಯ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರುಗಳ ರಾಜಕೀಯ ಹಾಗೂ ಸಾಮಾಜಿಕ ನಿಲುವುಗಳು ಭಿನ್ನವಾಗಿದ್ದವು.

ಅಂಬೇಡ್ಕರ್ ಅವರ ಪ್ರಸ್ತಾವನೆಯನ್ನು-ದಲಿತರಿಗಾಗಿ ಒಂದು ಪ್ರತ್ಯೇಕ ಮತ ಕ್ಷೇತ್ರ ಇರಬೇಕು ಎಂಬುದು-ಗಾಂಧೀಜಿ ವಿರೋಧಿಸಿದರು ಮತ್ತು ಇದರ ವಿರುದ್ಧ ಆಮರಣಾಂತ ಉಪವಾಸ ಕೈಗೊಂಡರು. ಇದು ಪೂನಾ ಒಪ್ಪಂದಕ್ಕೆ ಕಾರಣವಾಯಿತು. ಈ ಒಪ್ಪಂದದಿಂದಾಗಿ ದಲಿತರಿಗೆ ಪ್ರತ್ಯೇಕ ಮತ ಕ್ಷೇತ್ರವು ತಪ್ಪಿ ಹೋಯಿತು. ಆದರೆ ಶಾಸನ ಸಭೆಗಳಲ್ಲಿ ಅವರಿಗೆ ಮೀಸಲಾತಿ ದೊರೆಯಿತು. ಈ ಇಬ್ಬರು ನಾಯಕರ ನಡುವಿನ ಭಿನ್ನತೆಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎತ್ತಿ ತೋರಿಸಲು ಗಾಂಧೀಜಿಯವರ ಉಪವಾಸ ಸತ್ಯಾಗ್ರಹ,ಮತ್ತು ಪೂನಾ ಒಪ್ಪಂದದ ವಿಚಾರವನ್ನು ಸದಾ ಉಲ್ಲೇಖಿಸಲಾಗುತ್ತದೆ.

ಇಂದು ಜಾತಿ ಆಧಾರಿತ ತಾರತಮ್ಯಗಳ ಸುತ್ತಲಿನ ಚರ್ಚೆಗಳು ಜಾತಿ ನೀತಿಯು ಮೀಸಲಾತಿಗೆ ಮತ್ತು ಅದರಿಂದ ಉಂಟಾಗುವ ಉದ್ಯೋಗದ ಅವಕಾಶಗಳಿಗೆ ಮಾತ್ರವೇ ವ್ಯಾಪಿಸಿದೆಯೇನೋ ಎಂಬಂತೆ ನಡೆಯುತ್ತಿವೆ. ಗಾಂಧೀಜಿಯುವರು ಅಂಬೇಡ್ಕರ್ ಅವರ ಪ್ರಸ್ತಾಪವನ್ನು ಅಕಸ್ಮಾತ್ ಒಪ್ಪಿಕೊಂಡಿದ್ದರೂ ಸಹ ವಿಹೆಚ್‌ಪಿ ಯು ಅದನ್ನು ತೀವ್ರವಾಗಿ ವಿರೋಧಿಸುತ್ತಿತ್ತು, ಎಂದು ಪ್ರಕಾಶ್ ಅಂಬೇಡ್ಕರ್ ಅಭಿಪ್ರಾಯಪಟ್ಟರು. ಇದನ್ನು ಅನುಮೋದಿಸುತ್ತ ರಾಜ್ ಮೋಹನ್ ಗಾಂಧಿಯವರು, ಗಾಂಧೀಜಿ ಮತ್ತು ಅಂಬೇಡ್ಕರ್ ಅವರುಗಳ ನಾಯಕತ್ವದ ಮಾರ್ಗದರ್ಶನದಲ್ಲಿ ಭಾರತದ ಸಂವಿಧಾನವು ರೂಪುಗೊಂಡಿತು. ಅಭಿವ್ಯಕ್ತಿ, ಮತ್ತು ವಾಕ್‌ಸ್ವಾತಂತ್ರ್ಯಗಳ ಖಾತರಿ ನೀಡುವ ಈ ಸಂವಿಧಾನವೇ ಇಂದು ೧೯೨೦ ಮತ್ತು ೧೯೩೦ರಲ್ಲಿ ಕ್ರಿಯಾಶೀಲವಾಗಿದ್ದ ಸಿದ್ಧಾಂತಗಳ ವಲಯಗಳಿಂದ ಅಪಾಯವನ್ನೆದುರಿಸುತ್ತಿದೆ. ಎಂದರು.

ಪ್ರಕಾಶ್ ಅಂಬೇಡ್ಕರ್ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಗಾಂಧೀಜಿಯವರು ಮೀಸಲಾತಿಯ ವಿರುದ್ಧ ಇರಲಿಲ್ಲ; ಅದರೆ ದಲಿತರಿಗೇ ಪ್ರತ್ಯೇಕ ಮತಕ್ಷೇತ್ರವಿರಬೇಕೆಂಬ ಅಂಬೇಡ್ಕರ್ ಅವರ ಪ್ರಸ್ತಾವನೆಗೆ ಮಾತ್ರ ವಿರೋಧವಾಗಿದ್ದರು ಎಂದು ಹೇಳಿದರು. ಮೀಸಲಾತಿಯು ಯಾವ ರೀತಿಯಲ್ಲಿ ಜಾರಿಗೊಳ್ಳ ಬೇಕೆಂಬ ವಿಚಾರದಲ್ಲೂ ಇವರಿಬ್ಬರಲ್ಲೂ ಭಿನ್ನಾಭಿಪ್ರಾಯವಿದ್ದುದು ನಿಜ ಎಂಬುದನ್ನು ಅವರು ಒಪ್ಪಿದರು. ಈ ಇಬ್ಬರ-ಗಾಂಧೀಜಿ ಮತ್ತು ಅಂಬೇಡ್ಕರ್-ನಡುವಿನ ಭಿನ್ನಾಭಿಪ್ರಾಯಗಳನ್ನು, ಈ ಇಬ್ಬರ ತಾತ್ವಿಕತೆಗಳಿಂದ ಪ್ರೇರೇಪಿತವಾದ ರಾಜಕಾರಣಗಳನ್ನು ಒಂದರ ವಿರುದ್ಧ ಮತ್ತೊಂದನ್ನು ಎತ್ತಿ ಕಟ್ಟಲು ಬಳಸಿಕೊಳ್ಳಲಾಗುತ್ತಿದೆ ಎಂದೂ ಅವರು ಹೇಳಿದರು.

ಗಾಂಧೀಜಿ ಮತ್ತು ಅಂಬೇಡ್ಕರ್ ಅವರುಗಳು ಭಾರತದ ಎರಡು ವಿಭಿನ್ನ ವರ್ಗಗಳ ದೃಷ್ಟಿಕೋನಗಳನ್ನು ಪ್ರತಿನಿಧಿಸುತ್ತಿದ್ದರು. ಹಿಂದೂ ಸಮಾಜದಲ್ಲಿ ಅಂತರ್ಗತವಾಗಿರುವ ವರ್ಣಾಶ್ರಮದ ಮತ್ತು ಅದಕ್ಕೆ ಸಂಬಂಧಿಸಿದ ಇತರ ಜಾತಿ ಆಧಾರಿತ ತಾರತಮ್ಯಗಳ ರೂಪಗಳಲ್ಲಿರುವ ವ್ಯವಸ್ಥಾ ಹಿಂಸೆಯ ವಿರುದ್ಧದ ದೃಢವಾದ ಧ್ವನಿ ಅಂಬೇಡ್ಕರ್ ಅವರದ್ದಾಗಿತ್ತು. ಅಸ್ಪೃಶ್ಯತೆಯಂತಹ ಅಮಾನವೀಯ ಅಚರಣೆಗಳ ವಿರುದ್ಧದ ಹೋರಾಟವನ್ನು ಅವರು ಮುನ್ನಡೆಸಿದರು. ಇನ್ನೊಂದೆಡೆ ಬ್ರಿಟಿಷರ ವಸಾಹತುಶಾಹೀ ಆಳ್ವಿಕೆಯ ವಿರುದ್ದ ಅಹಿಂಸೆಯ ತತ್ವದ ಆಧಾರದ ಮೇಲೆ ಒಂದು ಪ್ರಬಲವಾದ ಸ್ವಾತಂತ್ರ್ಯ ಹೋರಾಟವನ್ನು ಗಾಂಧಿ ಮುನ್ನಡೆಸಿದರು. ಈ ಇಬ್ಬರೂ ಸಹ ಅಪಾರವಾದ ಜನಬೆಂಬಲವಿದ್ದ ಪ್ರಮುಖ ನಾಯಕರಾಗಿದ್ದರು.

ಆದರೆ ಅವರಿಬ್ಬರೂ ಭಿನ್ನವಾದ ನೆಲೆಗಳಲ್ಲಿ ನಿಂತಿದ್ದರು. ಅವರಿಬ್ಬರದ್ದೂ ವಿಭಿನ್ನವಾದ ಲೋಕದೃಷ್ಟಿ ಮತ್ತು ರಾಜಕಾರಣವಾಗಿತ್ತು.

ಗಾಂಧೀಜಿಯವರು ಕಣ್ಮರೆಯಾದ ದಿನವಾದ ಜನವರಿ ೩೦ ರಂದು ಸೇವಾಗ್ರಾಮದಲ್ಲಿ ನೆರೆದಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ, ಪ್ರಕಾಶ್ ಅಂಬೇಡ್ಕರ್ ಅವರು, ಅಂಬೇಡ್ಕರ್ ಅವರು ಒಂದು ದಮನಿತ ಮತ್ತು ಶೋಷಿತ ಜಾತಿಯಿಂದ ಬಂದವರಾಗಿದ್ದರು ಹಾಗಾಗಿ ಜಾತಿ ಶೋಷಣೆಯ ವಿರುದ್ಧದ ಹೋರಾಟಕ್ಕೆ ಜನರನ್ನು ಒಂದುಗೂಡಿಸುವುದು ಅವರಿಗೆ ಸಾಧ್ಯವಿತ್ತು ಎಂದರುಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ಹಿಂದೂ ಧರ್ಮದ ಬಗೆಗೆ ಅಭಿಪ್ರಾಯ ಭೇದಗಳಿದ್ದವೆಂಬುದನ್ನೂ ಪ್ರಕಾಶ್ ಅಂಬೇಡ್ಕರ್ ಅವರು ವಿವರಿಸಿದರು.

ದಲಿತರೆಲ್ಲರೂ ಹಿಂದು ಧರ್ಮವನ್ನು ಸಾರಾಸಗಟಾಗಿ ತಿರಸ್ಕರಿಸ ಬೇಕೆಂದು ಅಂಬೇಡ್ಕರ್ ಕರೆ ನೀಡಿದ್ದರು. ಸ್ವತಃ ತಾವೇ ಲಕ್ಷಾಂತರ ದಲಿತರ ಜೊತೆಗೂಡಿ, ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದರು. ಈ ಇಬ್ಬರು ನಾಯಕರ ನಡುವಿನ ಭಿನ್ನತೆಯನ್ನು ಎತ್ತಿ ತೋರಿಸಿದ ಪ್ರಕಾಶ್ ಅಂಬೇಡ್ಕರ್ ಅವರು ಈ ಸಂದರ್ಭದಲ್ಲಿ ಈ ಇಬ್ಬರೂ ನಾಯಕರು ಪರಸ್ಪರ ಹೊಂದಿದ್ದ ಸಂಬಂಧದ ಬಗ್ಗೆ ಒಂದು ಬಹುಮುಖ್ಯ ಮಾತನ್ನಾಡಿದರು. ಅವರು ಹೇಳಿದರು : 'ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಒಬ್ಬರನ್ನೊಬ್ಬರು ಒಪ್ಪುತ್ತಿರಲಿಲ್ಲ. ಅವರಿಬ್ಬರು ಬಹಳ ಭಿನ್ನವಾದ ನೆಲೆಗಳಲ್ಲಿ ನಿಂತಿದ್ದರು ಆದರೆ ಅವರು ತಮ್ಮ ವಿಚಾರಗಳ ನಡುವಿನ ಸಂವಾದವನ್ನು ಎಂದೂ ತಡೆಯಲಿಲ್ಲ. ಇಂದು ಇರುವ ವಿವಿಧ ರೀತಿಯ ದಮನಗಳನ್ನು ಗಮನಿಸುವ, ಅರ್ಥಮಾಡಿಕೊಳ್ಳುವ, ವಿಶ್ಲೇಷಿಸುವ ಸಾಧ್ಯತೆಯನ್ನು ನಮಗಿಂದು ದೊರಕಿಸಿಕೊಟ್ಟಿರುವುದು ಈ ಸಂವಾದವೇ'.

ರಾಜ್‌ಮೋಹನ ಗಾಂಧಿಯವರೂ ಸಹ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರುಗಳ ನಡುವಿನ ಭಿನ್ನಾಭಿಪ್ರಾಯ ಮತ್ತು ಚರ್ಚೆ ಬಗ್ಗೆ ಮಾತನಾಡಿ, ಅವರಿಬ್ಬರಿಗೂ ಸಹಮತವಿದ್ದ ವಿಚಾರಗಳ ಬಗೆಗೂ ಪ್ರಸ್ತಾಪಿಸಿದರು,. ವಾಕ್ ಸ್ವಾತಂತ್ರ್ಯ, ತಮಗೆ ಬೇಕಾದುದನ್ನು ನಂಬುವ ಸ್ವಾತಂತ್ರ್ಯ, ನಾಸ್ತಿಕನಾಗಿರುವ ಸ್ವಾತಂತ್ರ್ಯ, ಅಹಿಂಸೆಯಲ್ಲಿ ನಂಬಿಕೆ ಮುಂತಾದ ವಿಷಯಗಳ ಬಗ್ಗೆ ಅವರಿಬ್ಬರದ್ದೂ ರಾಜಿಯಿಲ್ಲದ ನಂಬಿಕೆ. ಇಂದು ದೇಶದೆಲ್ಲೆಡೆ ವ್ಯಾಪಿಸುತ್ತಿರುವ ಹಿಂಸೆಯ ಬಗ್ಗೆ ಮಾತನಾಡುತ್ತಾ, ಅಂಬೇಡ್ಕರ್ ಅವರು ಹೋರಾಟದ ಮೂಲಕ, ಚರ್ಚೆಗಳ ಮೂಲಕ ನಾವು ನಮ್ಮ ಹಕ್ಕುಗಳನ್ನು ಪ್ರತಿಪಾದಿಸಬೇಕೇ ಹೊರತು ಲಾಠಿ, ಮತ್ತು ಬಂದೂಕುಗಳ ಮೂಲಕವಲ್ಲ; ಬದಲಿಗೆ ಅಹಿಂಸಾತ್ಮಕ ಮಾದರಿಗಳ ಮೂಲಕ ಎಂಬುದಾಗಿ ಹೇಳುತ್ತಿದ್ದರು ಎಂದು ರಾಜ್ ಮೋಹನ್ ಗಾಂಧಿಯವರು ತಿಳಿಸಿದರು.

ರಾಜ್‌ಮೋಹನ್ ಗಾಂಧಿಯವರು ವಿಭಿನ್ನ ವಿಚಾರಗಳು ಮತ್ತು ಅಭಿಪ್ರಾಯಗಳನ್ನು ಒಂದು ಕಡೆ ತರುವಲ್ಲಿ 'ಸಮಾಸ್' ಸಾಧಿಸಿದ ಯಶಸ್ಸನ್ನು ಶ್ಲಾಘಿಸುತ್ತಾ ಎಲ್ಲೆಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರುಗಳ ಚೈತನ್ಯವಿರಬಹುದೋ ಅಲ್ಲೆಲ್ಲ, ಅವು ಇಂದು ಸಂಭ್ರಮ ಪಡುತ್ತಿರಬೇಕು ಎಂದರು. ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರುವ ಕಾರಣಕ್ಕಾಗಿ ಜನರು ದಾಳಿಗಳಿಗೆ ಒಳಗಾಗುತ್ತಿರುವ, ಕೊಲ್ಲಲ್ಪಡುತ್ತಿರುವ ಇಂದಿನ ದಿನಗಳಲ್ಲಿ, ವಿಭಿನ್ನ ವಿಚಾರಗಳನ್ನು ಹೊಂದಿರುವ ಜನರನ್ನು ಒಂದೆಡೆ ತರುವ ಕೆಲಸ ಬಹಳ ಮುಖ್ಯವಾದುದು ಎಂದೂ ಅವರು ಅಭಿಪ್ರಾಯಪಟ್ಟರು.

ಅಂಬೇಡ್ಕರ್‌ವಾದಿ ಮತ್ತು ಗಾಂಧೀವಾದಿ ಪ್ರಮುಖರು ಸಭೆಯನ್ನು ಕುರಿತು ಒಂದೇ ವೇದಿಕೆಯಲ್ಲಿ ಮಾತನಾಡುವಂತೆ ಮಾಡುವ ಮೂಲಕ, ಭಿನ್ನಾಭಿಪ್ರಾಯಗಳನ್ನು, ಭಿನ್ನ ವಿಚಾರಗಳನ್ನು, ಗೌರವಿಸುವ, ದೇಶದಲ್ಲಿ ವೈವಿಧ್ಯತೆಯನ್ನು ಪೊರೆಯುವ ನಮ್ಮ ಪರಂಪರೆಯನ್ನು ನಮಗೆ ನೆನಪಿಸುವ ವಿಷಯದಲ್ಲಿ 'ಸಮಾಸ್' ಯಶಸ್ವಿಯಾಯಿತು.

ವಿಚಾರವಾದಿ ನರೇಂದ್ರ ದಾಬೋಲ್ಕರ್, ಸಾಮಾಜಿಕ ಹೋರಾಟಗಾರ ಗೋವಿಂದ ಪನ್ಸಾರೆ, ವಿದ್ವಾಂಸರಾದ ಎಂ.ಎಂ. ಕಲ್ಬುರ್ಗಿಯವರುಗಳು ಕೊಲೆಯಾದ ಸಂದರ್ಭದಲ್ಲಿ ಭಾಷಾ ಶಾಸ್ತ್ರಜ್ಞರೂ ಮತ್ತು ಹೋರಾಟಗಾರರೂ ಅದ ಗಣೇಶ್ ದೇವಿಯವರಿಂದ 'ದಕ್ಷಿಣಾಯನ' ಅಭಿಯಾನವು ಪ್ರಾರಂಭಿಸಲ್ಪಟ್ಟಿತು. ಕೊಲೆಯಾದ ಈ ಮೂವರೂ ತಮ್ಮ ಪಾಂಡಿತ್ಯ, ಮತ್ತು ಹೋರಾಟಗಳ ಮೂಲಕ ಭಾರತೀಯ ಜನತಾ ಪಕ್ಷ ಮತ್ತು ಅದರ ಚಿಂತಕರ ಚಾವಡಿಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೋಮುವಾದಿ ಮತ್ತು ವಿಭಜನಾತ್ಮಕ ನೀತಿಗಳನ್ನು ವಿರೋಧಿಸುತ್ತಿದ್ದವರು. ಈ ಮಧ್ಯೆ ಈ ಕೊಲೆಗಳ ವಿರುದ್ಧ ಮತ್ತು ಕೊಲೆಗಾರರನ್ನು ಬಂಧಿಸುವಲ್ಲಿ ಪೋಲೀಸರ ವೈಫಲ್ಯದ ವಿರುದ್ಧ ಜನ ಜಾಗೃತಿ ಮೂಡಿಸುತ್ತಿದ್ದ ಹೋರಾಟಗಾರ್ತಿ ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಹತ್ಯೆ ಮಾಡಲಾಯಿತು.

ಈ ರಾಜಕೀಯ ಹತ್ಯೆಗಳು, ಆಡಳಿತಾರೂಢ ಸರ್ಕಾರದ ತಾತ್ವಿಕತೆಯನ್ನು ಪ್ರಶ್ನಿಸುವ, ಮತ್ತು ವಿರೋಧಿಸುವ, ಧೈರ್ಯ ಮಾಡಿದವರ ಕೊಲೆಗಳು ಮಾತ್ರ ಆಗಿರಲಿಲ್ಲ. ಅವು ದಾಬೋಲ್ಕರ್, ಪನ್ಸಾರೆ, ಕಲ್ಬುರ್ಗಿ ಮತ್ತು ಗೌರಿ ಯಂತಹವರು ಪ್ರತಿನಿಧಿಸಿದ ಮತ್ತು ರಕ್ಷಿಸಲು ಹೋರಾಡಿದ ಸಂವಿಧಾನಿಕ ಮೌಲ್ಯಗಳು, ಜಾತ್ಯತೀತ ತಾತ್ವಿಕತೆ, ಮತ್ತು ಈ ದೇಶದ ಪ್ರಜಾಸತ್ತಾತ್ಮಕ ನೆಯ್ಗೆಯ ಮೇಲಿನ ದಾಳಿಗಳೂ ಕೂಡ ಆಗಿದ್ದವು. ಇವರು ಸಂಘ ಪರಿವಾರದ ವಿಚಾರಗಳಿಗೆ ಎದುರಾಗಿ ನಿಂತ ಪ್ರಜಾಪ್ರಜಾಸತ್ತಾತ್ಮಕ ನಂಬಿಕೆಗಳನ್ನು ಪೊರೆದವರು. ಇವರುಗಳು ಏಕಾತ್ಮಕತೆಯನ್ನು ನಂಬಲಿಲ್ಲ, ವೈವಿಧ್ಯತೆಯನ್ನು ನಂಬಿದರು. ದಮನಿತರು ಮೇಲೆದ್ದು, ಯೋಚಿಸುವುದನ್ನು ಮತ್ತು ಪ್ರಶ್ನಿಸುವುದನ್ನು ಪ್ರಚೋದಿಸಿದರು. ಈ ಬಗೆಯ ಯೋಚಿಸುವ, ಪ್ರಶ್ನಿಸುವ, ಮತ್ತು ಭಿನ್ನವಾಗಿರುವ ಶಕ್ತಿಯನ್ನು ತಮಗೊದಗಿದ ಅಪಾಯವೆಂದು ಬಲಪಂಥೀಯ ಮೂಲಭೂತವಾದಿಗಳು ಬಗೆದರು.

ಅಂಬೇಡ್ಕರ್‌ವಾದಿ ಮತ್ತು ಗಾಂಧಿವಾದಿ ರಾಜಕಾರಣಗಳ ನಡುವೆ ಒಂದು ಸಂವಾದವನ್ನು ಉಂಟುಮಾಡುವ ಮೂಲಕ, ಸಂವಾದಕ್ಕೆ ಬೇಕಾದ ಅಸ್ಪದವೇ ಇಲ್ಲದಂತಾಗುತ್ತಿರುವ ಈ ಕಾಲದಲ್ಲಿ ಒಂದು ಅವಕಾಶದ ಹುಟ್ಟಿಗೆ 'ಸಮಾಸ್' ಕಾರಣವಾಗಿರುವುದು ಅತಿ ಮಹತ್ವದ ವಿಷಯವಾಗಿದೆ. ಈಗ ನಾವು ಕೇಳಬೇಕಾದ ಪ್ರಶ್ನೆಯೆಂದರೆ ಇಂತಹ ಹೆಚ್ಚು ಹೆಚ್ಚು ಅವಕಾಶಗಳನ್ನು ನಾವು ಸೃಷ್ಟಿಸುವುದು ಹೇಗೆ ? ಎಂಬುದು.

ಕೃಪೆ : ***ಜನತಾ,*** ಫೆಬ್ರುವರಿ, ೨೫, ೨೦೧೮)

(ಕನ್ನಡಕ್ಕೆ : **ಎಂ. ರಾಜು**)

## ಇನ್ನಷ್ಟು ಪತ್ರಗಳು

ಮಹಿಳಾ ವಿಶೇಷ ಸಂಚಿಕೆ ತುಂಬ ಚೆನ್ನಾಗಿ ಬಂದಿದೆ. ವಿನಯಾ ಅವರ ಕತೆ, ದು. ಸರಸ್ವತಿಯವರ 'ಕೋಲ್ಪ್ ಪ್ರಸಂಗ', ಲೋಹಿಯಾ ಅವರ ವಿಚಾರಗಳು ಮತ್ತು ಅವರ ನಡೆಗಳ ಪ್ರಸ್ತುತತೆ ಕುರಿತ ಬರಹಗಳು ಬಹು ಆಪ್ತವೆನಿಸಿದವು. ತೋಳ್ಪಾಡಿಯವರದ್ದು ಬಹಳ ಪ್ರಬುದ್ಧ ಲೇಖನ. ಗಂಡು–ಹೆಣ್ಣಿನ ಸಂಬಂಧದ ಎಲ್ಲ ಆಯಾಮಗಳನ್ನೂ ಅಧ್ಯಾತ್ಮಿಕ ಮತ್ತು ಪೂರ್ತಿ ಲೌಕಿಕ ನೆಲೆಯಲ್ಲಿ ಚಿಂತನೆಗೆ ಒಳಪಡಿಸಿದ್ದು ಬಹಳ ಮೆಚ್ಚುಗೆಯಾಯಿತು. ದೇಶ ಎದುರಿಸುತ್ತಿದ್ದ ಪ್ರಕ್ಷುಬ್ಧ ಕಾಲದಲ್ಲೇ ಗಾಂಧೀಜಿ ತಮ್ಮ ವ್ಯಯಕ್ತಿಕ ಜೀವನದಲ್ಲಿ ಅನೇಕ ಪ್ರಯೋಗಗಳನ್ನು ಮಾಡಲೆತ್ನಿಸಿದ್ದು ಬ್ರಹ್ಮಚರ್ಯವೇ ಎಲ್ಲದಕ್ಕೂ ಮದ್ದು ಎಂದು ತಿಳಿದದ್ದು, ಜಿನ್ನಾನನ್ನು ದೇಶ ವಿಭಜನೆ ಕುರಿತು ಎದುರಿಸಲು, ಆ ಮೂಲಕ ಶಕ್ತಿ ಸಂಚಯ ಮಾಡಿಕೊಂಡದ್ದು ಎಲ್ಲ ಎಷ್ಟು ವಿಚಿತ್ರ; ಆದರೂ ಸತ್ಯ. ಅವರ ಪ್ರಯೋಗ ಶಾಲೆ ಬಹಳ ದೊಡ್ಡದು. ಗೀತಾ ವಸಂತ ಅವೆರ ಲೇಖನವೂ ಚೆನ್ನಾಗಿದೆ. ಕುಟುಂಬ ಒಂದು ಬಂಧನವಾದರೆ, ಅಧಿಕಾರ, ಅದರಾಚೆಯ ಪೂರ್ಣ ಸ್ವಾತಂತ್ರ್ಯ ಶೋಧನೆಯು ಮತ್ತೊಂದು ರೀತಿಯ ತೊಡಕು, ತೊಡರುಗಳ ಕಗ್ಗಂಟಾಗಬಹುದು. ಒಟ್ಟಾರೆ ಗಂಡು ಹೆಣ್ಣಿಗೆ ಅಂಟಿದ ನಂಟಿನ ಕೊನೆಯ ಬಲ್ಲವರಾರು ಕಾಮಾಕ್ಷಿಯೇ ಎಂಬಂತೆ ಕೊನೆ ಮೊದಲಿಲ್ಲದ್ದು ಈ ಚರ್ಚೆ, ಜಿಜ್ಞಾಸೆ.

**–ವೆಂಕಟೇಶ ಮಾಚಕನೂರು,** ಧಾರವಾಡ

ಮಹಿಳಾ ವಿಶೇಷ ಸಂಚಿಕೆ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಇಡೀ ಸಂಚಿಕೆ ಮಹಿಳೆಯರ ವಿವಿಧ ರೀತಿಯ ಸಂಕಥನಗಳನ್ನೊಳಗೊಂಡಿದೆ. ಗ್ರಾಮ್ಯ ಭಾಷೆಯ ದು. ಸರಸ್ವತಿಯವರ ಕಣ್ಣು ತೆರೆಸುವ ಬರಹ, ಲಕ್ಷ್ಮೀಶ ತೋಳ್ಪಾಡಿಯವರ ಗಂಡು ಹೆಣ್ಣಿನ ಸಂಬಂಧಗಳ ಕುರಿತ ವಿವೇಚನೆ, ಸವಿತಾ ನಾಗಭೂಷಣ ಅವರ 'ದೇವಿ' ಕವಿತೆ, ಅತ್ಯಾಚಾರದ ಪ್ರಶ್ನೋತ್ತರ, ಆರ್. ಪ್ರತಿಭಾ, ಗೀತಾವಸಂತ ಮತ್ತಿತರರ ಬರಹಗಳು ಯೋಚಿಸುವಂತೆ ಮಾಡುತ್ತವೆ. ವಿಶೇಷವಾಗಿ 'ಗಾರ್ಮೆಂಟ್ಸ್ ಕೈಗಾರಿಕಾ ಲೋಕದ ಕೆಲ ನಿಷ್ಠುರ ಸತ್ಯಗಳು' ಲೇಖನ. ಸಂಗ್ರಹಯೋಗ್ಯ ಸಂಚಿಕೆ.

**–ಡಾ. ಚನ್ನೇಶ್ ಹೊನ್ನಾಳಿ,** ಶಿವಮೊಗ್ಗ

'ಹೊಸ ಮನುಷ್ಯ'ನ ಹಂಬಲದಲ್ಲಿ ಮೂಡಿರುವ ಮಾರ್ಚ್ ಸಂಚಿಕೆ 'ಹೊಸ ಬದುಕಿ'ನ ಹುಡುಕಾಟದ ದಾರಿಗಳನ್ನು ಓದುಗರ ಮುಂದಿರಿಸಿದೆ. ದು.ಸರಸ್ವತಿಯವರ ನಾಂದಿಯ ಹಾಡಿನಿಂದ ಆರಂಭಗೊಂಡು, ವೈದೇಹಿಯವರ ಕತೆಗಳ ಚರ್ಚೆ, ಪ್ರತಿಭಾ ನಂದಕುಮಾರ್ ಅವರ ಕಾವ್ಯಗಳ ನೋಟ, ಶರಣರ ಸ್ತ್ರೀಪರ ಚಿಂತನೆಗಳು...ಇತ್ಯಾದಿ ಲೇಖನಗಳು ಗಂಡು ಹೆಣ್ಣು ಸಮನಾಗಿ ಬಾಳಬೇಕೆಂಬ ಪ್ರೀತಿಯ ಒತ್ತಡವನ್ನು ಹೇರುತ್ತಿವೆ. ಚಿಂತನಾರ್ಹ ವಿಶೇಷ ಸಂಚಿಕೆ.

**–ಪ್ರಕಾಶ್ ಮರ್ಗನಹಳ್ಳಿ,** ಶಿವಮೊಗ್ಗ

ರಾಮಮನೋಹರ ಲೋಹಿಯಾ ಸ್ಮಾರಕ ಉಪನ್ಯಾಸ (ಭಾಗ-೨)

# ಇಂದೇಕೆ ನಾವು ಲೋಹಿಯಾರನ್ನು ನೆನಪಿಸಿಕೊಳ್ಳಬೇಕಿದೆ?

-ನ್ಯಾ. ಸುದರ್ಶನ ರೆಡ್ಡಿ



**ಈ ಉಪನ್ಯಾಸವು ಮುಖ್ಯವಾಗಿ ತಂತ್ರಜ್ಞಾನ ಕುರಿತಂತೆ ಲೋಹಿಯಾ ಅವರ ನೀತಿಯು ತಂತ್ರಜ್ಞಾನವು ನಮ್ಮ ಕಲ್ಪನೆಗಳನ್ನೂ ಮೀರಿ ಬೆಳೆಯುತ್ತಿರುವ ಇಂದಿನ ಸನ್ನಿವೇಶದಲ್ಲಿ ಎಂತಹ ಮುನ್ನೋಟಗಳಿಂದ ಕೂಡಿದ ಒಂದು ಸಂಕೀರ್ಣ ತತ್ವಜ್ಞಾನೀಯ ಮೀಮಾಂಸೆಯಾಗಿ ನಮ್ಮನ್ನು ಕಾಡುತ್ತದೆ ಎಂಬುದನ್ನು ಸಮಕಾಲೀನ ಅಧ್ಯಯನಗಳ ಉಲ್ಲೇಖಗಳ ಮೂಲಕ ವಿವರಿಸಿದ್ದಾರೆ. ಈ ವಸ್ತುವಿನಷ್ಟೇ ಈ ಉಪನ್ಯಾಸವೂ ಸಂಕೀರ್ಣವಾಗಿದ್ದು ಓದುಗರ ಸಾವಧಾನವನ್ನು ಬೇಡುತ್ತದೆ.**-ಸಂ.

**ಡಾ.**ಲೋಹಿಯಾರವರ ಆಲೋಚನೆ ಮತ್ತು ಹೋರಾಟಗಳಿಗೆ ಮುಖ್ಯ ಕಾಳಜಿಯಾಗಿದ್ದದ್ದು ಅವರ " ಏಕರೂಪಿ ಮನಸ್ಸಿನ" (ಮೊನೊಟೋನಿಕ್ ಮೈಂಡ್) ನಿರ್ಮಾಣದ ಬಗೆಗಿದ್ದ ಪ್ರಬಲವಾದ ವಿರೋಧ ಎಂದು ಹೇಳಲು ಇಚ್ಛಿಸುತ್ತೇನೆ. ಲೋಹಿಯಾರ ಈ ಅಭಿವ್ಯಕ್ತಿಯು ಅವರ ಬೃಹತ್ ಯಂತ್ರಗಳ ತಂತ್ರಜ್ಞಾನದ ವಿರೋಧದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದೆಂದು ಸಾಮಾನ್ಯವಾಗಿ ಎಲ್ಲರೂ ಅಭಿಪ್ರಾಯಪಡುತ್ತಾರೆ ಹಾಗೂ ಈ ದೃಷ್ಟಿಯಲ್ಲಿ ಅವರು ಸೂಚಿಸಿದ ಆರ್ಥಿಕ ರಾಜಕಾರಣದ ಪರಿಕಲ್ಪನೆಯು ಇ.ಎಫ್.ಶುಮಾಕರ್‌ರ 'ಸಣ್ಣದು ಸುಂದರ' ಎಂಬ ತತ್ವಕ್ಕೆ ಸಮವೆಂದೂ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಉದ್ಯೋಗಗಳನ್ನು ನಾಶಮಾಡದೆ ಅದನ್ನು ಹೆಚ್ಚಿಸುವ ಪರ್ಯಾಯ ತಂತ್ರಜ್ಞಾನದ ಶೋಧನೆಯ ಪರಿಕಲ್ಪನೆಗೆ ಸರಿಹೊಂದುತ್ತದೆ ಎಂಬ ಸರಳ ತೀರ್ಮಾನಕ್ಕೆ ಬಂದು ಬಿಡಬಹುದು. ಆದರೆ ಈ ಅಭಿಪ್ರಾಯವು ಭಾಗಶಃ ಸರಿಯಾದದ್ದೇ ಆದರೂ ಪೂರ್ಣವಾದದ್ದಲ್ಲ. ಅವರು ತಳವರ್ಗದ ಮತ್ತು ದುರ್ಬಲರ ಸಬಲೀಕರಣಕ್ಕೆ ಮತ್ತು ಸಶಕ್ತೀಕರಣದ ಪರವಾಗಿ ಸಾಕಷ್ಟು ವಾದಿಸಿದರು ಮತ್ತು ಜೀವಮಾನವಿಡೀ ಹೋರಾಟವನ್ನು ನೆಡೆಸಿದರು. ನಮ್ಮ ಹಳ್ಳಿಯ ಮಹಿಳೆಯರು ಅಂತಾರ್ಜಾಲವನ್ನು ಬಳಸಿ ತಮ್ಮ ಬೆಳೆಗಳಿಗೆ ಯಾವ ಮಾರುಕಟ್ಟೆಯಲ್ಲಿ ಹೆಚ್ಚು ದರ ನಿಗದಿಯಾಗಿದೆಯೋ ಕಂಡುಕೊಂಡು ಅಲ್ಲಿಗೆ ತಮ್ಮ ರೈತಾಪಿ ಪುರುಷರನ್ನು ಕಳಿಸುವ ಒಂದು ಸಾಧ್ಯತೆಯನ್ನು ಲೋಹಿಯಾರವರು ಅನುಮೋದಿಸುತ್ತಿರಲಿಲ್ಲವೆಂದು ಭಾವಿಸಿಕೊಳ್ಳಲು ಸಾಧ್ಯವೇ? ಅಥವಾ ಅಗಾಧ ಜ್ಞಾನದ ಆಗರವಾದ ಅಂತರ್ಜಾಲವೆಂಬ ತಂತ್ರಜ್ಞಾನವನ್ನು ನಮ್ಮ ಯುವ ಜನಾಂಗ ಎಟುಕಿಸಿಕೊಳ್ಳುವ ಪ್ರಯತ್ನವನ್ನು ನಿರಾಕರಿಸುತ್ತಿದ್ದರೆ? ಅನೇಕ ಸಂದರ್ಭಗಳಲ್ಲಿ ತಂತ್ರಜ್ಞಾನದ ಬಗೆಗಿನ ಅವರ ವಿಶ್ಲೇಷಣೆಯನ್ನು ಅವರೊಬ್ಬ ಕುರುಡು ವಿಜ್ಞಾನ ಮತ್ತು ತಂತ್ರಜ್ಞಾನದ ವಿರೋಧಿ ಎಂಬ ರೀತಿಯಲ್ಲಿ ಅರ್ಥೈಸಲಾಗುತ್ತದೆ ಮತ್ತು ಇಂದಿನ ಕುಖ್ಯಾತ ರಾಜಾಕಾರಣದ ಅವಿವೇಕಿ ಜನರಿಂದ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ ಲೋಹಿಯಾರ ವಿಚಾರಧಾರೆಯನ್ನು ಇಂದಿನ ಕ್ಷುಲ್ಲಕ ಮತ್ತು ಸಾಂಧರ್ಬಿಕ ವಿಸ್ತರಣೆಗಾಗಿ ಬಳಸಿಕೊಳ್ಳುವ ಸಣ್ಣತನವನ್ನು ತೊರೆದು, ಹೆಚ್ಚು ಆಳವಾಗಿ ಮತ್ತು ವಿವರವಾಗಿ ಅವಲೋಕಿಸಲು ಸಾಧ್ಯವಾಗಬೇಕು ಎಂದೆನಿಸುತ್ತದೆ.

ಲೋಹಿಯಾ ಅವರು ಪ್ರತಿಪಾದಿಸಿದ ವಿಚಾರಗಳ ಮೂಲ ತತ್ವಗಳನ್ನು ತಿಳಿದುಕೊಳ್ಳುವ ಮೊದಲು ನಾವು ಅವರು, ತಂತ್ರಜ್ಞಾನದ ಅನಿರ್ಬಂಧಿತ ಅಳವಡಿಕೆಯ ಅಪಾಯಗಳ ಬಗ್ಗೆ, ಸಮಾನತೆ ಮತ್ತು ಸಮಗ್ರ ಮಾನವ ಕಲ್ಯಾಣದ ಬಗೆಗಿನ ನೈತಿಕ ಕಾಳಜಿಗಳ ಪರಿವೆಯೇ ಇಲ್ಲದ ಸಾಮಾಜಿಕ ಆಯ್ಕೆಗಳ ಬಗ್ಗೆ, ಪ್ರಜಾತಾಂತ್ರಿಕ ಮೌಲ್ಯವ್ಯವಸ್ಥೆಯನ್ನು ವಿನಾಶಗೊಳಿಸುವ ಹುನ್ನಾರಗಳ ಬಗ್ಗೆ ಮತ್ತು ಸಾಮಾನ್ಯ ಜನರನ್ನು ದಾಸ್ಯಕ್ಕೀಡು ಮಾಡುವಂತಹ ಸಂರಚನೆಗಳ ಬಗೆಗೆ ಅವರಲ್ಲಿದ್ದ ಸೂಕ್ಷ್ಮ ಗ್ರಹಣ ಶಕ್ತಿ ಮತ್ತು ತೋರಿದ ಅಪಾರವಾದ ಕಾಳಜಿಗಳನ್ನು ನಾವು ಗುರುತಿಸಲೇಬೇಕು.

ನಾನು ಇತ್ತೀಚೆಗಷ್ಟೇ ಒಂದು ಪುಸ್ತಕವನ್ನು ಓದುತ್ತಿದ್ದೆ. 'ದಿ ಡ್ರೈವರ್ ಇನ್ ದಿ ಡ್ರೈವರ್‌ಲೆಸ್ ಕಾರ್;ಹೌ ಅವರ್ ಟೆಕ್ನಾಲಜಿಕಲ್ ಚಾಯ್ಸ್ ವಿಲ್ ಕ್ರಿಯೇಟ್ ದಿ ಫ್ಯೂಚರ್' ಎಂಬ ವಿವೇಕ್ ವಾಧ್ವಾ ಮತ್ತು ಅಲೆಕ್ಸ್ ಸಲ್ಕೆವೆರ್ ಅವರು ಬರೆದ ಪುಸ್ತಕವದು. ಅದರಲ್ಲಿ, ಈಗಾಗಲೇ ಅಸ್ತಿತ್ವದಲ್ಲಿರುವಂತಹ ಮತ್ತು ಅವಿಷ್ಕಾರಗೊಳ್ಳುತ್ತಿರುವಂಥ ತಂತ್ರಜ್ಞಾನವು ಮನುಷ್ಯ ಜನಾಂಗವನ್ನು ಬಾಧಿಸುತ್ತಿರುವಂತಹ ಅನೇಕ ಅನಿಷ್ಟಗಳನ್ನು ಮೂಲೋತ್ಪಾಟನೆ ಮಾಡುವಂತಹ ಸಾಮರ್ಥ್ಯವುಳ್ಳದ್ದಾಗಿದೆ ಎಂದು ಈಗಾಗಲೇ ಅಮರ್ತ್ಯಸೇನ್ ಅವರು ಹೇಳುತ್ತಾ ಬಂದಿರುವ ಅಂಶವನ್ನೇ ಇನ್ನಷ್ಟು ವಾಸ್ತವಾಂಶಗಳಿಂದ ಕೂಡಿದ ಚಿತ್ರಣಗಳೊಂದಿಗೆ ಲೇಖಕರು ಪ್ರತಿಪಾದಿಸುತ್ತಾರೆ. ಮುಂದುವರಿದು, ಆದರೆ ನಾವು ಮಾಡಿಕೊಳ್ಳುವ ಆಯ್ಕೆಗಳು ಮತ್ತು ಅದನ್ನು ಭದ್ರಪಡಿಸಲು ಆರಿಸಿಕೊಳ್ಳುವ ಮೌಲ್ಯಗಳ ಮೇಲೆ ಈ ಪರಿಹಾರಗಳು ಅವಲಂಬಿಸಿವೆ ಎನ್ನುತ್ತಾರೆ. ಇದೆಲ್ಲವೂ ಸರಿಯೆ. ಆದರೆ ಅವರು ಇನ್ನೊಂದು ಭಯಾನಕ ಸಂಗತಿಯೂ ಸಾಧ್ಯವೆಂದು ಹೇಳುತ್ತಾರೆ.. ಮನುಷ್ಯನೇ ದೇವರೆಂಬ ಅಹಂಭಾವದಿಂದ ಮೆರೆಯುತ್ತಿರುವ ಮತ್ತು ನೋಹ ಹರಾರಿ, ವಿವೇಕ್ ವಾಧ್ವಾ ಮತ್ತು ಅಲೆಕ್ಸ್ ಸಲ್ಕೆವೆರ್ ಅವರು ಪ್ರತಿಪಾದಿಸುತ್ತಿರುವಂತೆ ಕೃತಕ ಬುದ್ಧಿಮತ್ತೆಯಿಂದ ಮುನ್ನಡೆಸಲ್ಪಡುತ್ತಿರುವ ಈ ಜಗತ್ತಿನಲ್ಲಿ ಇನ್ನೊಂದು ಬೇರೆಯೇ ವಾಸ್ತವವೂ ಸಾಧ್ಯವಾಗುತ್ತಿರುವಂತೆ ತೋರುತ್ತಿದೆ. ಅವರು ಹೀಗೆ ವಿವರಿಸುತ್ತಾರೆ :

"ನಾವು ಒಂದು ಉದ್ಯೋಗ ರಹಿತ ಆರ್ಥಿಕತೆಯನ್ನು ಸೃಷ್ಟಿಸಲು, ಮನುಷ್ಯನ ಖಾಸಗಿತನವನ್ನು ಕೊನೆಗಾಣಿಸಲು, ಆಕ್ರಮಣಕಾರಿ ವ್ಯದ್ಯಕೀಯ ದಾಖಲೆಗಳ ಸಂರಕ್ಷಣೆ ಮತ್ತು ಹದಗೆಡುತ್ತಲೇ ಹೋಗುತ್ತಿರುವಂಥ ಆರ್ಥಿಕ ಅಸಮಾನತೆಯ ವಿಷಚಕ್ರ ಅನಾವರಣಗೊಳಿಸುವಂಥ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಅತ್ಯಂತ ಕಾತರದಿಂದ ಎದುರು ನೋಡುತ್ತಿರುವಂಥ ತಂತ್ರಜ್ಞಾನ ಚಾಲಿತ ಭವಿಷ್ಯವನ್ನು ಒಳಗೊಳಗಿಂದಲೇ ಹಾಳುಗೆಡುವಂಥ ಒಂದು ಮಹಾ ಅಸ್ಥಿರ, ಹಿಂಸಾತ್ಮಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಸಮರ್ಥರಾಗುತ್ತಿದ್ದೇವೆ. ಮತ್ತು ನಮ್ಮ ಅಜಾಗರೂಕತೆ ಮತ್ತು ಅವಿವೇಕದಿಂದಲೇ ನಾಗರಿಕತೆಯ ವಿನಾಶದ ಸುರುಳಿಯನ್ನು ಬಿಚ್ಚಿಡುತ್ತಿದ್ದೇವೆ"

ಇಂಥ ಒಂದು ರುದ್ರ ಭಯಾನಕ(ಡಿಸ್ಟೋಪಿಯನ್) ಚಿತ್ರಣವು ನಮ್ಮನ್ನೆಲ್ಲ ಬಡಿದೆಬ್ಬಿಸಿ ಚಳಿಯಲ್ಲೂ ಬೆವರುವಂತೆ ಮಾಡಬೇಕು. ನಮ್ಮ ಹೆಚ್ಚಿನ ಯುವಜನರಿಗೆ ಒಂದು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಕೊಡುವಂಥ ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ.. ಜಸ್ಟಿಸ್ ಜೀವನ್ ರೆಡ್ಡಿಯವರು ಗುರುತಿಸಿದ ಹಾಗೆ ಜೀವಿಸುವ ಹಕ್ಕಿನ ಅತಿ ಮುಖ್ಯವಾದ ಅಂಶವೆಂದು ಪರಿಗಣಿತವಾದ ಪ್ರತಿಯೊಬ್ಬರಿಗೂ ಕನಿಷ್ಠ ಹದಿನಾಲ್ಕು ವರ್ಷದವರೆಗೆ ಖಡ್ಡಾಯವಾಗಿ ಉಚಿತ ಮತ್ತು ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ ಕಾನೂನಿನ ಆನುಮೋದನೆ ಪಡೆದುಕೊಳ್ಳುವ ಬಗ್ಗೆ ನಮ್ಮ ಸಂಸತ್ತು ಒಂದು ಮಸೂದೆಯನ್ನು ರೂಪಿಸಲು ನಮ್ಮ ರಾಜಕಾರಣದ ಆಳುವವರ್ಗಗಳಿಗೆ ೧೪ ವರ್ಷಗಳು ಬೇಕಾಯಿತು.. ಒಂದು ದಶಕದ ನಂತರದ ಅವಧಿಯಲ್ಲೂ ಕಾಯ್ದೆಯ ಅನುಷ್ಠಾನವು ಅತ್ಯಂತ ಕಳಪೆಯಾಗಿದ್ದು ವಿವಿಧ ಪ್ರಾಂತ್ಯಗಳ ನಡುವೆ, ಮೇಲ್ಜಾತಿ ಕೆಳಜಾತಿ ಜನರ ನಡುವೆ, ನಗರ ಮತ್ತು ಹಳ್ಳಿಯ ನಡುವೆ ಅಸಮಾನತೆಯನ್ನು ಸೃಷ್ಟಿಯಾಗಿ ದೊಡ್ಡ ಬಿರುಕುಗಳು ಮೂಡತೊಡಗಿದವು. ಹತ್ತಿರದ ಭವಿಷ್ಯದಲ್ಲೇ ಪ್ರವೇಶ ಹಂತದ ಅನೇಕ ಉದ್ಯೋಗಗಳು ಕಣ್ಮರೆಯಾಗುತ್ತವೆಂದು/ ಕಡಿತವಾಗುತ್ತದೆಂದು ದೊಡ್ಡ ದನಿಯಲ್ಲಿ ಮಾತುಗಳು ಕೇಳಿಬರುತ್ತಿದೆ. ನೀತಿ ನಿರೂಪಕರು ನಮ್ಮ ಯುವಜನಾಂಗವು ಬಡತನದಿಂದ ಪಾರಾಗಲು ಯಾವ ತಂತ್ರಜ್ಞಾನ ಕ್ಷೇತ್ರದ ಮೇಲೆ ಭರವಸೆ ತಳೆದಿದ್ದರೋ ಅಲ್ಲೂ ಉದ್ಯೋಗಗಳು ಸೃಷ್ಟಿಯಾಗುವುದಿರಲಿ, ಇರುವಂತಹ ಉದ್ಯೋಗಗಳೂ ಮರೆಯಾಗುತ್ತಿವೆ.

ನಮ್ಮ ಅಪಾರವಾದ ಜನಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳದೆ ಪೋಲಾಗಲು ಬಿಟ್ಟರೆ ಆ ಜನಶಕ್ತಿಯೇ ಮಹಾ ಶಾಪವಾಗಿ ದೊಡ್ಡ ಅಲ್ಲೋಲಕಲ್ಲೋಲಗಳಿಗೆ ಕಾರಣವಾಗಬಹುದು. ಜನಜೀವನದ ಅವಸಾನದ ಗತಿಯು ಹೆಚ್ಚು ವೇಗವನ್ನು ಪಡೆದುಕೊಳ್ಳತೊಡಗಿದೆ ಎಂದು ಅನ್ನಿಸುತ್ತಿದೆ.ಕಳೆದ ಸುಮಾರು ೪೦ ವರ್ಷಗಳ ಅವಧಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದ ಪ್ರತಿಷ್ಠಿತ ವರ್ಗದ ಜನರು ಅಭಿವೃದ್ಧಿಯ ಹೆಸರಲ್ಲಿ ಪಟ್ಟು ಬಿಡದೆ ಜಾರಿ ಮಾಡುತ್ತಿರುವ ನವ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ಉದಾರೀಕರಣದ ವ್ಯವಸ್ಥೆಯ ಪರಿಣಾಮವಾಗಿ ಜಗತ್ತಿನಾದ್ಯಂತ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಥಾಮಸ್ ಪಿಕೆಟ್ಟಿ ಯವರು ಕಳೆದ ಐದು – ಹತ್ತು ವರ್ಷಗಳಿಂದ ಆರ್ಥಿಕತೆಯ ಬಗೆಗಿನ ಎಲ್ಲ ಸಭೆಗಳಲ್ಲಿ ಈ ವಿಷಯವನ್ನು ಚರ್ಚೆಯ ಮುನ್ನೆಲೆಗೆ ತರುವ ಅತ್ಯಂತ ನಿಷ್ಠುರ ಪ್ರಯತ್ನ ಮಾಡುತ್ತಿದ್ದಾರೆ. ಉಳ್ಳವರು –

ವಂಚಿತರ ನಡುವಿನ ಕಂದಕವು ಹೆಚ್ಚು ಆಳವೂ, ಅಗಲವೂ ಆಗುತ್ತಿದ್ದು ಅದನ್ನು ಕಡಿಮೆ ಮಾಡುವ ಯಾವ ಸಾಧ್ಯತೆಯು ಹತ್ತಿರದ ಭವಿಷ್ಯದಲ್ಲೆಲ್ಲೂ ಗೋಚರಿಸುತ್ತಿಲ್ಲ.

.ಎರಡನೇ ಕೈಗಾರಿಕಾ ಕ್ರಾಂತಿ ಮತ್ತು ವಸಾಹತೀಕರಣದ ಪರಿಣಾಮವಾಗಿ ಹುಟ್ಟಿಕೊಂಡ ಹೊಸ ರಾಷ್ಟ್ರಗಳ ನಡುವಿನ ಅಸಮಾನತೆಯ ಮಟ್ಟವನ್ನೇ ತೆಗೆದುಕೊಳ್ಳೋಣ. ಇಪ್ಪತ್ತನೇ ಶತಮಾನದ ಮಧ್ಯಕಾಲದಲ್ಲಿ ನಮ್ಮ ಆರ್ಥಿಕ ಮತ್ತು ಸಾಮಾಜಿಕ ವಿದ್ವಾಂಸರು ಮತ್ತು ನೀತಿ ನಿರೂಪಕರು ಈ ಅಸಮಾನತೆಯ ಅಂತರವನ್ನು ಇನ್ನು ಕೆಲವೇ ತಲೆಮಾರುಗಳ ಅವಧಿಯಲ್ಲಿ – ಹೆಚ್ಚೆಂದರೆ ಒಂದು ನೂರು ವರ್ಷಗಳಲ್ಲಿ –ಸಾಕಷ್ಟು ಕಡಿಮೆ ಮಾಡಬಹುದು ಎಂದುದನ್ನು ಕನಿಷ್ಠ ಬೌದ್ಧಿಕವಾಗಿಯಾದರೂ ಕಲ್ಪಿಸಿಕೊಳ್ಳಬಹುದಿತ್ತು . ಆದರೆ ಈಗ ವಿಷಯ ಹಾಗಿಲ್ಲ. ಅಸಮಾನತೆಗಳನ್ನು ನಿವಾರಿಸಲು ಸಾಧ್ಯವೇ ಇಲ್ಲ ಎಂಬಂತಾಗಿದೆ. ತಂತ್ರಜ್ಞಾನದ ಫಲವಾಗಿ ಸೃಷ್ಟಿಯಾದ ಹೆಚ್ಚು ಹೆಚ್ಚು ಮಾಹಿತಿ –ಚಾಲಿತ ಜಗತ್ತಿನಲ್ಲಿ 'ಮನುಷ್ಯನು ಸಾಮರ್ಥ್ಯ/ಅಧಿಕಾರಕ್ಕೋಸ್ಕರ ಜೀವನದ ಅರ್ಥಗಳನ್ನೇ ಬಿಟ್ಟು ಕೊಡಲು ಒಪ್ಪುತ್ತಿರುತ್ತಾನೆ' ಎಂದು ಯುವಲ್ ನೋಹ ಹರಾರಿ ಪ್ರತಿಪಾದಿಸುತ್ತಾನೆ. ಹೊಸ ಸಾಮರ್ಥ್ಯಗಳಿಂದ ಅವನು ಅನೇಕ ಅದ್ಭುತಗಳನ್ನು –ತನ್ನ ಸಾವನ್ನೂ ಗೆಲ್ಲಬಲ್ಲಂತಹ –ಸಾಕಾರ ಮಾಡಿಕೊಂಡುಬಿಡಬಹುದು. ಆದರೆ ಇಂಥ ಸಾಧ್ಯತೆಗಳಿಗೆ ತೆರುತ್ತಿರುವಂತ ದೊಡ್ಡ ಬೆಲೆ ಆ ಸಾಮರ್ಥ್ಯದ ಅಸಮಾನ ಮತ್ತು ಅಸಮರ್ಪಕ ಹಂಚಿಕೆಗೆ ಸಂಬಂಧಿಸಿದ್ದೇ ಆಗುತ್ತಿದೆ. ಇದು ಜಾಗತಿಕವಾಗಿ ಒಂದು ಪ್ರತಿಷ್ಠಿತ ಜನವರ್ಗದವರನ್ನು ಸೃಷ್ಟಿ ಮಾಡುತ್ತಿದೆ. ಟಿಮ್ ಆಡಮ್ಸ್ ರವರು *ಗಾರ್ಡಿಯನ್* ಪತ್ರಿಕೆಯಲ್ಲಿ ಈ ವಿಷಯವನ್ನು ಅತ್ಯಂತ ಸುಂದರವಾಗಿ ಮತ್ತು ಸಂಗ್ರಹವಾಗಿ ಹೀಗೆ ವಿವರಿಸಿದ್ದಾರೆ. "ತನ್ನ ತಾಂತ್ರಿಕ ಸಾಮರ್ಥ್ಯದಿಂದ ಗಳಿಸಿಕೊಂಡ ಈ ದೀರ್ಘಾಯುಷ್ಯದ ಮತ್ತು ಅತಿಮಾನುಷ ಶಕ್ತಿಗಳು ಕೇವಲ ಅತೀ ಶ್ರೀಮಂತರ ಮತ್ತು ಮಾಹಿತಿ ವಿಶ್ವದ ಒಡೆತನ ಹೊಂದಿದ ಜನರ ಪಾಲು ಮಾತ್ರವಾಗುವ ಎಲ್ಲ ಸೂಚನೆಗಳು ಕಾಣುತ್ತಿದೆ. ಆದರೆ ಈ ನಡುವೆ ದಕ್ಷ ಯಂತ್ರಗಳಿಂದ ಉಂಟಾದ ಅಪಾರವಾದ ಮಾನವ ಶ್ರಮದ ಉಳಿಕೆಯು ಯಾವುದೇ ಆರ್ಥಿಕ ಅಥವಾ ಮಿಲಿಟರಿ ಉಪಯುಕ್ತತೆ ಅಥವಾ ಉದ್ದೇಶವಿಲ್ಲದೆ ಒಂದು ಅಗಾಧ 'ಅನುಪಯುಕ್ತ ವರ್ಗವೊಂದು ಸೃಷ್ಟಿಯಾಗುತ್ತಿದೆ. ಇದರ ಅರಿವಿದ್ದೂ ಆಧುನಿಕ ಮಾನವನ ದೃಷ್ಟಿಕೋನದಲ್ಲಿ ಯಾವ ಬದಲಾವಣೆಯೂ ಆಗದಿದ್ದರೆ 'ಮಾಹಿತಿವಾದ' ಎಂಬ ಸಿದ್ಧಾಂತವು ಜಗತ್ತಿನಾದ್ಯಂತ ಒಂದು ಬಲವಾದ ಶ್ರದ್ಧೆಯಾಗಿ ಪಾವಿತ್ರ್ಯತೆಯನ್ನು ಪಡೆಯುತ್ತದೆ ಎಂದು ಹರಾರಿಯವರೂ ಹೇಳುತ್ತಿದ್ದಾರೆ.. ಇದೊಂದು ಯುಟೋಪಿಯನ್ನರಿಗೆ ಇದ್ದ ಸರ್ವಜ್ಞಾನಿ, ಸರ್ವ ವ್ಯಾಪಿ,–ದೇವರ ಪರಿಕಲ್ಪನೆಯಿಂದ ಹೆಚ್ಚೇನು ವ್ಯತ್ಯಾಸವಿಲ್ಲದ –ಮಾಹಿತಿ ಪರಿಷ್ಕರಣವೆಂಬ ವ್ಯವಸ್ಥೆಗೆ ಮಾನವ ಜನಾಂಗ ಸದಾ ಸಂಪರ್ಕದಲ್ಲಿರಬೇಕಾಧ ಒಂದು ;ಪರಿಪೂರ್ಣ ಏಕಮೇವ ಸ್ಥಿತಿ'ಯಾಗಿ ತೋರಿಬರುತ್ತದೆ. ಡಿಸ್ಟಾಪಿಯನ್ನರಿಗೂ(ಆಪಾಯಗಳನ್ನೇ ಕಾಣುವ)ಇದು ಒಂದು ರೀತಿಯಲ್ಲಿ ಹಾಗೆಯೇ ಕಾಣುತ್ತದೆ".

ಆದರೆ ಈ 'ಅತಿ ಪ್ರತಿಷ್ಠಿತ' ವರ್ಗವು ಜಗತ್ತಿನಲ್ಲಿ ರೂಪುಗೊಳ್ಳುತ್ತಿರುವ ಸುಳಿವು ನಮಗೆ ಈಗ್ಗೆ ಸಾಕಷ್ಟು ಸಮಯದಿಂದಲೇ ಸಿಕ್ಕಿತ್ತಲ್ಲವೇ? ದುರಾಸೆಯೆ ಒಂದು ದೊಡ್ಡ ಮೌಲ್ಯವೆಂದು ಒಪ್ಪಿಕೊಂಡು ಯಾವ ಸಂಪತ್ತಿನ ಸಂಗ್ರಹದಲ್ಲಿ ಬಿದ್ದಿದ್ದೆವೋ ಆ ಪ್ರಯತ್ನದಲ್ಲೇ ನಾವು ಜಗತ್ತಿನ ಮತ್ತು ಕೋಟ್ಯಂತರ ಜನರ ಜೀವನದ ಮೇಲೆ ತೀವ್ರವಾದ ಮತ್ತು ದೂರಗಾಮಿ ಪ್ರತಿಕೂಲ ಪರಿಣಾಮಗಳನ್ನು ಬೀರಬಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವ ಈ ಪ್ರತಿಷ್ಠಿತ/ವಿಶೇಷ ಜನವರ್ಗವನ್ನು ಸೃಷ್ಟಿ ಮಾಡಿಕೊಂಡುಬಿಟ್ಟಿದ್ದೇವೆ. ಅಂತಹವರ ನಿರ್ಧಾರಗಳು ಸ್ವಹಿತಾಸಕ್ತವೂ, ಪೈಶಾಚಿಕ ಸ್ವರೂಪದವೂ ಆಗಿದ್ದು ಅದರ ದುಷ್ಪರಿಣಾಮಗಳನ್ನು ಜಗತ್ತಿನ ಬಹುಸಂಖ್ಯಾತ ಜನರು ಅಸಹಾಯಕವಾಗಿ ಅನುಭವಿಸಬೇಕಾಗಿ ಬಂದಿದೆ.

ಮಾನ್ಯುಯಲ್ ಕ್ಯಾಸ್ಟಲ್ಸ್ ಎಂಬ ಒಬ್ಬ ವಿದ್ವಾಂಸ ಕ್ರಿ.ಶ. ೨೦೦೦ ದ ಇಸವಿಯಷ್ಟು ಹಿಂದೆಯೇ ಇದನ್ನು "ಜಾಲಬಂಧ ಆರ್ಥಿಕತೆ" (ನೆಟ್‌ವರ್ಕ್ ಎಕಾನಮಿ) ಎಂದು ಕರೆದಿದ್ದಾನೆ. ಆರ್ಥಿಕ ಅನಿಶ್ಚಿತತೆ ಬೆಳೆದಂತೆಲ್ಲ ಮತ್ತು ಅಸಮಾನತೆಯು ತೀವ್ರವಾದಂತೆಲ್ಲ ನಾಗರಿಕರು ಮಾನಸಿಕವಾಗಿ ಒಟ್ಟೂ ಸಮಾಜದ ಬಗೆಗಿನ ಸಂಬಂಧ ಮತ್ತು ಸಂಪರ್ಕವನ್ನು ಕಡಿದುಕೊಳ್ಳುತ್ತ ಬರುತ್ತಾರೆ. ಸಣ್ಣ ಸಣ್ಣ ಗುಂಪುಗಳಾಗಿ ಚದುರಿಕೊಂಡು ತಮ್ಮ ತಮ್ಮ ಅಸ್ಮಿತೆಯ ಉಳಿವಿಗಾಗಿ ಆದಿ ಯುಗದ ಪ್ರವೃತ್ತಿಗಳನ್ನು ಜಾಗೃತಗೊಳಿಸಿಕೊಂಡು ಯಾವುದೇ ಮಾರ್ಗವನ್ನು ಅನುಸರಿಸಲೂ ತಯಾರಾಗುತ್ತಾರೆ. ಸರ್ಕಾರ ಹಾಗು ನೀತಿ ನಿರೂಪಕರ ಬಗ್ಗೆ ಭರವಸೆಯನ್ನು ಕಳೆದುಕೊಂಡು ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ಕಳೆದುಕೊಂಡುಬಿಡುತ್ತಾರೆ. ಹೀಗೆ ಸರ್ಕಾರಗಳನ್ನು ಒತ್ತಾಯಿಸಿ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಶಕಿ ಮತ್ತು ಇಚ್ಛೆಗಳೆರಡನ್ನೂ ಕಳೆದುಕೊಳ್ಳುತ್ತಾರೆ. ಇಂತ ಪರಿಸ್ಥಿತಿಯು ಒಂದು ಉದಾರವಾದಿ ಪ್ರಜಾತಾಂತ್ರಿಕ ರಚನೆಗಳನ್ನೇ ಹಾಳುಮಾಡಿ ಮೂಲಭೂತವಾದಿ ಶಕ್ತಿಗಳು ಹುಟ್ಟಿಕೊಳ್ಳುವಂತೆ ಮಾಡುತ್ತದೆ ಎಂದು ಮಾನ್ಯುಯಲ್ ಕ್ಯಾಸ್ಟಲ್ಸ್ ಆಗಲೇ ಎಚ್ಚರಿಸಿದ್ದಾರೆ.

ಇತ್ತೀಚಿನ ಹಲವು ವರ್ಷಗಳ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ನಿಜಕ್ಕೂ ನಾವು ಸಂವಿಧಾನಕ್ಕೆ ಕಟಿಬದ್ಧವಾದ ಒಂದು ಉದಾರವಾದಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಉಳಿಸಿ ಕಾಪಾಡಿಕೊಳ್ಳಲು ಬೇಕಾದಂತಹ ಮೌಲ್ಯಗಳನ್ನೇ ಕಳೆದುಕೊಂಡು ಹಿಂದಕ್ಕೆ ಸರಿಯುತ್ತಿದ್ದೇವೆಯೋ ಎಂದೆನಿಸುತ್ತದೆ. ಎಲ್ಲೆಲ್ಲಿಯೂ ಛಿದ್ರ ಛಿದ್ರವಾದ ಜಗತ್ತು, ರಾಷ್ಟ್ರ ಮತ್ತು ಸಮಾಜಗಳಿಂದ ಅಸಮಾಧಾನದ ಮತ್ತು ಅವಿವೇಕದ ಕರ್ಕಶ ಚೀರಾಟಗಳು ಕೇಳಿಬರುತ್ತಿರುವುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತಿದೆ.

ಇಂತಹ ಬಿಕ್ಕಟ್ಟಿನ ಮತ್ತು ವಿಷಮ ಸ್ಥಿತಿಗೆ ಇಷ್ಟು ಬೇಗನೆ ಅದ್ಹೇಗೆ ಬಂದು ತಲುಪಿದೆವು? ಡಾ. ರಾಮಮನೋಹರ್ ಲೋಹಿಯಾರಂತಹವರ ಜ್ಞಾನದ, ವಿವೇಕದ ಯಾವ ಮಾತುಗಳನ್ನು ನಾವು ನಿರ್ಲಕ್ಷಿಸಿಬಿಟ್ಟೆವು?

ನನ್ನ ಪ್ರಕಾರ ಅವರು ಎಚ್ಚರಿಸಿದ "ಏಕತಾನದ/ಏಕ ಸ್ವರೂಪ'ದ (ಮೊನೊಟೊನಿಕ್ ಲಾಜಿಕ್ ಅಂಡ್ ಮೈಂಡ್) ವಿಚಾರ ಮತ್ತು ಮನಸ್ಸನ್ನು ಸೃಷ್ಟಿಸುವ ಹುನ್ನಾರಗಳು ಮತ್ತು ಅಪಾಯಗಳು ಮತ್ತು ಸಮಾಜದಲ್ಲಿ, ಅದರಲ್ಲೂ ವಿಶೇಷವಾಗಿ ಶೋಷಿತರು ಮತ್ತು ನಿರ್ಬಲೀಕರಣಕ್ಕೊಳಗಾದ ಜನರ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅವರ ಮಾರ್ಮಿಕವಾದ ಒಳನೋಟಗಳನ್ನು ನಾವು ಅರ್ಥ ಮಾಡಿಕೊಳ್ಳದೆ ನಿರ್ಲಕ್ಷಿಸಿದ್ದೇವೆ. ಲೋಹಿಯಾರವರ ಏಕಸ್ವರೂಪಿ ವ್ಯವಸ್ಥೆಯ ಅಪಾಯದ ಗ್ರಹಿಕೆಯ ಜೊತೆ ಜೊತೆಗೆ 'ನೈತಿಕತೆಯ ವಿವೇಚನೆಯನ್ನು ಕಳೆದುಕೊಂಡ ಕಾರ್ಯಗಳು ಕ್ರಿಯಾಪದವಿಲ್ಲದ ವಾಕ್ಯದಂತೆ' ಎಂಬ ಅವರ ಜೀವನದ ಸೂತ್ರವು ಅವರನ್ನು ಒಬ್ಬ ಉತ್ಕಟ ನಾಗರಿಕ ಸ್ವಾತಂತ್ರ್ಯದ ಮತ್ತು ಸಮಾನತಾವಾದಿ ಹಾಗು ಉದಾರವಾದಿ, ಸಾಂವಿಧಾನಿಕ ಪ್ರಜಾತಂತ್ರ ವ್ಯವಸ್ಥೆಯ ಪ್ರತಿಪಾದಕರನ್ನಾಗಿ ರೂಪಿಸಿ ಆ ಉದ್ದೇಶ ಸಾಧನೆಗಾಗಿ ತಮ್ಮ ಜೀವಮಾನದಾದ್ಯಂತ ಹೋರಾಡುವಂತೆ ಪ್ರೇರೇಪಿಸಿತು. ಅವರ ಆಲೋಚನೆಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಅವರು ಯಾವಾಗಲೂ ಏಕರೂಪವಲ್ಲದ /ಏಕತಾನವಲ್ಲದ ಹಾಗೂ ಬಹುತ್ವವನ್ನು ಮಾನ್ಯ ಮಾಡುವ ವ್ಯವಸ್ಥೆಯ ಪರಿಕಲ್ಪನೆಯ ನೆಲೆಯಿಂದ ಹುಟ್ಟಿಕೊಳ್ಳುವ ಹೊಸ ಹೊಸ ಹೊಳಹು, ಒಳನೋಟ ಮತ್ತು ಜ್ಞಾನದಿಂದ ಮತ್ತು ದಿನ ನಿತ್ಯ ಜೀವನದಲ್ಲಿ ಎದುರಿಸುವ ಸನ್ನಿವೇಶಗಳಲ್ಲಿ ನಮ್ಮ ವಿವೇಕ ಮತ್ತು ವಿವೇಚನೆಯ ಬಳಕೆಯಿಂದ ಒದಗುವಂತಹ ತಿಳುವಳಿಕೆ ಮತ್ತು ಗ್ರಹಿಕೆಗಳು ಇರುತ್ತಿದ್ದವು. ಮತ್ತು ಹೊಸ ಮಾಹಿತಿ ಮತ್ತು ವಿಚಾರಗಳ ಆಧಾರದಲ್ಲಿ ಅವನ್ನು ಮರುನಿರೂಪಿಸಿಕೊಳ್ಳುವ ಅಥವಾ ರದ್ದುಮಾಡಿಕೊಳ್ಳುವ ಸಾಧ್ಯತೆಯನ್ನಿಟ್ಟುಕೊಂಡ ತತ್ವಜ್ಞಾನೀಯ ನೋಟಗಳಿಂದ ಅವರು ಮಾರ್ಗದರ್ಶನ ಪಡೆಯುತ್ತಿದ್ದರು.

ಡಾ. ಲೋಹಿಯಾ ಅವರು ಜೀವಿಸಿದ ಮತ್ತು ನಾಗರಿಕ ಅಸಹಾಕಾರದ ಹೋರಾಟಗಳನ್ನು ನಡೆಸಿದ ಕಾಲಾವಧಿಯು ಸಾಮ್ರಾಜ್ಯಶಾಹಿ, ,ವಸಾಹತುಶಾಹಿ, ಫ್ಯಾಸಿವಾದ, ಬಂಡವಾಳಶಾಹಿ ಮತ್ತು ಹೌದು, ಮಾರ್ಕ್ಸ್ ಮತ್ತು ಲೆನಿನ್‌ವಾದಗಳು ಮಾನವಕುಲದ ಮೇಲೆ ಎಸಗಿದ ಅತಿರೇಕದ ಮತ್ತು ಭಯಾನಕ ಹಿಂಸೆಗಳಿಂದ ಕೂಡಿದುದಾಗಿತ್ತು. ಒಂದು ಅರ್ಥದಲ್ಲಿ ಈ ಅತಿರೇಕಗಳು, ಲೋಹಿಯಾರವರು ಪಟ್ಟು ಬಿಡದೇ ವಿರೋಧಿಸಿದ, ಏಕರೂಪಿ ಮನಸ್ಸಿನ ಪರವಾಗಿರುವ ತರ್ಕಗಳಿಂದಲೇ ಹುಟ್ಟಿದವುಗಳಾಗಿವೆ. ಅಂದರೆ ಅದು ಈಗಾಗಲೇ ಆಲೋಚಿಸಿ ಸಾರ್ವತ್ರಿಕವಾಗಿ ಸರಿಯೆಂದು ಮತ್ತು ಯಾವುದೇ ಅಪವಾದವಿಲ್ಲವೆಂದು ಸ್ಥಾಪಿಸಲಾದ ಒಂದು ಆದರ್ಶ ಪರಿಕಲ್ಪನೆಗೆ ದಿನನಿತ್ಯದ ಆಗುಹೋಗುಗಳನ್ನು ಹೊಂದಿಸುವ ಚಿಂತನಾಕ್ರಮವೇ ಆಗಿದೆ. ಇಂತಾ ಸ್ಥಾಪಿತ ಪರಿಕಲ್ಪನೆಗಳ ಅಪಾಯವೇನೆಂದರೆ, ಅದರ ಎಂತಹ ಭಯಾನಕ ಪರಿಣಾಮಗಳೇ ಆಗಿರಲಿ ಅದನ್ನು ಆದರ್ಶದ ಸ್ಥಾಪನೆಗೆ ಅನಿವಾರ್ಯವೆಂದು ಸಮರ್ಥಿಸಿಕೊಳ್ಳುವುದು. ಇಂತ ಮನಸ್ಸು ಮತ್ತು ತರ್ಕವು, ವ್ಯಷ್ಟಿ ಮತ್ತು ಸಮಷ್ಟಿಯ ನೆಲೆಯಲ್ಲಿ ವ್ಯತಿರಿಕ್ತ ಮತ್ತು ಪ್ರತಿಕೂಲ ಪರಿಣಾಮಗಳಿಗೆ, ದೊಡ್ಡ ಮಟ್ಟದ ಮಾನವ ದುರಂತಗಳನ್ನೂ ಒಳಗೊಂಡು, ನಮ್ಮನ್ನು ಕುರುಡರನ್ನಾಗಿ ಮಾಡಿಬಿಡುತ್ತದೆ. ಏಕೆಂದರೆ ಅಂತಹ ಆದರ್ಶದ ಪ್ರತಿಪಾದಕರು ತಮ್ಮ ಪರಿಕಲ್ಪನೆಯು ತಪ್ಪಾಗಬಹುದು, ಅದರಲ್ಲಿ ಅಂತರ್ಗತ ಕೊರತೆಗಳು ಸಾಕಷ್ಟಿರಬಹುದು ಎನ್ನುವುದನ್ನು ಪೂರ್ಣ ಅಲ್ಲಗೆಳೆಯುತ್ತಾರೆ ಹಾಗು ಪರ್ಯಾಯ ದಾರಿಗಳು ಇರಬಹುದು ಎಂಬುದನ್ನು ಒಪ್ಪಿಕೊಳ್ಳಲೂ ನಿರಾಕರಿಸುತ್ತಾರೆ.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

(ಕೃಪೆ: ***ಜನತಾ,*** ಜನವರಿ, ೨೧, ೨೦೧೮)

(ಕನ್ನಡಕ್ಕೆ : **ಬಿ.ವಿ. ಸುರೇಂದ್ರ**)

## ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆಗಳು-೨೦೧೮

# ಮತ ಹಾಕುವ ಮುನ್ನ...



**ರಾಜ್ಯ ವಿಧಾನ ಸಭಾ ಚುನಾವಣೆಗಳು ಮುಂದಿನ ಮೇ ತಿಂಗಳಲ್ಲಿ ನಡೆಯಲಿದ್ದು ಇದಕ್ಕಾಗಿ ಚುನಾವಣಾ ಆಯೋಗದ ಅಧಿಕೃತ ಪ್ರಕಟಣೆ ಎಂದಾದರೂ ಹೊರಬೀಳಬಹುದು. ಅದನ್ನು ನಿರೀಕ್ಷಿಸಿಯೇ ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಸರ್ವ 'ಸಿದ್ಧತೆ"ಗಳನ್ನೂ ಮಾಡಿಕೊಂಡಿದ್ದು ಚುನಾವಣಾ ಪ್ರಚಾರ ಕಾರ್ಯಕ್ರಮಗಳನ್ನೂ ಆರಂಭಿಸಿವೆ. ಭರವಸೆಗಳ ಬಾಣ ಬಿರು ಬಾಣಗಳು ಚುನಾವಣಾ ಗಗನದಲ್ಲಿ ಹಾರಾಡುತ್ತಾ ಮತದಾರರ ಗಮನ ಸೆಳೆಯುತ್ತಿವೆ. ಈ ಚುನಾವಣೆಗಳಲ್ಲಿ ರಾಜ್ಯ ರಾಜಕಾರಣ ಮತ್ತು ರಾಷ್ಟ್ರ ರಾಜಕಾರಣಗಳು ಪರಸ್ಪರ ಪ್ರಭಾವ ಬೀರುವಂತಹ ಸಂಬಂಧ ಹೊಂದಿದ್ದು ಈಗ ಚುನಾವಣೆಗಳು ಕೇವಲ ಅನ್ನ ಬಟ್ಟೆ ಸೂರುಗಳ ಪ್ರಶ್ನೆಯ ಮೇಲೆ ಮಾತ್ರ ನಡೆಯದೆ ಮತದಾರರು ಯೋಚಿಸಲು ಹಲವಾರು ರಾಜ್ಯ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದ ಗಂಭೀರ ವಿಷಯಗಳೇನಕವು ಮುನ್ನೆಲೆಗೆ ಬಂದಿವೆ. ಹಾಗಾಗಿ ಈ ಚುನಾವಣೆಗಳಲ್ಲಿ ಮತ ಹಾಕುವ ಮುನ್ನ ನಮ್ಮ ಮತದಾರರ ಮನದ ಮುಂದೆ ಹಾದು ಹೋಗುವ ಮುಖ್ಯ ವಿಷಯಗಳಾವುವು ಎಂಬುದನ್ನು ತಿಳಿಯುವ ಕುತೂಹಲದಿಂದ ಪತ್ರಿಕೆ ರಾಜ್ಯದ ವಿವಿಧ ಭಾಗಗಳ ಮತ್ತು ವಿವಿಧ ಹಿನ್ನೆಲೆಗಳ ಓದುಗರಿಂದ ಅಭಿಪ್ರಾಯ ಸಂಗ್ರಹಿಸಿದೆ. ಅದರ ಮೊದಲ ಕಂತನ್ನು ಇಲ್ಲಿ ನೀಡುತ್ತಿದ್ದೇವೆ**-ಸಂ.

### 'ಕರ್ನಾಟಕ ಮಾಡಲ್' ಮುಂದುರೆಸಬಲ್ಲವರು ನನ್ನ ಆಯ್ಕೆ

**ಈ** ಬಾರಿಯ ರಾಜ್ಯ ವಿಧಾನ ಸಭೆಗೆ ಯಾವ ಪಕ್ಷವನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದನ್ನು ನಿರ್ಧರಿಸಲು ಯಾವ ಮಾನದಂಡ ಬಳಸಬಹುದು?

ಕಳೆದ ಮಾರ್ಚ ೮ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಕಳೆದೆರಡು ದಶಕಗಳಲ್ಲಿ ಭಾರತದ ರಾಜಕಾರಣವು ಸಬಲೀಕರಣಗೊಳ್ಳುತ್ತಿರುವ ಜನಸಮುದಾಯಗಳಿಂದಾಗಿ ಹೇಗೆ ಬದಲಾಗುತ್ತಿದೆ ಎಂಬುದನ್ನು ಅಧ್ಯಯನ ಮಾಡತ್ತಿರುವ ಕ್ರಿಸ್ಟೋಫೆ ಜೆಫರ್‌ಲಾಟ್ ಅವರು ಇನ್ನೋರ್ವ ಸಂಶೋಧಕ ಚೆನ್ನೈನ ಕಲ್ಯೆಯರಸನ್ ಜೊತೆಗೂಡಿ 'ಕರ್ನಾಟಕ ಮಾಡೆಲ್' ಎಂಬ ಲೇಖನವನ್ನು ಬರೆದಿದ್ದರು. ಅವರು 'ಭಾರತದ ಮಾನವ ಅಭಿವೃದ್ಧಿ ಸಮೀಕ್ಷೆ-೨೦೧೧-೧೨ ಎಂಬ ದಾಖಲೆಯಿಂದ ಪಡೆದ ಮಾಹಿತಿಯಿಂದ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ಜಾತಿಗಳು ಮತ್ತು ಮುಸ್ಲಿಮರು ಇಲ್ಲಿನ ಬಲಾಢ್ಯ ಜಾತಿಗಳಾದ ಒಕ್ಕಲಿಗ ಮತ್ತು ಲಿಂಗಾಯತ ಜಾತಿಗಳೊಡನೆ ತಲಾ ಆದಾಯ, ಕಾಲೇಜು ಶಿಕ್ಷಣ ಮುಂತಾದ ಮಾನದಂಡಗಳಲ್ಲಿ ಸಮಾನತೆಯನ್ನು ಸಾಧಿಸುವ ಹಾದಿಯಲ್ಲಿವೆ ಎಂಬುದನ್ನು ತೋರಿಸಿದ್ದಾರೆ. ಅದೇ ಗುಜರಾತ್, ಹರ್ಯಾಣ ಮತ್ತು ಮಹಾರಾಷ್ಟ್ರಗಳಲ್ಲಿ ಈ ಸಮುದಾಯಗಳು ಅಲ್ಲಿನ ಬಲಾಢ್ಯ ಜಾತಿಗಳಿಗಿಂತ ಸಾಕಷ್ಟು ಹಿಂದುಳಿದಿದ್ದಾರೆ ಎಂಬುದನ್ನೂ ತೋರಿಸಿದ್ದಾರೆ. ಇದರ ಜೊತೆಗೇ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ, ಈ ಅಧ್ಯಯನದ ಹಿಂದಿರುವ ಮಾಹಿತಿಯ ವರ್ಷವಾದ ೨೦೧೧-೧೨ರ ಹಿಂದಿನ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್, ಜನತಾ ಪಕ್ಷಮ ಜೆಡಿಎಸ್ ಮತ್ತು ಬಿಜೆಪಿಗಳು ಆಡಳಿತ ನಡೆಸಿವೆ.

ಈ ಹಿನ್ನೆಲೆಯಲ್ಲಿ ಇನ್ನು ಮುಂದೆಯೂ ಮೇಲ್ಕಾಣಿಸಿದ ದುರ್ಬಲ ವರ್ಗಗಳ ಜೊತೆ ಎಲ್ಲ ಜನವರ್ಗಗಳ ಕಲ್ಯಾಣ ಸಾಧಿಸಬಹುದಾದ ಪಕ್ಷವೆಂದು ಈ ಚುನಾವಣೆಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು? ರಾಜ್ಯದಲ್ಲಿ ಸೀಮಿತ ವ್ಯಾಪ್ತಿ ಪಡೆದಿರುವ ಜೆಡಿಎಸ್‌ನ್ನೇ ಅಥವಾ ಗೋರಕ್ಷಣೆ ಮತ್ತು ಮುಸ್ಲಿಂ ದ್ವೇಷದ ವ್ಯಸನಗಳಿಂದ ಬಾಧಿತವಾದ ಬಿಜೆಪಿಯನ್ನೇ ಅಥವಾ ಒಂದು ಕುಟುಂಬದ ಹೈಕಮಾಂಡ್ ರಾಜಕಾರಣದಿಂದ ಬಳಲುವ ಕಾಂಗ್ರೆಸ್ಸನ್ನೇ?

ಈ ಪ್ರಶ್ನೆಯುನ್ನು ಹಾಕಿಕೊಂಡಾಗ ಆಯ್ಕೆ ಗೊಂದಲವನ್ನು ಮೂಡಿಸುವುದಾದರೂ ಇನ್ನೆರಡು ಅಂಶಗಳನ್ನು ಗಮನಿಸಿದಾಗ ನಮ್ಮ ಆಯ್ಕೆ ಸ್ವಲ್ಪ ಸ್ಪಷ್ಟವಾಗಬಹುದು. ಆ ಅಂಶಗಳೆಂದರೆ, ಕಳೆದ ಐದು ವರ್ಷಗಳಲ್ಲಿ ರಾಜ್ಯದ ಹೆಚ್ಚಿನ ಭಾಗಗಳನ್ನು ಆವರಿಸಿದ್ದ ಬರಗಾಲವನ್ನು ಸದ್ಯದ ಸರ್ಕಾರ ಪೂರ್ಣ ದಕ್ಷತೆಯಿಂದಲ್ಲದಿದ್ದರೂ ತೃಪ್ತಿಕರವಾಗಿ ನಿಭಾಯಿಸಿ ರಾಜ್ಯ ಪ್ರಗತಿಯ ಹಾದಿಯಲ್ಲಿರುವಂತೆ ನೋಡಿಕೊಂಡಿದೆ. ಕಳೆದ ೧೨ ವರ್ಷಗಳಲ್ಲಿ ೨ ವರ್ಷಗಳನ್ನು ಬಿಟ್ಟರೆ ಮಿಕ್ಕೆಲ್ಲ ವರ್ಷಗಳಲ್ಲೂ ಸರ್ಕಾರದ ಆದಾಯ ಶೇ. ೧೫-೨೦ರಷ್ಟು ವೃದ್ಧಿಗೊಂಡಿದೆ. ಇನ್ನೆರಡು ವರ್ಷಗಳಲ್ಲಿ ರಾಜ್ಯದ ಜನಸಂಖ್ಯಾ ಬೆಳವಣಿಗೆ ತಹಬಂದಿಗೆ ಬರಲಿದೆ ಎಂದು ನಿರೀಕ್ಷಿಸಲಾಗಿದೆ.



ಈ ಎಲ್ಲ ಹಿನ್ನೆಲೆಯಲ್ಲಿ ಜೆಫರ್‌ಲಾಟ್ ಹೇಳುವ ಕರ್ನಾಟಕ ಮಾಡಲ್‌ನ್ನು ದೇಶಕ್ಕೇ ಮಾದರಿಯಾಗಿ ಮಾಡಬಲ್ಲ ಕಾರ್ಯಸೂಚಿಯನ್ನು ದಕ್ಷತೆಯಿಂದ ಜಾರಿಗೆ ತರಬಲ್ಲ ಸರ್ಕಾರ ಯಾವುದಾಗಿರಬಹುದೆಂಬುದು ಸ್ಪಷ್ಟವಾಗಬಹುದು.

**-ಗಿರೀಶ್ ವಿ. ವಾಘ್**, ನಿವೃತ್ತ ಪತ್ರಕರ್ತರು, ಬೆಂಗಳೂರು

### ಸಂವಿಧಾನದ ಮೌಲ್ಯಗಳಿಗೆ ಬದ್ಧರಾಗೋಣ

**ರಾ**ಜ್ಯ ವಿಧಾನಸಭೆ ಚುಣಾವಣೆ ಕುರಿತು ದೇಶವೇ ಕೌತುಕದಿಂದ ಕಾಯುತ್ತಿರುವ ಸನ್ನಿವೇಶ ನಿರ್ಮಾಣಗೊಂಡಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷ ಚುನಾವಣೆಗಳನ್ನು ಅತಿ ಸರಳಿಕರಿಸಿ ಜನರ ಬದುಕಿನ ವಿವಿಧ ಆಯಾಮಗಳನ್ನು ಅವಲೋಕನಕ್ಕೊಳಪಡಿಸಿ ಜರುಗಬೇಕಾದ ಚುನಾವಣೆಗಳನ್ನು ಭಾವುಕ ವಿಷಯಗಳಾದ ಧರ್ಮ, ಜಾತಿ, ರಾಷ್ಟ್ರಪ್ರೇಮ ಮುಂತಾದ ವಿಷಯಗಳನ್ನು ಮುನ್ನೆಲೆಗೆ ತಂದು ಗೆಲುವಿನ ನಿರೀಕ್ಷೆಯಲ್ಲಿದೆ. ಇದಕ್ಕೆ ಕಾಂಗ್ರೆಸ್ಸಿನ ಅಧಿಕಾರ ಚಲಾವಣೆ ವೈಖರಿ ಹಾಗೂ ಇತಿಹಾಸವರಿಯದ ಯುವಜನ ಬಹುಮಟ್ಟಿಗೆ ಕಾರಣವಾಗಿದೆ. ಇನ್ನು ರಾಜ್ಯದಲ್ಲಿ ಜೆಡಿಎಸ್ ತನ್ನ ಹುಟ್ಟಿನಲ್ಲೆ ಪ್ರಜಾಪ್ರಭುತ್ವವನ್ನು ಗೈರುಗೊಳಿಸಿ ಅದನ್ನು ತನ್ನ ಆಡಳಿತದಲ್ಲಿ ತರುವುದಾಗಿ ಹೇಳಲು ಪ್ರಯಾಸ ಪಡುತ್ತಿದೆ.

ರಾಜ್ಯದ ಜನತೆಯ ಕುರಿತು, ಸಾಮಾಜಿಕ ಸ್ಥಿತಿಗತಿ ಕುರಿತು, ಜನ ಸಮೂಹದ ನಡಾವಳಿಗಳನ್ನು ಅವಲೋಕಿಸಿದಾಗ ಬಹು ಜನತೆ,ಸ್ವಹಿತಾಸಕ್ತಿ ಹಾಗೂ ಮಿತಿಯಿಲ್ಲದೆ ಸಂಪತ್ತಿನ ಒಡೆತನ ಹೊಂದುವ ಸಮೂಹ ಸನ್ನಿಗೊಳಗಾಗಿಪ್ರಾಮಾಣಿಕವಾಗಿ ದುಡಿದು ನೆಮ್ಮದಿಯ ಬದುಕು ಕಟ್ಟಿಕೊಳ್ಳುವ ಬಯಕೆಯ ಬೆರಳೆಣಿಕೆಯ ಜನತೆಯಲ್ಲಿ ಆತಂಕ ನಿರ್ಮಿಸಲಾಗಿದೆ. ಎಂದರೆ ತಪ್ಪಾಗಲಾರದು. ಇಂತಹ ಸನ್ನಿವೇಶ ಕುರಿತು ಪುರಂದರದಾಸರು 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದಿರುವುದು ಅರ್ಥಗರ್ಭಿತವಾಗಿದೆ. ಆದಾಗ್ಯೂ ನಾವು ಬರಲಿರುವ ರಾಜ್ಯದ ಚುನಾವಣೆಯನ್ನು ಹಗುರವಾಗಿ ನೋಡಿ ತಟಸ್ಥರಾಗದೆ ನಮ್ಮ ಸ್ವಾತಂತ್ರ್ಯ ಹೋರಾಟದ ಬಿತ್ತಿದ ಸಾಂವಿಧಾನಿಕ ಮೌಲ್ಯಗಳಿಗೆ ಇಂದು ಬಂದೊದಗಿರುವ ಕುತ್ತನ್ನಾದರೂ ಮನಗಂಡು ಇಂತಹ ಶಕ್ತಿಗಳನ್ನು ಸೋಲಿಸಲಾದರೂ ಪಾಲ್ಗೊಳ್ಳುವುದು ಅವಶ್ಯವಾಗಿದೆ. ಮತೀಯತೆ, ಜನಾಂಗಿಯತೆಯನ್ನು ಆಧಾರವಾಗಿ ಇಟ್ಟುಕೊಂಡ ಬಲಿಷ್ಠ ನಾಯಕ, ಬಲಿಷ್ಠ ರಾಷ್ಟ್ರದ ನಿರ್ಮಾಣದ ಕಲ್ಪನೆಗಳ ಮೊದಲ ಬಲಿ ಮಹಾತ್ಮ ಗಾಂಧಿಯಾಗಿದ್ದರು ಎಂಬುದನ್ನು ನೆನಪಿಟ್ಟುಕೊಂಡು ನಾವಿಂದು ಮತ ಚಲಾಯಿಸಬೇಕಿದೆ,



**-ಅಜ್ಜಪ್ಪ ಬಿರಡಿ,** ರೈತರು ಮತ್ತು ಎಪಿಎಂಸಿ ನೌಕರರು, ಗೋಕಾಕ

## ಸದ್ಯಕ್ಕೆ ನನ್ನ ಮತ ಯಾರಿಗೂ ಇಲ್ಲ, ಏಕೆಂದರೆ...

ಇವೊತ್ತಿನ ರಾಜಕೀಯದ ಬಗ್ಗೆ ನನಗೆ ಯಾವ ಆಸಕ್ತಿನೂ ಇಲ್ಲ. ಕಾರಣ, ರಾಜ್ಯದ ಮೂರೂ ಮುಖ್ಯ ಪಕ್ಷಗಳ ಬಗ್ಗೆ ಯಾವುದೇ ವಿಶ್ವಾಸ ಇಲ್ಲ. ಏಕೆಂದರೆ ಯಾರಿಗೂ, ಜನರ ಹಿತ ಬೇಕಿಲ್ಲ.. ಬರೀ ಮಾತು. ಸಾಮಾಜಿಕ ನ್ಯಾಯದ ಪರಿಜ್ಞಾನ ಇಲ್ಲ. ನೆಲ–ಜಲ–ಭಾಷೆ–ರೈತರ ಬಗ್ಗೆ ಜವಾಬ್ದಾರಿ ಇಲ್ಲ. ಇವೊತ್ತು ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳು ಚುನಾವಣೆಯನ್ನು ಒಂದು ಉದ್ದಿಮೆಯಾಗಿ ಪರಿಗಣಿಸಿದ್ದಾರೆ. ಭ್ರಷ್ಟಾಚಾರದಿಂದ ಹಣ ಸಂಪಾದನೆ ಮಾಡಿ ಆ ಹಣದ ಆಮಿಷ ತೋರಿಸಿ ಮತ ಪಡೆಯುತ್ತಿದ್ದಾರೆ. ಸಂವಿಧಾನದ ಆಶಯಗಳನ್ನು ಮೂಲೋತ್ಪಾಟನೆ ಮಾಡಿ ಅನಗತ್ಯ ಭಯ–ಆತಂಕಗಳನ್ನು ಸೃಷ್ಟಿಸುವ ಮೂಲಕ ಸಮಾಜವನ್ನು ಒಡೆದು ಕೋಮುವಾದ, ಜಾತಿವಾದ ಇತ್ಯಾದಿಗಳನ್ನು ಹರಡುತ್ತಿದ್ದಾರೆ. ಒಂದು ಪಕ್ಷ ಅನ್ಯ ಮತವೊಂದರ ಭಯ ಉಂಟು ಮಾಡಿ ವೋಟು ಪಡೆಯುವ ಹವಣಿಕೆಯಲ್ಲಿದ್ದರೆ ಇನ್ನೆರಡು ಪಕ್ಷಗಳು ಜಾತಿವಾದ ಮತ್ತು ಹೊಸ ಹೊಸ ಆಮಿಷಗಳ ಆಷಾಢಭೂತಿತನವನ್ನು ತೋರುತ್ತಾ ಭ್ರಷ್ಟತೆಯ ತುಟ್ಟ ತುದಿ ಮುಟ್ಟಿವೆ. ಶಿಕ್ಷಣ ಸಂಸ್ಥೆ ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರು ರೈತ ಮಕ್ಕಳ ಶತ್ರುಗಳು. ಅವರು ಚುನಾವಣೆಗಳಿಗೆ ನಿಲ್ಲದಂತೆ ತಡೆಯಬೇಕು.

ಈವರೆಗೆ ನಾಲ್ಕು ಲಕ್ಷ ಜನ ರೈತರದ್ದು ಆತ್ಮಹತ್ಯೆಯಲ್ಲ. ಅವರನ್ನು ಸರ್ಕಾರಗಳೇ ಕೊಲೆ ಮಾಡಿವೆ. ಮುಂದಾಲೋಚನೆ ಇದ್ದರೆ ಕಾವೇರಿ–ಮಹದಾಯಿ ಸಮಸ್ಯೆಗಳು ಜಟಿಲವಾಗುತ್ತಿರಲಿಲ್ಲ. ಯುವಕರು ಉದ್ಯೋಗವಿಲ್ಲದೆ ಭಯೋತ್ಪಾದಕರೂ, ಕಳ್ಳರೂ, ಕೊಲೆಗಡುಕರೂ ಅತ್ಯಾಚಾರಿಗಳೂ ಆಗುತ್ತಿದ್ದಾರೆ. ಜನ ವಲಸೆ ಹೋಗುತ್ತಾ ಹಳ್ಳಿಗಳು ಸ್ಮಶಾನವಾಗುತ್ತಿವೆ. ಮಹಿಳೆಯರಿಗೆ ಗೌರವದಿಂದ ಬಾಳುವ ಪರಿಸ್ಥಿತಿ ಇಲ್ಲ. ಹಾಗಾಗಿ ಏನಾದರೂ ಎಲ್ಲ ವರ್ಗ–ಜಾತಿಗಳ ಪ್ರಜೆಗಳ ಬಗ್ಗೆ ಕಾಳಜಿ ಇರುವ ಪಕ್ಷವೇನಾದರೂ ಹೊಸದಾಗಿ ಉದಯಿಸಿದರೆ ಆಗ ಮತ ನೀಡುವ ಆಲೋಚನೆ ಮಾಡಬೇಕು.



**–ಅನಸೂಯಮ್ಮ,** ರೈತ ನಾಯಕಿ, ಅರಳಾಳುಸಂದ್ರ

## ಸಮತೋಲನ, ಸಾಮರ್ಥ್ಯ, ಸುಧಾರಣೆಗಳಿಗೆ ಬೆಂಬಲ

ಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ನನ್ನ ಈ ನಿರೀಕ್ಷೆಗಳನ್ನು ಈಡೇರಿಸಬಹುದಾವರಿಗೆ ನನ್ನ ಮತ :

೧. ರಾಷ್ಟ್ರೀಯತೆ ಮತ್ತು ಪ್ರಾದೇಶಿಕ ಆಶೋತ್ತರಗಳ ಸರಿಯಾದ ಸಮನ್ವಯದ ಮತ್ತು ರಾಷ್ಟ್ರೀಯ ಸಂಕೇತಗಳು, ಸಂಸ್ಥೆಗಳು, ವಿಚಾರಗಳ ಕುರಿತು ಖಚಿತ ಬದ್ಧತೆಯ ನಿಲುಮೆ

೨. ಕಾನೂನು ಆಡಳಿತ, ಭಯೋತ್ಪಾದನೆ ನಿಗ್ರಹಗಳ ಬಗ್ಗೆ ಸ್ಪಷ್ಟ ನಿಲುವು

೩. ಸರಕಾರಿ ಮತ್ತು ಅನುದಾನಿತ ಕನ್ನಡ ಪ್ರಾಥಮಿಕ ಶಾಲೆಗಳ ಸಮಗ್ರ ಸಬಲೀಕರಣಕ್ಕೆ ಬೃಹತ್ ಯೋಜನೆ

೪. .ಹೊಂಡ ರಹಿತ ರಸ್ತೆಗಳು ಮತ್ತು ಶಬ್ದ ಮಾಲಿನ್ಯ ನಿಯಂತ್ರಣದ ಆಶ್ವಾಸನೆ ಸಾರಿಗೆ, ಶಿಕ್ಷಣಗಳ ವಿಸ್ತರಣೆ

೫. ರಾಜಕೀಯ ಮತ್ತು ಮತೀಯ ಉದ್ದೇಶಗಳ ಕಾರ್ಯಕ್ರಮಗಳ ವೆಚ್ಚದ ಮೇಲೆ ನಿಗಾ

೬. ಕೃಷಿ ಕ್ಷೇತ್ರಕ್ಕೆ ಸಾಲ ಮನ್ನಾ ಮೀರಿದ ವಾಸ್ತವಿಕ ಸೃಜನಾತ್ಮಕ ಯೋಜನೆ

೭. ಸಂಪತ್ತು ಉತ್ಪಾದನೆ , ವಿತರಣೆ, ಮೌಲ್ಯವರ್ಧನ ಉತ್ತೇಜನ , ಗುಣಮಟ್ಟ ಕೇಂದ್ರೀಕೃತ ಉದ್ಯಮ ಸ್ನೇಹಿ ನೀತಿ

೮. ಸ್ಥಳೀಯ ಸಂಸ್ಥೆಗಳ ಕಾರ್ಯಕ್ಷಮತೆ ವೃದ್ಧಿಗೆ ತುರ್ತು ಯೋಜನೆ

೯. ಶಿಕ್ಷಣ ಕ್ಷೇತ್ರದ ಆಧುನೀಕರಣ, ಪರ್ಯಾಯ ಅವಕಾಶ ವಿಚಾರ , ಉದ್ಯೋಗಾಧಾರಿತ ಶಿಕ್ಷಣ, ಅನುಪಯುಕ್ತ ವ್ಯಾಸಂಗ ಕ್ರಮಗಳ ನಿರ್ದಾಕ್ಷಿಣ್ಯ ನಿಯಂತ್ರಣ, ಚಿಕ್ಕ ಅವಧಿಯ ಕೋರ್ಸುಗಳ ಆಶಾಸನೆ

೧೦ ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರಗಳ ನೇಮಕಗಳಲ್ಲಿ ವಿದ್ವತ್ತು, ಸಾಮರ್ಥ್ಯ ಅರ್ಹತೆಗಳೇ ಮಾನದಂಡಡವಾಗಿರುವ ನೀತಿ

೧೧. ರಾಜಕೀಯ ಶಿಷ್ಟಾಚಾರಗಳ ಸಮಗ್ರ ಮರು ವಿಮರ್ಶೆ.



**–ಡಾ. ಎಂ ಪ್ರಭಾಕರ ಜೋಷಿ,** ಹಿರಿಯ ವಿದ್ವಾಂಸರು, ಮಂಗಳೂರು

## ಚುನಾವಣಾಪೂರ್ವ ಒತ್ತಡ ಗುಂಪುಗಳು ಇಂದಿನ ಅಗತ್ಯ

ಸರ್ವರಿಗೂ ಸಮಪಾಲು ನೀಡಬಲ್ಲಂತಹ ಚುನಾಯಿತ ಸರ್ಕಾರವನ್ನು ಇವತ್ತಿನ ಸಂದರ್ಭದಲ್ಲಿ ನಿರೀಕ್ಷಿಸುವುದು ಕಷ್ಟವೇ ಸರಿ. ಆದರೆ ಸರ್ವರಿಗೂ ಸಮಬಾಳು ಸಾಧ್ಯವಾಗುವಂತಹ ಸರ್ಕಾರಕ್ಕಾಗಿಯಾದರೂ ದನಿ ಎತ್ತದೆ ಹೋದರೆ ಆತ್ಮವಂಚನೆಯಾದೀತು. ಶಿಕ್ಷಣ, ಉದ್ಯೋಗ, ಆರೋಗ್ಯ, ಮೂಲಸೌಕರ್ಯ, ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಇವಿಷ್ಟನ್ನಾದರೂ ಪೂರೈಸುವ ಭರವಸೆ ಸಿಗುವುದಾದರೆ ಓಟು ಹಾಕುವುದಕ್ಕೆ ಆಸಕ್ತಿಯಾದರೂ ಮೂಡೀತು. ಜಾಗೃತ ಮತದಾರರು ಒತ್ತಡದ ಗುಂಪುಗಳಾಗಿ ಕಾರ್ಯ ನಿರ್ವಹಿಸಿ ಸರ್ಕಾರ ಇವುಗಳನ್ನು ಕಾರ್ಯಗತಗೊಳಿಸುವಂತೆ ಮಾಡಬೇಕು. ಚುನಾವಣೆ ನಂತರ ಅಧಿಕಾರಕ್ಕೆ ಬಂದ ಸರ್ಕಾರ ತಾನಾಗಿಯೇ ಜನ ಸಾಮಾನ್ಯರ ಈ ಅವಶ್ಯಕತೆಗಳತ್ತ ಗಮನಹರಿಸುತ್ತದೆಂಬ ನಿರೀಕ್ಷೆ ಸಾಧ್ಯವಿಲ್ಲ. ಅದಕ್ಕಾಗಿ ಚುನಾವಣಾ ಪೂರ್ವದಲ್ಲೇ ರಾಜಕೀಯ ಪಕ್ಷಗಳನ್ನು ಈ ವಿಚಾರಗಳಲ್ಲಿ ಬಾಯಿ ಬಿಡುವಂತೆ ಮಾಡಬೇಕು ಹಾಗೂ ಅಧಿಕಾರಕ್ಕೆ ಬಂದ ಸರ್ಕಾರ ಇದಕ್ಕೆ ಬದ್ಧವಾಗುವಂತೆ ನೋಡಿಕೊಳ್ಳಬೇಕು.

ಇದಕ್ಕೊಂದು ನಿದರ್ಶನ ನಮ್ಮೆದುರಿಗೆ ಇದೆ 'ಉದ್ಯೋಗಕ್ಕಾಗಿ ಯುವ ಜನರು' ಹೆಸರಿನಲ್ಲಿ ಕಳೆದಾರು ತಿಂಗಳಿನಿಂದ ಕರ್ನಾಟಕದಲ್ಲಿ ಕೆಲಸ ಮಾಡುತ್ತಿರುವ ಯುವಕರ ತಂಡವು ರಾಜ್ಯದ ಮೂರೂ ಪ್ರಮುಖ ಪಕ್ಷಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಉದ್ಯೋಗದ ಭರವಸೆ ನೀಡಿ ಯುವ ಜನರನ್ನು ರಾಜಕೀಯ ಪಕ್ಷಗಳು ವಂಚಿಸುತ್ತಿರುವ ಕುರಿತಾಗಿ ಜನ ಸಾಮಾನ್ಯರಲ್ಲಿ ಯುವಕರಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ತೊಡಗಿ, ಮತ್ತೊಂದೆಡೆ ರಾಜಕೀಯ ಪಕ್ಷಗಳ ವೈಫಲ್ಯವನ್ನು ಅವರ ಕಛೇರಿಗೆ ಮುತ್ತಿಗೆ ಹಾಕಿ ಮುಖಕ್ಕೆ ರಾಚುವಂತೆ ಹೇಳುತ್ತಿವೆ. ಹೇಗೆ ಉದ್ಯೋಗ ಸೃಷ್ಟಿಸಬಹುದು ಎಂಬುದರತ್ತಲೂ ರಾಜಕೀಯ ಪಕ್ಷಗಳಿಗೆ ಮನವರಿಕೆ ಮಾಡಿಕೊಡುತ್ತ ಉದ್ಯೋಗ ಭರವಸೆ ಕುರಿತು ಖಚಿತವಾಗಿ ಪಕ್ಷಗಳು ಪ್ರಣಾಳಿಕೆಯಲ್ಲಿ ತಮ್ಮ ದೃಷ್ಟಿ ಕೋನವನ್ನು ಹೇಳುವಂತೆ ಒತ್ತಡ ಹೇರುವ ಕೆಲಸ ಮಾಡುತ್ತಿದೆ. ಅವರು ಪ್ರಕಟಿಸಿರುವ 'ಯುವಜನರು ಪ್ರಣಾಳಿಕೆ ಕರ್ನಾಟಕ ೨೦೧೮' ಕಾರ್ಯಸಾಧುವಾದ ಯೋಜನೆಗಳನ್ನು , ಅವನ್ನು ಸಾಧಿಸುವ ದಾರಿಯ ಕುರಿತಾದ ವಿವರಣೆಗಳನ್ನು ಒಳಗೊಂಡ ಉತ್ತಮ 'ದಾಖಲೆ' ಆಗಿದೆ. ಅಧಿಕಾರಕ್ಕೆ ಬಂದ ಸರ್ಕಾರವು ಉದ್ಯೋಗದ ಭರವಸೆ ಈಡೇರಿಸುವಂತೆ ಮಾಡಲು ಮುಂದಿನ ದಿನಗಳಲ್ಲಿ ಆಂದೋಲನ ಹಮ್ಮಿಕೊಳ್ಳುವ ತಯಾರಿಯಲ್ಲೂ ಈ ಯುವಕರು ತೊಡಗಿಸಿಕೊಂಡಿದ್ದಾರೆ.

ಬಹುಶಃ ಜಾಗೃತ ಮತದಾರ ಹೀಗೆ ಸಂಘಟಿತಗೊಂಡು ಜಾಗೃತ ಓಟ್ ಬ್ಯಾಂಕ್ ಆಗದೇ ಹೋದರೆ ಜಾತಿ, ಧರ್ಮ, ಭಾಷೆಯ ಲೆಕ್ಕಾಚಾರದ ಕೊಚ್ಚೆಯಲ್ಲೇ ಮುಳುಗಿರುವ ರಾಜಕೀಯ ಪಕ್ಷಗಳಿಂದ ಯಾವ ಸ್ಪಂದನೆಯುನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. 'ಉದ್ಯೋಗಕ್ಕಾಗಿ ಯುವಜನರು 'ಒಂದು ಮಾರ್ಗವನ್ನು ಹಾಕಿಕೊಟ್ಟಿದೆ ಎಂದರೆ ತಪ್ಪಿಲ್ಲ.



**–ವೈ.ವಿ .ಶೃಂಗೇಶ್,** ಪತ್ರಕರ್ತರು, ಹೋರಾಟಗಾರರು, ಶಿವಮೊಗ್ಗ

## ಕಾಂಗ್ರೆಸ್ಸಿಗೂ ಬಿಜೆಪಿಗೂ ಅಂತಹ ವ್ಯತ್ಯಾಸವಿಲ್ಲ

ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಸುಮಾರು ಐದು ವರ್ಷಗಳಿಂದ ನೋಡುತ್ತ ಬಂದ ನನಗೆ ಇದು ಒಂದು ಜವಾಬ್ದಾರಿಯುತ ಸರ್ಕಾರವಾಗಿ ಎಂದಾದರೂ ನಡೆದುಕೊಂಡಿದೆ ಎಂದು ಹೇಳಲು ಉದಾಹರಣೆ ಸಿಗುತ್ತಿಲ್ಲ. ಜೊತೆಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಳು ಈ ಸರ್ಕಾರಕ್ಕೆ ಛೀಮಾರಿ ಹಾಕಿದ್ದು ಲೆಕ್ಕವಿಲ್ಲ. ಒಂದು ಭಂಡತನದಲ್ಲಿ ನಡೆದುಕೊಂಡು ಬಂದ ಸರ್ಕಾರವಿದು. ಈ ನನ್ನ ಪ್ರತಿಯೊಂದು ಮಾತನ್ನು ಸಾಕ್ಷಿ ಸಮೇತ ವಿವರಿಸಬಲ್ಲೆನಾದರೂ ಈ ಬರಹದ ಚೌಕಟ್ಟಿನಲ್ಲಿ ಅದು ಸಾಧ್ಯವಾಗುತ್ತಿಲ್ಲ.

ಇಡೀ ದೇಶದಲ್ಲಿ ಎಲ್ಲೂ ಇಲ್ಲದ ಅತ್ಯಂತ ದಕ್ಷ ಲೋಕಾಯುಕ್ತವನ್ನು ಇವರು ಹಾಳು ಮಾಡಿದರು. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಒಬ್ಬ ಕಡು ಭ್ರಷ್ಟನನ್ನು ಅಧ್ಯಕ್ಷರಾಗಿ ನೇಮಿಸಿದರು. ರಾಜ್ಯ ಮಾನವ ಹಕ್ಕುಗಳ ಮತ್ತು ಮಹಿಳಾ ಆಯೋಗಗಳು ಇವೆಯೋ ಇಲ್ಲವೋ ಯಾರಿಗೂ ತಿಳಿದಿಲ್ಲ. ಹೀಗೆ ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ಮಗ್ಗಲು ಮುರಿದರು. ಇವರು ಸ್ಥಾಪಿಸಿದ ಎಸಿಬಿಯನ್ನು ತಮಗೆ ಆಗದವರ ಮೇಲೆ, ಮಾತು ಕೇಳದ ಅಧಿಕಾರಿಗಳ ಮೇಲೆ ದಾಳಿಗೆ ಬಿಟ್ಟರು

ಸಮಾಜವಾದಿ ಎಂದು ತಮ್ಮನ್ನು ಕರೆದುಕೊಳ್ಳುವ ಮುಖ್ಯಮಂತ್ರಿಗಳು

ಜಾತಿ ವಿನಾಶ ಕಾರ್ಯಕ್ರಮ ರೂಪಿಸದೆ ಜಾತಿ ವ್ಯವಸ್ಥೆಯನ್ನು ಭದ್ರಗೊಳಿಸುವ ಕೆಲಸ ಮಾಡಿದ್ದು, ಜಾತಿಗೊಂದು ನಿಗಮ ಸ್ಥಾಪನೆ, ವೀರಶೈವ–ಲಿಂಗಾಯತ ಜಗಳವನ್ನು ರಾಜಕೀಯ ಲಾಭಕ್ಕಾಗಿ ಬಳಸಿದ್ದು ಸಮಾಜದಲ್ಲಿ ಪರಸ್ಪರ ಅಸಹನೆ ಹೆಚ್ಚಲು ಕಾರಣವಾಯ್ತು. ಇದಕ್ಕೆ ಈ ಸರ್ಕಾರ ಮತ್ತು ಅದರ ನಾಯಕತ್ವ ವಹಿಸಿಕೊಂಡವರು ಬೆಲೆ ತೆರಬೇಕಾಗುವುದು ಖಂಡಿತ.

ಈಗ ಚುನಾವಣೆಗೆ ಸಿದ್ಧತೆ ನಡೆಸಿರುವ ಕಾಂಗ್ರೆಸ್ ಪಕ್ಷ ಅತ್ಯಂತ ಭ್ರಷ್ಟರೂ ನಾಡಿನ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡಿರುವ ಅಶೋಕ್ ಖೇಣಿ. ಆನಂದ್ ಸಿಂಗ್, ನಾಗೇಂದ್ರ ಮುಂತಾದ ಕಳಂಕಿತರನ್ನು ಪಕ್ಷಕ್ಕೆ ಸೇರಿಸಿಕೊಂಡು 'ನಮಗೆ ಗೆಲುವೇ ಮುಖ್ಯ', ಮತ್ತೇನು ಅಲ್ಲ ಎಂಬ ಅಪಾಯಕಾರಿ ಸಂದೇಶ ರವಾನಿಸಿದ್ದಾರೆ.

ಕಾಂಗ್ರೆಸ್ ಯಾವ ದೂರಗಾಮಿ ಯೋಜನೆಯನ್ನು ಈ ಸರ್ಕಾರ ಅನುಷ್ಠಾನಕ್ಕೆ ತರದೆ ಕೇವಲ ತುಷ್ಟೀಕರಣದ ಕಾರ್ಯಕ್ರಮಗಳಲ್ಲಿ ಕಾಲ ಕಳೆದು ಜನರ ಮೇಲೆ ಅಪಾರ ಸಾಲದ ಹೊರೆ ಹೊರಿಸಿದ್ದು ಹದಿಮೂರು ಆಯವ್ಯಯ ಮಂಡಿಸಿದ ಮುಖ್ಯಮಂತ್ರಿಗಳ ಬಹು ದೊಡ್ಡ ಸೋಲು.

ಹಾಗೆ ನೋಡಿದರೆ. ಆರ್ಥಿಕ ನೀತಿ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಬಿಜೆಪಿಗಿಂತ ಕಿಂಚಿತ್ತೂ ಭಿನ್ನವಿಲ್ಲ ಈ ಸರ್ಕಾರದ ಕಾರ್ಯ ಶೈಲಿ. ಅದನ್ನು ಮರೆಮಾಚಲು ಬಿಜೆಪಿಯ ಕೋಮುವಾದದ ಬೆದರು ಬೊಂಬೆ ತೋರಿಸಿ ಮತ ಬೇಟೆಗೆ ಕಾಂಗ್ರೆಸ್ ಹೊರಟಿದೆ.



೧೯೮೯ರಿಂದ ದೇಶದಲ್ಲಿ ಸಮ್ಮಿಶ್ರ ಸರ್ಕಾರ ಕೇಂದ್ರದಲ್ಲಿದೆ. ಇದು ನಿರಂಕುಶ ವ್ಯಕ್ತಿ ಕೇಂದ್ರಿತ ಆಡಳಿತವನ್ನು ನಿಯಂತ್ರಣದಲ್ಲಿ ಇಡುತ್ತದೆ. ಈಗಿನ ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್/ಬಿಜೆಪಿ ಪಕ್ಷಗಳು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಒಂದು ವೇಳೆ ಸಮ್ಮಿಶ್ರ ಸರ್ಕಾರ ಬರುವುದಾದರೆ ಅದನ್ನು ನಾನು ಸ್ವಾಗತಿಸುತ್ತೇನೆ.

**–ಪ್ರೊ. ಎಂ.ಜಿ. ಚಂದ್ರಶೇಖರಯ್ಯ,** ನಿವೃತ್ತ ಅಧ್ಯಾಪಕರು ಮತ್ತು ಲೇಖಕರು, ದೊಡ್ಡಬಳ್ಳಾಪುರ

## ಕನ್ನಡನುಡಿ ರಕ್ಷಣೆಗಾಗಿ ಹಕ್ಕೊತ್ತಾಯ

**ಬ**ಹುತೇಕ ಅಕ್ಷರಸ್ಥರು ಆಧುನಿಕ ತಂತ್ರಜ್ಞಾನದ ಅಗಾಧ ಬೆಳವಣಿಗೆ ಮೂಲಕ ಆದ ಹೊಸ ಹೊಸ ಆವಿಷ್ಕಾರಗಳಿಗೆ ತೆರೆದುಕೊಂಡು ಇವರೆಲ್ಲಾ ಮತಗಟ್ಟೆಗಳಿಗೆ ಹೋಗುವ ಅನುಮಾನ ಇರುವಾಗ ಇವರಿಗಾಗಿ ಬರೆಯಬೇಕಾಗಿರುವುದು ಎಷ್ಟು ಔಚಿತ್ಯಪೂರ್ಣ ಎಂದು ಭಾವಿಸಿಯೂ ಈ ನಾಲ್ಕು ಸಾಲುಗಳು. ಶಿಕ್ಷಣವೇತ್ತರು, ಮನೋವಿಜ್ಞಾನಿಗಳು ಆರು ವರ್ಷದವರೆಗಿನ ಮಕ್ಕಳಿಗೆ ಮನೆಯೇ ಪಾಠಶಾಲೆಯಾಗಬೇಕು ಎಂದು ಎಷ್ಟೇ ಹೇಳಿದರೂ, ಆಧುನಿಕತೆ ಮತ್ತು ಬದಲಾದ ಸಾಮಾಜಿಕ ಸಂದರ್ಭದಲ್ಲಿ ೩–೬ ವಯಸ್ಸಿನ ಮಕ್ಕಳನ್ನು ಪೂರ್ವಪ್ರಾಥಮಿಕ ಶಾಲೆಗಳಿಗೆ ಕಳಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇಲ್ಲಿಯೇ ಬಹುದೊಡ್ಡ ಮೋಸ/ ವಂಚನೆ ಜರುಗುತ್ತಿರುವುದು. ಈ *ಕಿಂಡರ್‌ಗಾರ್ಟನ್* ಶಾಲೆಗಳಿಗೆ ಯಾವುದೇ ಕಾಯ್ದೆ, ಕಾನೂನು, ಕಡಿವಾಣ ಗೊತ್ತು–ಗುರಿಗಳೇ ಇಲ್ಲ. ಇಲ್ಲಿಂದ ಹೊರಬಂದು ಆರನೇ ವರ್ಷಕ್ಕೆ ಒಂದನೇ ತರಗತಿಗೆ ಸೇರಿಸುವ ಹೊತ್ತಿಗೆ ಕಾಲ ಮಿಂಚಿಹೋಗಿ, ಈ ಮುಗ್ಧ ಕಂದಮ್ಮಗಳು ಇಂಗ್ಲೆಂಡಿನಲ್ಲಿ ಉತ್ಪಾದನೆಗೊಂಡ ಅರೆ–ಬರೆ ಸರಕುಗಳಂತೆ ಹೊರಬಂದಿರುತ್ತವೆ. ಕಾರಣ ಸರ್ಕಾರ ಸಮಾನ ಶಿಕ್ಷಣ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಎಲ್ಲರ ಮಕ್ಕಳಿಗೂ ಒಂದೇ ಸೂರಿನಡಿ ಸಮಾನ ಶಿಕ್ಷಣ ಸಿಗುವಂತೆ ಮಾಡಿದರೆ ಸಮಾಜದ ಮುಕ್ಕಾಲು ಪಾಲು ಸಮಸ್ಯೆ ಪರಿಹಾರವಾಗುತ್ತದೆ.

ರಾಜ್ಯಭಾಷಾ ಶಿಕ್ಷಣ ಮಾಧ್ಯಮಕ್ಕೆ ಸುಪ್ರೀಂನ ಪಂಚಪೀಠಾಧೀಶ್ವರರ ತೀರ್ಪಿನಿಂದ ಹಿನ್ನಡೆಯಾದುದಕ್ಕೆ ಸರ್ಕಾರವು ಪರಿಹಾರೋಪಾಯಗಳ ಬಗೆಗೆ ಗಂಭೀರವಾಗಿ ಪ್ರಯತ್ನಿಸಲೇ ಇಲ್ಲ. ನಮ್ಮ ಮುಖ್ಯಮಂತ್ರಿಗಳು ಆಸಕ್ತಿವಹಿಸಿ, ಸಮಾನ ಮನಸ್ಕ/ಸಮಸ್ಯೆಗಳ ಮುಖ್ಯಮಂತ್ರಿಗಳ ಸಭೆಯನ್ನು ಸಂಘಟಿಸಿ, ರಾಜ್ಯಾಂಗ ತಿದ್ದುಪಡಿಗಾಗಿ ಸಂಸತ್ತಿನಲ್ಲಿ ಮಸೂದೆ ತರಲು ಕೇಂದ್ರದ ಮೇಲೆ ಒತ್ತಡ ತರಬಹುದಿತ್ತು. ಆದರೆ ಅಧಿಕಾರಿಗಳ ದಾಖಲೆಯ ವರ್ಗಾವಣೆ, ಸರ್ಕಾರದ ಯೋಜನೆ / ಯೋಚನೆಗಳ ಜಾಹೀರಾತುಗಳ ವಿಕ್ರಮವನ್ನೇ ಸಾಧಿಸಿರುವ 'ಸದಾ ಸಿದ್ಧ ಸರ್ಕಾರ'ಕ್ಕೆ ಈ ವಿಷಯವಾಗಿ ಯೋಚಿಸಲೂ ಪುರುಸೊತ್ತಿಲ್ಲ! ಈ ನಾಡಿನ ಮಕ್ಕಳ ಪ್ರಾಥಮಿಕ ಶಿಕ್ಷಣವಾದರೂ ನಾಡ ಭಾಷೆಯಲ್ಲಿ ಆಗಬೇಕಾದ್ದು, ನಮ್ಮ ಹಕ್ಕೊತ್ತಾಯವಾಗಬೇಕು.. ಕನ್ನಡವನ್ನು ಕಟ್ಟುವ ಕೆಲಸ ಬಹು ಬಗೆಯಾದದ್ದು. ನುಡಿ ಕಟ್ಟುವ ಕೆಲಸವೆಂದರೆ, ನಾಡು ಕಟ್ಟುವ ಕೆಲಸ. ನುಡಿಯನ್ನು ಬಿಟ್ಟು ನಾಡಿಲ್ಲ. ಬಿಡಿ ಬಿಡಿಯಾಗಿ ಯಾವುದೇ ಒಂದು ಕೆಲಸದಿಂದ ನಾಡಿನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಸಾಹಿತ್ಯ ರಚನೆಯಿಂದ ತೊಡಗಿ, ನೆಲ ಉಳುವವರೆಗೆ ಕನ್ನಡಕ್ಕೆ ಎಲ್ಲವೂ ಬೇಕು. ಕನ್ನಡದ ಮೂಲಕವೇ ಎಲ್ಲವೂ ಆಗಬೇಕು ಈ ಹಕ್ಕೊತ್ತಾಯ. ಇದು ಈ ಚುನಾವಣಾ ಚರ್ಚೆಯ ವಿಷಯವಾಗಬೇಕು.



**–ಸಿ. ಚನ್ನಬಸವಣ್ಣ,** ಪುಸ್ತಕಪ್ರಕಾಶಕರು ಮತ್ತು ನಿವೃತ್ತ ಬ್ಯಾಂಕ್ ಉದ್ಯೋಗಿ, ಬಳ್ಳಾರಿ

## ಆದರೆ ಇಂತಹವರು ಎಲ್ಲಿದ್ದಾರೆ?

ಚುನಾವಣೆಯಲ್ಲಿ ಮತ ಚಲಾಯಿಸುವಾಗ ನಮ್ಮ ಮೊದಲ ಆದ್ಯತೆ ಪ್ರಾಮಾಣಿಕತೆ, ಸಾರ್ವಜನಿಕ ಜೀವದಲ್ಲಿನ ಸ್ವಚ್ಛ ವ್ಯಕ್ತಿತ್ವ. ನಾವು ಚಿಕ್ಕಂದಿನಿಂದಲೂ ಕಂಡು ಕೇಳಿದ ಶಾಂತವೇರಿ ಗೋಪಾಲಗೌಡರು ಮತ್ತು ಕಡಿದಾಳು ಮಂಜಪ್ಪನವರ ರಾಜಕೀಯ ಪ್ರಾಮಾಣಿಕತೆ ನಮ್ಮ ಕಣ್ಮುಂದೆ ನಿಲ್ಲುವುದರಿಂದ ಮತ ಹಾಕುವ ಮುನ್ನ ಅಂತಹವರನ್ನೇ ಆರಿಸಬೇಕೆಂಬ ಹಂಬಲ ನನ್ನದು.



**ನ**ಮ್ಮ ಜನ ಪ್ರತಿನಿಧಿಗಳು ಜನಪರವಾಗಿರಬೇಕು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪರವಾಗಿರಬೇಕು. ಹಳ್ಳಿಯಲ್ಲಿ ಬದುಕದಿದ್ದರೂ ಹಳ್ಳಿಯ ಜೀವನದ ಅರಿವಿರಬೇಕು. ರೈತರ ಬದುಕಿನ ನೋವು–ಸಂಕಟಗಳನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವವರಾಗಿರಬೇಕು. ಅವುಗಳನ್ನು ಶ್ರದ್ಧೆ ಮತ್ತು ಪ್ರಾಮಾಣಿಕತೆಗಳಿಂದ ಬಗೆಹರಿಸುವಂತಹ–ವರಾಗಿರಬೇಕು. ಜಾತಿ–ಧರ್ಮಗಳನ್ನು ಮೀರಿ ಮೌಢ್ಯಾಚರಣೆಗಳನ್ನು ವಿರೋಧಿಸುವ ಆತ್ಮವಿಶ್ವಾಸ ಉಳ್ಳವರಾಗಿರಬೇಕು. ದ್ವೇಷ ರಾಜಕಾರಣ ಮತ್ತು ಜಾತಿ ರಾಜಕಾರಣ ಮಾಡದೆ ಎಲ್ಲ ಸಮುದಾಯಗಳ ಜನರನ್ನು ಮುನ್ನಡೆಸುವಂತವರಾಗಿರಬೇಕು. ಆದರೆ ಇಂತಹವರು ಎಲ್ಲಿದ್ದಾರೆ?

**–ಶ್ರೀದೇವಿ ಶಾಮಣ್ಣ,** ರೈತ ಮಹಿಳೆ ಭಗವತಿಕೆರೆ

## ಮನಸ್ಸಿನ ಸ್ಥಿಮಿತ ಕಳೆದುಕೊಳ್ಳದೆ ಮತ ಚಲಾಯಿಸೋಣ

**ಇ**ವತ್ತಿನ ರಾಜಕೀಯವೆಂದರೆ ತತ್ಕಾಲೀನ ಆಮಿಷಗಳನ್ನೊಡ್ಡುವುದು, ಜಾತಿ–ಧರ್ಮಗಳ ಭಾವನೆಗಳನ್ನು ಕೆರಳಿಸುವ ಮಹಾದಂಧೆಯೇ ಆಗಿದೆ.. ಇಂತಹ ಸನ್ನಿವೇಶದಲ್ಲಿ ನಾವು ನಮ್ಮ ಮನಸ್ಸಿನ ಸ್ಥಿಮಿತ ಕಳೆದುಕೊಳ್ಳದೆ ಮತವನ್ನು ಎಚ್ಚರಿಕೆಯಿಂದ ಚಲಾಯಿಸಬೇಕಾಗಿದೆ.

ಆಯ್ಕೆಯಾದವನು ನಮ್ಮ ಬೊಗಸೆಯಲ್ಲಿ ಆಕಾಶದ ನಕ್ಷತ್ರಗಳನ್ನು ತಂದು ಸುರಿಯುವುದು ಬೇಡ. ಸದ್ಯಕ್ಕೆ ನಮ್ಮ ಸಂವೇದನೆಗಳಿಗೆ ಸ್ಪಂದಿಸಿ, ನಮ್ಮ ವೈಯಕ್ತಿಕ ಜೀವದಲ್ಲಿ ಹಸ್ತಕ್ಷೇಪ ಮಾಡದೆ ನಮ್ಮಪಾಡಿಗೆ ನಮ್ಮನ್ನು ನೆಮ್ಮದಿಯಿಂದ ಬದುಕಲು ಬಿಟ್ಟರೆ ಸಾಕು.



ಮತವೆಂದರೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಉಳಿವು. ಮಾನವೀಯತೆಯ ಉಳಿವು. ಈ ಅರಿವಿನಲ್ಲಿ ನಾವು ಮತ ಚಲಾಯಿಸಬೇಕಿದೆ. ಚಲಾಯಿಸುವುದರಲ್ಲಿ ನಾಡು ಮತ್ತು ದೇಶದ ಹಿತವಿದೆ.

**–ಅಬ್ಬಾಸ್ ಮೇಲಿನಮನಿ,** ನಿ.ಅಧ್ಯಾಪಕರು, ಲೇಖಕರು, ಬಾಗಲಕೋಟೆ

**ಶಿವಮೊಗ್ಗದ ಕರ್ನಾಟಕ ಸಂಘದ ಹಿಂದಿನ ಶಕ್ತಿಯಾಗಿ ಸಾಹಿತ್ಯ–ಸಂಸ್ಕೃತಿಗಳ ಪೋಷಕರೂ ಆಗಿದ್ದ ಕೆ.ಜಿ. ಸುಬ್ರಮಣ್ಯ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ಸಂತಾಪವನ್ನು ಸೂಚಿಸುತ್ತದೆ.–ಸಂ,**

# ಚರಕ ಆಸ್ಪತ್ರೆ

(ಮೆಟರ್ನಿಟಿ ಮತ್ತು ಮಲ್ಟಿಸ್ಪೆಷಾಲಿಟಿಸ್ಪತ್ರೆ)

ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿ ಸರ್ಕಲ್, ಸ್ಟೇಡಿಯಂ ಕ್ರಾಸ್ ಎದುರು, ಬಿ.ಹೆಚ್. ರಸ್ತೆ, ತುಮಕೂರು

ದೂರವಾಣಿ ಸಂಖ್ಯೆ :9845588925

'ಹೊಸ ಮನುಷ್ಯ' ಪತ್ರಿಕೆಗೆ ಹಾರ್ದಿಕ ಶುಭಾಶಯಗಳು

**ಜಿ. ಮಲ್ಲಿಕಾ ಬಸವರಾಜು,** ಎಂ.ಎ.,
ಆಡಳಿತಾಧಿಕಾರಿ
ಚರಕ ಆಸ್ಪತ್ರೆ, ತುಮಕೂರು

**ಡಾ. ಬಸವರಾಜು**
ಎಂ.ಬಿ.ಬಿ.ಎಸ್.,ಡಿ.ಜಿ.ಒ.,ಪಿ.ಜಿ.ಡಿ.ಹೆಚ್.ಹೆಚ್.ಎಂ.
ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು,
ಚರಕ ಆಸ್ಪತ್ರೆ ತುಮಕೂರು

'ಹೊಸ ಮನುಷ್ಯ' ಓದುಗರೆಲ್ಲರಿಗೂ ಹಾರ್ದಿಕ ಶುಭಾಶಯಗಳು

ನಿರ್ಮಲ ಮನಸ್ಸೇ ಧರ್ಮ
–ತಿರುವಳ್ಳುವರ್



**ಅವಿರತ ಪ್ರತಿಷ್ಠಾನ**
#೭೩, ೩ನೇ ಘಟ್ಟ,
೨ ನೇ ಮುಖ್ಯ ರಸ್ತೆ, ವಿನಾಯಕ ನಗರ
ವಿಜಯನಗರ, ಬೆಂಗಳೂರು – ೫೬೦ ೦೪೦

ಇದು ಕವಿ ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ವರ್ಷ

ಕವಿ ನೆನಪು

# ಅಡಿಗರ ಕಾವ್ಯ ಮತ್ತು ಹಿಂದುತ್ವ : ಕುದುರದ ಸಂಬಂಧ

–ಜಿ. ರಾಜಶೇಖರ



**ಆಧುನಿಕ ಕನ್ನಡ ಕಾವ್ಯ ಪ್ರಪಂಚದಲ್ಲಿ ಕಾವ್ಯ ಕಟ್ಟುವ ಕಸಬುದಾರಿಕೆಯಲ್ಲಿ ಗೋಪಾಲಕೃಷ್ಣ ಅಡಿಗರನ್ನು ಮೀರಿಸಿದವರಿಲ್ಲ ಎಂಬೊಂದು ಮಾತಿದೆ. ಆ ಕಸಬುದಾರಿಕೆಯ ಪಾತಗಳಿಂದ ಒಂದು ಕಾಲದಲ್ಲಿ ಕನ್ನಡ ಕಾವ್ಯದ ರಾಚನಿಕ ನೆಲೆಗಳನ್ನೇ ಬದಲಾಯಿಸಿ 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂದು ಕರೆಸಿಕೊಂಡ ಈ ಕವಿ ತಮ್ಮ ವೈದಿಕ ಪರಂಪರೆಯಿಂದ ಹೆಕ್ಕಿಕೊಂಡ ನುಡಿಗಟ್ಟು, ಉಪಮೆ ಸಂಕೇತಗಳ ಮೂಲಕ ಸಮಕಾಲೀನ ರಾಜಕಾರಣವನ್ನು ವ್ಯಾಖ್ಯಾನ ಮಾಡಲು ತೊಡಗಿದಾಗ ಅದೇ ಅವರ ರಾಜಕಾರಣದ ಆಯ್ಕೆಯನ್ನೂ ನಿರ್ಧರಿಸೀತೋ ಎಂಬ ಅನುಮಾನ ಮೂಡಿದ್ದು ಸಹಜವೇ ಆಗಿತ್ತು. ಇದಕ್ಕೆ ತಕ್ಕಂತೆ ಅವರು ಒಂದು ಮತೀಯ ರಾಜಕೀಯ ಪಕ್ಷದ ಸಕ್ರಿಯ ಸದಸ್ಯರಾದಾಗ ಅವರ ಕಾವ್ಯದ ಕಸುಬುದಾರಿಕೆ ಅಂದರೆ ಅವರ ಕಾವ್ಯ ಧರ್ಮದ ಮೇಲೆ ಮತ್ತು ಅದರ ಕೇಂದ್ರದಲ್ಲಿರುವ ಕವಿಯ ಲೋಕದೃಷ್ಟಿಯ ಮೇಲೆ ಏನು ಪರಿಣಾಮ ಉಂಟಾದೀತು ಎಂಬ ಕುತೂಹಲ ಹುಟ್ಟಿದ್ದೂ ಸಹಜ. ಈ ಕುತೂಹಲಕ್ಕೆ ಉತ್ತರ ಕೊಡುವ ಒಂದು ಪ್ರಯತ್ನ ಮಾಡಿದೆ ಈ ಲೇಖನ.**– ಸಂ.

**ಕ**ವಿ ಗೋಪಾಲಕೃಷ್ಣ ಅಡಿಗರು ಈಗ ಬದುಕಿರುತ್ತಿದ್ದರೆ ದೇಶದ ವಿದ್ಯಮಾನಗಳಿಗೆ ಹೇಗೆ ಸ್ಪಂದಿಸುತ್ತಿದ್ದರು? ತೀರಿಕೊಂಡಿರುವ ಕವಿಯನ್ನು ಅವರು ಅರಿಯದ ಭವಿಷ್ಯದ ಆಗುಹೋಗುಗಳ ಕುರಿತು ಹೀಗೆ ಕೇಳಬಹುದೆ? ಅಡಿಗರು ಬದುಕಿದ್ದಾಗ ತನ್ನ ಸುತ್ತಲಿನ ಬದುಕಿಗೆ ತಟಸ್ಥ ಪ್ರೇಕ್ಷಕನಾಗಿರಲಿಲ್ಲ. ಯಾವ ಕಡೆಗೂ ವಾಲದೆ, ತೀರ್ಪು ಕೊಡಲೋಸುಗವೇ ಕುರ್ಚಿ ಹಾಕಿಕೊಂಡು ಕೂತಿರುವ ಥರ್ಡ್ ಅಂಪೈರ್ ಥರಹ ಅವರು ಎಂದೂ ಬರೆದವರಲ್ಲ. ಅವರ ಓರಗೆಯ ಇನ್ನೊಬ್ಬ ಲೇಖಕ ಶಿವರಾಮ ಕಾರಂತರ ಹಾಗೆ ಅಡಿಗರಿಗೂ ದೇಶದ ರಾಜಕೀಯದ ಬಗ್ಗೆ ಖಚಿತವಾದ ನಿಲುವುಗಳಿದ್ದವು. ಕಾರಂತರ ಹಾಗೆ ಅಡಿಗರು ಸಹ ಚುನಾವಣೆಗೆ ನಿಂತಿದ್ದರು. ಅವರು ೧೯೭೦ರಲ್ಲಿ ಜನಸಂಘ [ಈಗಿನ ಬಿ.ಜೆ.ಪಿ.] ಅಭ್ಯರ್ಥಿಯಾಗಿ, ಬೆಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದರು. ಅದಕ್ಕೆ ಮೊದಲಾಗಲೀ, ಆನಂತರವಾಗಲೀ, ಅವರು ರಾಜಕೀಯದಲ್ಲಿ ಎಂದೂ ಸಕ್ರಿಯವಾಗಿ ಭಾಗವಹಿಸಿದವರಲ್ಲ; ಆದರೆ ಕೊನೆಯ ತನಕ ಅಡಿಗರು ತಮ್ಮ ಬಿ.ಜೆ.ಪಿ. ಪರ ಒಲವನ್ನು ಉಳಿಸಿಕೊಂಡಿದ್ದರು.

೧೯೯೨ ನವೆಂಬರ್ ೧೪ರಂದು ಅವರು ತೀರಿಕೊಂಡರು. ಅದೇ ಡಿಸೆಂಬರ್ ೬ರಂದು ಬಾಬರಿ ಮಸೀದಿ ಧ್ವಂಸವಾಯಿತು. ಆ 'ಕಾರ್ಯಕ್ರಮ'ಕ್ಕೆ ಪೂರ್ವಭಾವಿಯಾಗಿ ನಡೆದ ಬಿ.ಜೆ.ಪಿ. ನೇತೃತ್ವದ ರಾಮ ಜನ್ಮಭೂಮಿ ಚಳುವಳಿ ಅಡಿಗರ ಕಾಲದಲ್ಲೇ ಪ್ರಾರಂಭವಾಗಿತ್ತು. ಆ ಚಳುವಳಿಯ ಪರಿಣಾಮವಾಗಿ ಮುಸ್ಲಿಮ್ ಸಮುದಾಯದ ಕುರಿತ ಅಪನಂಬಿಕೆ, ಎಲ್ಲೆಡೆ ಹಬ್ಬಿತ್ತು. ಸಾಹಿತ್ಯ ವಲಯದಲ್ಲಿ ಅಡಿಗರಿಗೆ ಆಪ್ತರಾಗಿದ್ದವರಲ್ಲಿ ಹೆಚ್ಚಿನವರು ಈ ವಿದ್ಯಮಾನಗಳನ್ನು ಆತಂಕದಿಂದ ಗಮನಿಸುತ್ತಿದ್ದರು; ಆದರೆ ಅಡಿಗರು ಮಾತ್ರ ಆ ದಿನಗಳಲ್ಲೂ ಬಿ.ಜೆ.ಪಿ. ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದರು. ಬಾಬರಿ ಮಸೀದಿ ಧ್ವಂಸ, ಅದರ ಬೆನ್ನಿಗೇ ಮುಂಬಯಿಯಲ್ಲಿ ಸಂಭವಿಸಿದ ಹಿಂಸಾಕಾಂಡ, ಗುಜರಾತ್ – ೨೦೦೨, ೨೦೦೮ರಲ್ಲಿ ಒರಿಸ್ಸದ ಕಂಧಮಾಲ್ ಜಿಲ್ಲೆಯಲ್ಲಿ ಕ್ರೈಸ್ತರ ಮೇಲೆ ನಡೆದ ಹಿಂಸೆ, ೨೦೧೩ರಲ್ಲಿ ಉತ್ತರ ಪ್ರದೇಶದ ಮುಜಾಫರ್‌ನಗರದ ಹಿಂಸಾಚಾರ, ೨೦೧೪ರ ಲೋಕ ಸಭಾ ಚುನಾವಣೆ ಮತ್ತು ತದನಂತರದ ಘಟನೆಗಳು – ಇವೆಲ್ಲವೂ ಬಿಜೆಪಿಯ ಸಿದ್ಧಾಂತಕ್ಕೆ ಅನುಗುಣವಾಗಿಯೇ ಸಂಭವಿಸಿವೆ. ಹೀಗಿರುತ್ತ ಅಡಿಗರ ಬಿ.ಜೆ.ಪಿ ಪರ ಧೋರಣೆಯನ್ನು ಮರೆತು ಅವರ ಕಾವ್ಯವನ್ನು ಓದಲು ಸಾಧ್ಯವೇ? ಅಡಿಗರ ಕಾವ್ಯದ ಶ್ರೇಷ್ಠತೆಗೆ ನಾವು ಸಾಮಾನ್ಯವಾಗಿ ಕೊಡುವ ಉದಾಹರಣೆಗಳಲ್ಲಿ ಬಿ.ಜೆ.ಪಿಯ ಸಿದ್ಧಾಂತವನ್ನು ಪ್ರತಿಪಾದಿಸುವ ಅಥವಾ ಕಡೆಯ ಪಕ್ಷ ಆ ಕುರಿತು ಮೃದು ಧೋರಣೆಯನ್ನಾದರೂ ತಳೆದಿರುವ ಯಾವ ಕವಿತೆಯೂ ಇಲ್ಲ. ಆದರೆ ದೇವರು, ಧರ್ಮ, ಸಂಸ್ಕೃತಿ ಹಾಗೂ ಪರಂಪರೆಗಳ ಕುರಿತ ಬಿ.ಜೆ.ಪಿ. ನಿಲುವುಗಳನ್ನು ಅಲ್ಲಗಳೆಯುವ ಅವರ ಹಲವು ಶ್ರೇಷ್ಠ ಕವಿತೆಗಳನ್ನು ಸುಲಭವಾಗಿ ಹೆಸರಿಸಬಹುದು.

ಅಡಿಗರ ಜೀವಿತದ ಕಡೆಯ ಹತ್ತು ವರ್ಷ, ಅಂದರೆ ೧೯೮೨ರಿಂದ ೧೯೯೨, ಬಿ.ಜೆ.ಪಿ ತನ್ನ ರಾಮಜನ್ಮಭೂಮಿ ಚಳುವಳಿಯ ಮುಖಾಂತರ ಭಾರೀ ಜನಪ್ರಿಯತೆ ಗಳಿಸಿಕೊಂಡ ಕಾಲಾವಧಿ. ಉತ್ತರ ಪ್ರದೇಶದ ಫೈಜಾಬಾದ್ ನಗರದ ಅಯೋಧ್ಯೆಯೇ ರಾಮಜನ್ಮಭೂಮಿ ಎಂಬ ತನ್ನ ಹಠವನ್ನು ಸತ್ಯವೆಂದು ಸಾಬೀತುಪಡಿಸಲು ಬಿ.ಜೆ.ಪಿ. ರಾಮಾಯಣ ಒಂದು ಚಾರಿತ್ರಿಕ ದಾಖಲೆ ಎಂದು ವಾದಿಸತೊಡಗಿತು; ಮುಸ್ಲಿಮ್ ಸಮುದಾಯ ಬಾಬರಿ ಮಸೀದಿ ಮೇಲಿನ ಒಡೆತನವನ್ನು ಬಿಟ್ಟುಕೊಡಬೇಕು ಎಂಬ ತನ್ನ ಬೇಡಿಕೆಯನ್ನು ಸಮರ್ಥಿಸಿಕೊಳ್ಳಲು ಚರಿತ್ರೆಯನ್ನು ಹೀಗೆ ತಿರುಚುವುದು ಆ ಪಕ್ಷಕ್ಕೆ ಅನಿವಾರ್ಯವಾಗಿತ್ತು. ಬಿ.ಜೆ.ಪಿಯ ಈ ವಾದವನ್ನು ಇಡಿಯಾಗಿ ತಿರಸ್ಕರಿಸುವ ಅಡಿಗರ 'ಹದ್ದು' ಎಂಬ ಕವಿತೆಯ ಬಹು ಉಲ್ಲೇಖಿತ ಸಾಲೊಂದು ಹೀಗಿದೆ. *'ಕ್ರೌಂಚ ವಧದುದ್ವೇಗದಲಿ ಬತ್ತಲೆ ಸುತ್ತ ರಾಮಾಯಣ ಶ್ಲೋಕ ರೇಷ್ಮೆ ತೊಗಲು'* [ಸಮಗ್ರ ಕಾವ್ಯ – ಸಾಕ್ಷಿ ಪ್ರಕಾಶನ– ಬೆಂಗಳೂರು– ೧೯೭೬ ಪುಟ ೨೮೮]

ಅಡಿಗರ ಈ ಕವಿತೆ, ಹಿಂಸೆ ಎಸಗುವ ಜೀವವೇ, ತನಗಿಂತ ಬಲಶಾಲಿಯಾದ ಇನ್ನೊಂದು ಜೀವದ ಹಿಂಸೆಗೆ ಒಳಗಾಗುವ, ತನ್ಮೂಲಕ ಒಂದು ಜೀವ ಇನ್ನೊಂದು ಜೀವದ ಮಿತಿಯೂ ಆಗುವ ಮತ್ತು ತಾನೂ ಮಿತಿಗೆ ಒಳಪಡುವ ಪ್ರಕ್ರಿಯೆಯನ್ನು ವರ್ಣಿಸುತ್ತದೆ. 'ಹದ್ದು' ಎಂಬ ಶಬ್ದಕ್ಕೆ, ತನ್ನ ಹಸಿವಿಗೆ ತುತ್ತಾಗಬಲ್ಲ ನೆಲದ ಜೀವಗಳ ಮೇಲೆ ಕಣ್ಣನೆಟ್ಟು ಆಕಾಶದಲ್ಲಿ ಹಾರುವ ಪಕ್ಷಿ ಎಂಬ ಅರ್ಥವಿರುವ ಹಾಗೆ, ಮಿತಿ, ಸರಹದ್ದು, ಆವರಣ ಎಂಬ ಅರ್ಥಗಳೂ ಇವೆ. ಆಕ್ರಮಣಕ್ಕೆ ಒಳಗಾಗುವ ಅಸಹಾಯಕ ಜೀವವೇ, ತನ್ನ ಸರದಿ ಬಂದಾಗ, ತನಗಿಂತ ದುರ್ಬಲವಾದ ಇನ್ನೊಂದು ಜೀವದ ಮೇಲೆ ಆಕ್ರಮಣ ನಡೆಸುವುದನ್ನು ವರ್ಣಿಸುವುದರ ಮೂಲಕ ಕವಿ ಸ್ವಾತಂತ್ರ್ಯ ಮತ್ತು ಅದರ ಮಿತಿಗಳನ್ನು ಕಾಣಿಸುತ್ತಾರೆ. ಹಿಂಸೆಯೊಂದೇ ಸತ್ಯವಾಗಿ ಹಿಂಸೆ ಎಸಗುವ ಹಾಗೂ ಹಿಂಸೆಗೀಡಾಗುವ ಪಾತ್ರಗಳು ನಿರಂತರವಾಗಿ ಬದಲಾಗುತ್ತ ಹೋಗುವುದು ಲೋಕ ಜೀವನದ ನಿಯತಿ. ಹಿಂಸೆಯಿಂದ ಉಂಟಾದ ನೋವಿನ ಶೋಕ, ಶ್ಲೋಕವಾಗದೆ ಅದರಿಂದ ಬಿಡುಗಡೆ ಇಲ್ಲ.

'ಹದ್ದು' ಕವಿತೆಯಲ್ಲಿ ನೆಲದ ಹುಳಹುಪ್ಪಟೆ ಅರಸುತ್ತಿರುವ ಕೋಳಿಮರಿಯ ಮೇಲೆ ಹದ್ದು ಎರಗಿದಾಗ ಆ ಮರಿಯ ಕಿರುಚಾಟದ ಕೀಚು ಕರುಳನ್ನು ಇರಿಯುವಷ್ಟು ಮೊನಚು. ಬೇಟೆಗಾರನ ಬಾಣಕ್ಕೆ ಗುರಿಯಾಗಿ ಕ್ರೌಂಚಪಕ್ಷಿ ನೆಲಕ್ಕೆ ಉರುಳಿದೆ. ಅದಕ್ಕಾಗಿ ಮರುಗುವ ಅದರ ಜೋಡಿಹಕ್ಕಿಯ ಉದ್ವೇಗ ಕರುಣ ರಸವಾಗಿ, ಅಂದರೆ ಶ್ಲೋಕದ ಅಭಿವ್ಯಕ್ತಿಯಾಗಿ ಮಾರ್ಪಡದಿದ್ದರೆ, ಅದು ಬತ್ತಲು. ಕ್ರೌಂಚಪಕ್ಷಿಗಳ ಜೋಡಿಯಲ್ಲಿ ಒಂದು ಬೇಟೆಗಾರನ ಬಾಣಕ್ಕೆ ಬಲಿಯಾದದ್ದನ್ನು ಕಣ್ಣಾರೆ ಕಂಡ ಋಷಿ ವಾಲ್ಮೀಕಿ, ಬೇಟೆಗಾರನಿಗೆ ಶಾಪ ಕೊಡುತ್ತಾರೆ; ನಂತರ ಆ ಬಗ್ಗೆ ವ್ಯಥೆ ಪಡುತ್ತಾರೆ; ಆ ವ್ಯಥೆಯಲ್ಲೂ ತನ್ನ ಶಾಪ ಛಂದಸ್ಸಿನ ಲಯದಲ್ಲಿ ಇರುವುದರ ಬಗ್ಗೆ ಹಿಗ್ಗುತ್ತಾರೆ. ಹೀಗೆ ರಾಮಾಯಣ ಕಾವ್ಯ ರಚನೆಯಾಯಿತು. ಅದು ಕವಿ ಕಲ್ಪನೆಯಲ್ಲಿ ಮೂಡಿಬಂದ ಕಾವ್ಯವೇ ಹೊರತು ಚರಿತ್ರೆಯ ದಾಖಲೆ ಅಲ್ಲ. ರಾಮಾಯಣ ಒಂದು ಕಾವ್ಯ; ಜೊತೆಗೆ ಅದು ಒಂದು ಕಥನ ಪರಂಪರೆ. ವಾಲ್ಮೀಕಿ ಆದಿಕವಿ ಎನಿಸಿಕೊಂಡರೂ, ಅವರಿಗಿಂತ ಮೊದಲೇ ಇದ್ದಿರಬಹುದಾದ ರಾಮಾಯಣದ ಬಗೆಬಗೆಯ ಪಠ್ಯಗಳು ದೇಶಾದ್ಯಂತ ಮತ್ತು ದೇಶದ ಹೊರಗೂ ಜನಪ್ರಿಯವಾಗಿವೆ.

ಬಿ.ಜೆ.ಪಿ.ಯ ರಾಮಜನ್ಮ ಭೂಮಿ ಚಳುವಳಿ ರಾಮಾಯಣವನ್ನು ಒಂದು ಕಾವ್ಯ ಮತ್ತು ಕಥನ ಪರಂಪರೆ ಎಂದು ಯಾವತ್ತೂ ಪರಿಗಣಿಸಿಲ್ಲ. ಮುಸ್ಲಿಮರಿಗೆ

ಕುರಾನ್ ಮತ್ತು ಕ್ರೈಸ್ತರಿಗೆ ಬೈಬಲ್ ಪವಿತ್ರ ಗ್ರಂಥಗಳಾಗಿರುವ ಹಾಗೆ ರಾಮಾಯಣ ಹಿಂದುಗಳ ಪವಿತ್ರ ಗ್ರಂಥ ಎಂಬ ಎಂಬ ಹಠದಲ್ಲೇ ಹುಟ್ಟಿಕೊಂಡ ಚಳುವಳಿ ಅದು. ಯಾವುದೇ ಪವಿತ್ರ ಗ್ರಂಥ, ಅದರ ಅಧಿಕೃತ ಪಠ್ಯವೊಂದನ್ನು ಹೊರತು ಪಡಿಸಿ ಇತರ ಪಾಠಗಳನ್ನು, ಭಿನ್ನ ಬಗೆಯ ಅರ್ಥೈಸುವಿಕೆಗಳನ್ನು ಮನ್ನಿಸುವುದೂ ಇಲ್ಲ; ಸಹಿಸುವುದೂ ಇಲ್ಲ. ರಾಮಾಯಣ, ಹಿಂದುಗಳ ಪವಿತ್ರ ಗ್ರಂಥ. ಮತ್ತು ಅದರಲ್ಲಿ ಹೇಳಿರುವುದು ಎಲ್ಲವೂ ಪ್ರಶ್ನಾತೀತ ಎಂಬ ಬಿ.ಜೆ.ಪಿಯ ಹಠ. ಆ ಮಹಾಕಾವ್ಯ ಹಾಗೂ ಅದರ ಶ್ರೀಮಂತ ಕಥನ ಪರಂಪರೆಗೆ ಮಾಡಿದ ಅಪಚಾರ. ಮೇಲೆ ಉಲ್ಲೇಖಿಸಿದ 'ಹದ್ದು' ಕವಿತೆಯ ಮಾತು ಕೂಡ ಅದನ್ನೇ ಸೂಚಿಸುತ್ತಿರುವುದಲ್ಲವೇ?

ಅಡಿಗರ ಇನ್ನೊಂದು ಮುಖ್ಯ ಕವಿತೆ 'ಶ್ರೀ ರಾಮನವಮಿಯ ದಿವಸ' ಕವಿತೆಯ ಶೀರ್ಷಿಕೆಯೇ ಹೇಳುವಂತೆ, ಅದರ ವಸ್ತು ಇಡಿಯಾಗಿ, ರಾಮ ಮತ್ತು ರಾಮಾಯಣ. 'ಹದ್ದು' ಹಾಗೂ 'ಶ್ರೀ ರಾಮನವಮಿಯ ದಿವಸ' – ಎರಡು ಕವಿತೆಗಳನ್ನೂ ಕವಿ ಬರೆದದ್ದು, ರಾಮಜನ್ಮಭೂಮಿ ಚಳುವಳಿಗಿಂತ ಹಲವು ದಶಕಗಳ ಮೊದಲು. ಮಂದಿರ ಮಸೀದಿ ವಿವಾದ ತಲೆದೋರಿದ ದಿನಗಳಲ್ಲೆ ಅಡಿಗರು ಈ ಕವಿತೆಗಳನ್ನು ಬರೆದಿದ್ದರೆ ಅವು ಹೇಗಿರುತ್ತಿದ್ದವು? ಕವಿಯ ಬಗ್ಗೆ ಇಂತಹ ಊಹಾಪೋಹದ ಪ್ರಶ್ನೆ ಕೇಳುತ್ತಿರುವುದು, ಅವರನ್ನು ಕಟಕಟೆಯಲ್ಲಿ ನಿಲ್ಲಿಸಿ ತನಿಖೆ ಮಾಡುವುದಕ್ಕಲ್ಲ. ರಾಮ ಜನ್ಮ ಭೂಮಿ ಚಳುವಳಿಯ ನೇತೃತ್ವ ವಹಿಸಿದ ರಾಜಕೀಯ ಪಕ್ಷವೇ ಅಧಿಕಾರದಲ್ಲಿ ಇರುವ ಈ ದಿನಗಳಲ್ಲಿ ರಾಮನ ಕುರಿತ ಅಡಿಗರ ಕವಿತೆಗಳನ್ನು ನಾವು ಹೇಗೆ ಓದಿಕೊಳ್ಳಬೇಕು? 'ಶ್ರೀ ರಾಮನವಮಿಯ ದಿವಸ' ಕವಿತೆಯ ಶ್ರೀ ರಾಮನಂತೂ, ಖಂಡಿತ ರಾಮಜನ್ಮಭೂಮಿ ಚಳುವಳಿಯ ಶ್ರೀ ರಾಮನಲ್ಲ. ಕವಿತೆಯ ರಾಮ ಸಿದ್ಧಗೊಂಡ ಪ್ರತಿಮೆಯೂ ಅಲ್ಲ; ಚಾರಿತ್ರಿಕ ಅಸ್ತಿತ್ವವುಳ್ಳವನೂ ಅಲ್ಲ. ಅವನು ಕಾಯುವಿಕೆ, ವ್ರತ ಮತ್ತು ತಪಸ್ಸುಗಳ ಮುಖಾಂತರ ಮತ್ತೆ ಮತ್ತೆ ಕಲ್ಪಿಸಿಕೊಳ್ಳಬೇಕಾದ, ಆ ಮೂಲಕ 'ಆಗಿಸಿಕೊಳ್ಳಬೇಕಾದ' ಪುರುಷೋತ್ತಮ. ರಾಮನ ಬಗೆಗೆ ಇರುವ ಈ ಕವಿತೆ ಕೊನೆಗೊಳ್ಳುವುದು ಮತ್ತೆ ಅವನು, ನಮಗೆ ಕಾಣಿಸಿಕೊಂಡಾನೆಯೆ ಎಂಬ ಸಂದೇಹದಲ್ಲಿ.

**'ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು**
**ಆ ಅಂಥ ಪುರುಷೋತ್ತಮನ ರೂಪರೇಖೆ'**

[ಸಮಗ್ರ ಕಾವ್ಯ – ಪುಟ ೩೨೩]

ಈ ಉದ್ಧೃತದಲ್ಲಿ ತಪಸ್ಸಿನ ಫಲವಾಗಿ ನಾವು ಕಾಣುವುದು ಸಾಕ್ಷಾತ್ ಪುರುಷೋತ್ತಮನನ್ನಲ್ಲ; ನಾವು ಕಂಡರಿಸುವುದು, ಧ್ಯಾನಸ್ಥವಾದ ನಮ್ಮದೇ ಚಿತ್ತ ಮತ್ತೆ ಕೆತ್ತಿದ ಅವನ ರೂಪರೇಖೆಯನ್ನು. ಯುಗಯುಗಗಳಲ್ಲಿ ತಪಸ್ವಿಗಳು, ಕವಿಗಳು, ಕತೆಗಾರರು, ಶಿಲ್ಪಿಗಳು ಮತ್ತು ನಟರು, ರಾಮನನ್ನು ಕಂಡರಿಸಿದ್ದಾರೆ. 'ಶ್ರೀರಾಮನವಮಿಯ ದಿವಸ'ದ ಕೊನೆಯ ಎರಡು ಸಾಲುಗಳಲ್ಲಿ ಕವಿ ಈ ನಮ್ಮ ಕಾಲದಲ್ಲೂ ಮತ್ತೆ ರಾಮನನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ? ಎಂಬ ಸಂದೇಹವನ್ನು ಹೇಳಿಕೊಳ್ಳುವುದರ ಜೊತೆಗೆ ರಾಮಾಯಣದ ಸಮೃದ್ಧವೂ ವೈವಿಧ್ಯಮಯವೂ ಆದ ಕಥನ ಪರಂಪರೆಗೂ ತನ್ನ ನುಡಿನಮನ ಸಲ್ಲಿಸುತ್ತಿದ್ದಾರೆ. ೧೯೯೨ ಡಿಸೆಂಬರ್ ೬ರಂದು 'ಬಾಬರಿ ಮಸೀದಿಯ ಜಾಗವೇ ರಾಮ ಜನ್ಮ ಭೂಮಿ; 'ಮಂದಿರವಲ್ಲೇ ಕಟ್ಟುವೆವು' ಎಂಬ ಹಿಂದುತ್ವದ ಹಠ ಗೆದ್ದಿತು; ನೂರಾರು ವರ್ಷಗಳ ರಾಮಾಯಣ ಪರಂಪರೆಯೂ ಒಮ್ಮಿಂದೊಮ್ಮೆಗೆ ಅಪ್ರಸ್ತುತವಾಗಿ ಬಿಟ್ಟಿತು. 'ಶ್ರೀ ರಾಮನವಮಿಯ ದಿವಸ'ದ ಕೊನೆಯಲ್ಲಿ ಕವಿ, ತನಗೆ ತಾನೆ ಎಂಬಂತೆ ಕೇಳಿದ ಪ್ರಶ್ನೆ ಈಗಲೂ ಪ್ರಸ್ತುತವೆ?

ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ದೇಶ, ಭಾಷೆ, ಧರ್ಮ ಮತ್ತು ಸಂಸ್ಕೃತಿ ಕಾಲ ಕ್ರಮದಲ್ಲಿ ಅವನತಿಯೆಡೆಗೆ ಸಾಗುವ ಸಹಜ ವಿದ್ಯಮಾನವನ್ನು ಬಿ.ಜೆ.ಪಿ. ಬ್ರಾಂಡಿನ ದೇಶಭಕ್ತರು ಸುತರಾಂ ಒಪ್ಪಿಕೊಳ್ಳುವುದಿಲ್ಲ. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ಚರಿತ್ರೆಯ ಚಲನಶೀಲತೆಯನ್ನು ಕೂಡ ಬಿ.ಜೆ.ಪಿ. ಒಪ್ಪಿಕೊಳ್ಳುವುದಿಲ್ಲ. ಈ ದೃಷ್ಟಿಯಿಂದ ಅಡಿಗರ ಹೆಚ್ಚಿನ ಶ್ರೇಷ್ಠ ಕವಿತೆಗಳ ಧೋರಣೆ, ಸಹ ಆ ಬಿ.ಜೆ.ಪಿ.ಗೆ ಅಪಥ್ಯ ಮತ್ತು ಅಮಾನ್ಯ. ಉದಾಹರಣೆಗೆ 'ಆನಂದತೀರ್ಥರಿಗೆ' ಎಂಬ ಅವರ ಕವಿತೆ. ಆನಂದತೀರ್ಥರು ಅಥವಾ ಶ್ರೀ ಮಧ್ವಾಚಾರ್ಯರು ಉಡುಪಿಯ ಕೃಷ್ಣಮಠ ಹಾಗೂ ಎಂಟು ಮಾಧ್ವ ಮಠಗಳನ್ನು ಸ್ಥಾಪಿಸಿದರು. ತಾವು ಈ ಕ್ಷೇತ್ರದ ೮೦೦ ವರ್ಷಗಳ ಮಾಧ್ವ ಪರಂಪರೆಯ ವಾರಸುದಾರರು ಎಂಬುದು ಇಂದಿನ ಮಾಧ್ವಯತಿಗಳ ಧೋರಣೆ. ಭೂಮಿ, ಚಿನ್ನ, ನಗದು ಇತ್ಯಾದಿ ಪೂರ್ವಾರ್ಜಿತ ಆಸ್ತಿಯ ಹಾಗೆ ಪರಂಪರೆ ಕೂಡ ನಮಗೆ ಅದರ ಮೂಲ ರೂಪದಲ್ಲಿ ಇಡಿಯಾಗಿ ದಕ್ಕುವಂತಹದ್ದೋ? ಸಂದು ಕಡಿಯದ ತೈಲಧಾರೆಯಂತೆ ಪರಂಪರೆಯೂ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುವಂತಹದ್ದೋ? ಸಾತತ್ಯವೇ ಅದರ ಗುಣವೋ? ಈ ಪ್ರಶ್ನೆಗಳು ಯತಿಗಳನ್ನು ಬಾಧಿಸುವುದಿಲ್ಲ.

ಪರಂಪರೆಯ ಉತ್ತರಾಧಿಕಾರದ ಮಟ್ಟಿಗೆ ಉಡುಪಿಯ ಯತಿಗಳು ಬಿ.ಜೆ.ಪಿ.ಯ ಹಿಂದುತ್ವ ಸಿದ್ಧಾಂತವನ್ನು ಒಪ್ಪಿಕೊಂಡವರು. ಹಿಂದುತ್ವದ ಸಂಘ ಪರಿವಾರದ ಒಂದು ಮುಖ್ಯ ಘಟಕವಾಗಿರುವ ವಿಶ್ವಹಿಂದು ಪರಿಷತ್ತಿನ ಎರಡು ಅತ್ಯಂತ ಮಹತ್ವಪೂರ್ಣ 'ಧರ್ಮಸಂಸತ್ತು'ಗಳು ಉಡುಪಿಯಲ್ಲಿ ಸಮಾವೇಶಗೊಂಡದ್ದು ಆಕಸ್ಮಿಕವಲ್ಲ. ಉಡುಪಿಯಲ್ಲಿ ೧೯೮೫ರಲ್ಲಿ ಜರಗಿದ ಮೊದಲ ಧರ್ಮಸಂಸತ್ತಿನಲ್ಲಿ 'ಬಾಬರಿ ಮಸೀದಿಯಲ್ಲಿರುವ ರಾಮ ಮಂದಿರದ ಬೀಗ ತೆಗೆಯಿರಿ' ಎಂದು ಸರಕಾರಕ್ಕೆ ಒತ್ತಾಯದ ಕರೆ ನೀಡಲಾಯಿತು. ಇದು ರಾಮಜನ್ಮ ಭೂಮಿ ಚಳುವಳಿಯ ನಿರ್ಣಾಯಕ ನಡೆಗಳಲ್ಲಿ ಒಂದು. ೨೦೧೭ರ ನವೆಂಬರ್ ತಿಂಗಳಿನಲ್ಲಿ ಉಡುಪಿಯಲ್ಲಿ ನಡೆದ ಇನ್ನೊಂದು ಧರ್ಮಸಂಸತ್ ಮಂದಿರ ನಿರ್ಮಾಣ, ಸಂವಿಧಾನದಲ್ಲಿ ತಿದ್ದುಪಡಿ ಮುಂತಾದ ಮಹತ್ವದ ವಿಷಯಗಳನ್ನು ವಿಶ್ವ ಹಿಂದೂ ಪರಿಷತ್ ಮುಂದೆ ಕೈಗೆತ್ತಿಕೊಳ್ಳುವ ಸುಳಿವು ನೀಡಿದೆ.

ಅಡಿಗರಿಗೆ ಉಡುಪಿ ಅಪರಿಚಿತ ಊರೇನೂ ಅಲ್ಲ. ಉಡುಪಿಗೆ ಸಮೀಪದ ಕುಂದಾಪುರ ತಾಲೂಕಿನ ಮೊಗೇರಿ ಎಂಬ ಗ್ರಾಮ, ಕವಿಯ ಹುಟ್ಟೂರು. ೧೯೬೮ರಿಂದ ೧೯೭೭ರ ವರೆಗೆ ಅವರು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. 'ಆನಂದತೀರ್ಥ'ರಿಗೆ ಕವಿತೆಯಲ್ಲಿ ಅಡಿಗರು ಮಧ್ವಾಚಾರ್ಯರು ಮತ್ತು ಅವರು ಸ್ಥಾಪಿಸಿದ ಕ್ಷೇತ್ರಗಳ ಬಗ್ಗೆ ತಾವು ಕೇಳಿದ್ದು ಮತ್ತು ಕಂಡದ್ದು – ಎರಡನ್ನೂ ಹೇಳುತ್ತಾರೆ. ಕವಿತೆಯ ಮೊದಲ ನಾಲ್ಕು ಚರಣಗಳಲ್ಲಿ ಕವಿ , ಮಹಾಮಹಿಮರಾದ ಆನಂದತೀರ್ಥರ ಸಾಧನೆಗಳ ಬಗ್ಗೆ ತಾನು ಕೇಳಿದ್ದನ್ನು ನಿರೂಪಿಸುತ್ತಾರೆ. ಉಡುಪಿಯಲ್ಲಿ ಅವರು ಕಣ್ಣಾರೆ ಕಂಡದ್ದು ಮಾತ್ರ ಅವರು ಕೇಳಿ ತಿಳಿದ ಕ್ಷೇತ್ರದ ಉಜ್ವಲ ಪರಂಪರೆಗೆ ವ್ಯತಿರಿಕ್ತವಾಗಿದೆ. ಮಧ್ವಾಚಾರ್ಯರು ಸ್ಥಾಪಿಸಿದ ಕ್ಷೇತ್ರ 'ಕೃಷ್ಣಮಠದಷ್ಟಮಠದಗ್ನಿದಿವ್ಯ'ದ ಹಾಗೆ ಕವಿಗೆ ಕಾಣುತ್ತದೆ. ಅದು 'ಗಡು ಮೀರಿ ಕಿರುಗುಡುವ ಗೂಢಯಂತ್ರ'. ಕವಿ ಕೇಳಿ ಮಾತ್ರ ಬಲ್ಲ. ಮಧ್ವಾಚಾರ್ಯರು 'ಆನಂದತೀರ್ಥ ಮಡುಗಟ್ಟಿ ಕಾರಂಜಿಗಳ ಪುಟಿಸಿ, ಗಾರಲ್ಲಿ ಕುಡಿಯೊಡೆಸಿದವರಾದರೆ, ಈಗ ಕ್ಷೇತ್ರದಲ್ಲಿ 'ಪ್ರಾಣಮುಖ್ಯರ ಮುಟ್ಟು ಚಟ್ಟು ತೊಟ್ಟಿಗಳಲ್ಲಿ ನಿಂತ ನೀರಿನ ವಾಸಿಸುತ್ತಲೆಲ್ಲ ವರ್ತಮಾನ ಕಾಲದ ಉಡುಪಿಯಲ್ಲಿ ಮುನ್ನೆಲೆಗೆ ಬಂದ ಮೌಲ್ಯಗಳ ಬಗ್ಗೆ ಕವಿ ಹೇಳುವುದು:

**'ಧನಕನಕ ವಸ್ತು ವಾಹನದ ಭೋಗದ ಮೇಲೆ**
**ವಿಷವೂರಿ ಮಲಗಿರುವ ವಿಕೃತ ಮುದ್ರೆ**
**ಇಲ್ಲಸಲ್ಲದ ಅಲ್ಲು ಕೂಡ ಸಲ್ಲದ ಚಿನ್ನ**
**ಸವರಿ ಇಟ್ಟಿರುವ ಹಿತ್ತಾಳೆ ಟಂಕೆ**

[ಸಮಗ್ರ ಕಾವ್ಯ – ಪುಟ ೩೨೫]

ಕಳೆದ ನೂರು ವರ್ಷಗಳ ಹಿಂದುತ್ವದ ಚರಿತ್ರೆಯಲ್ಲಿ ಧಾರ್ಮಿಕ ಸಂಸ್ಥೆಗಳ ಬಗ್ಗೆ ಇಷ್ಟು ಕಟುವಾದ ವಿಮರ್ಶೆ ಯಾವತ್ತೂ ಕಂಡದ್ದಿಲ್ಲ. ಭಕ್ತಿ, ಆರಾಧನೆ, ಕುರುಡು ನಂಬಿಕೆ ಮತ್ತು ತಾತ್ತ್ವಿಕ ನಿಷ್ಠೆಗಳ ನಡುವೆ ಇರುವ ವ್ಯತ್ಯಾಸದ ಪರಿವೆಯೇ ಇಲ್ಲದ ಸಿದ್ಧಾಂತ ಅದು. ಆನಂದತೀರ್ಥರು ಸ್ಥಾಪಿಸಿದ ಉಡುಪಿಯ ಮಠೀಯ ವ್ಯವಸ್ಥೆ ಸೋಗಲಾಡಿತನದ ಮತಮಾನ್ಯವಾಗಿ ಮಾರ್ಪಟ್ಟು ಈಗ ತನ್ನ ಭಾರಕ್ಕೆ ತಾನೇ ಕುಸಿಯುತ್ತಿದೆ. ಕವಿ ಮತ್ತೊಮ್ಮೆ ಆನಂದತೀರ್ಥರ ಬರವಿಗಾಗಿ ಮೊರೆಯಿಡುತ್ತಾರೆ.

**'ನಿಮ್ಮ ನಿಮ್ಮಂಥವರ ಕಾದು ಕುಳಿತಿದೆ ತೀರ**
**ದಾಸೆ ಲಾಂಚುಗಳಲ್ಲಿ ತುಯ್ಯುತ್ತಿದೆ.'**

[ಸಮಗ್ರ ಕಾವ್ಯ – ಪುಟ ೩೨೫]

ಕವಿಗೆ, ತನ್ನದು ಕೈಗೂಡದ ಆಸೆ ಎಂದು ಗೊತ್ತಿದೆ. ಆನಂದತೀರ್ಥರು ಮತ್ತೊಮ್ಮೆ ಹುಟ್ಟಿ ಬರಲಿ ಎಂಬ ಕವಿಯ ಹಾರೈಕೆ, ಇನ್ನೊಂದು ತೀರದ ಅಂದರೆ ಮುಕ್ತಿಯ ಹಂಬಲವೂ ಹೌದು; ಅದು ತೀರದ ಅಂದರೆ ಎಂದಿಗೂ ಈಡೇರದ ಆಸೆಯೂ ಹೌದು. ಅನ್ಯಮತೀಯರ ಆಕ್ರಮಣವೊಂದೇ ಸ್ವಧರ್ಮ ಎದುರಿಸುತ್ತಿರುವ ಕುತ್ತು ಎಂದು ಬೊಬ್ಬೆ ಹಾಕುವ ಹಿಂದುತ್ವವಾದಿಗಳಿಗೆ, ಅಡಿಗರ ಈ ಕವಿತೆ ಪಥ್ಯವಾಗುವುದು ಅಸಾಧ್ಯವೆಂದೇ ತೋರುತ್ತದೆ.



**ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ)**

**(ಉಡುಪಿಯ ಜಿ. ರಾಜಶೇಖರ್ ಕನ್ನಡದ ಹಿರಿಯ ರಾಜಕೀಯ ಮತ್ತು ಸಾಹಿತ್ಯ ಚಿಂತಕರಲ್ಲೊಬ್ಬರು)**

# ವಚನಕಾರ್ತಿಯರಲ್ಲಿ ಸ್ತ್ರೀತ್ವದ ಶೋಧ : ಭಾಗ-೨

-ಡಾ. ಗೀತಾ ವಸಂತ



ವಚನಾಗಾರ್ತಿಯರಲ್ಲಿ ಸ್ತ್ರೀತ್ವದ ಶೋಧ ಹಾಗೂ ಅದರಿಂದ ದೊರೆತ ಭಿನ್ನ ಅರಿವುಗಳು ಹೊಸಲೋಕ ಮೀಮಾಂಸೆಯನ್ನು ಕಟ್ಟುವಷ್ಟು ಶಕ್ತವಾಗಿವೆ. ದೇಹ ಮೂಲದಿಂದಲೇ ಗುರುತಿಸುತ್ತ, ಅದರ ಕುರಿತು ಮಿಥ್ಯಾ ಪರಿಕಲ್ಪನೆಗಳನ್ನು ಕಟ್ಟುತ್ತ ದೇಹವನ್ನು ಸೂತಕದ ಮನೆಯಾಗಿಸಿ ಲಜ್ಜೆಪಡುವ ಭಾವವಾಗಿ ರೂಪಿಸಿದ ರಚನೆಗಳನ್ನು ನಿರಚಿಸುವಲ್ಲಿ ಈ ಶೋಧವು ಮಹತ್ವದ ಕಾರ್ಯವಾಗಿದೆ. ದೇಹಾನುಭವಗಳ ಮೂಲಕವೇ ದೇವಾನುಭವವನ್ನು ಹೊಂದುವ ವಚನಗಾರ್ತಿಯರ ಪರಿ ಸ್ತ್ರೀಪ್ರಧಾನವಾದ ತಾಂತ್ರಿಕಾಚರಣೆಗಳಿಂದ ಸ್ಫೂರ್ತಿ ಪಡೆದಿರುವುದು ಅಲ್ಲಲ್ಲಿ ಹೊಳೆಯುತ್ತದೆ. ಸಂಸ್ಕೃತಿಯ ಗುಪ್ತಧಾರೆಗಳೊಂದಿಗಿನ ಈ ಅನುಸಂಧಾನವು ಸ್ತ್ರೀತ್ವದ ಶೋಧಕ್ಕೆ ಹೊಸ ಆಯಾಮ ಒದಗಿಸಿದೆ. ಅಷ್ಟೇ ಅಲ್ಲ ಈ ಹೊಸ ಅರಿವಿನ ಅಭಿವ್ಯಕ್ತಿಗೆ ಹೊಸಭಾಷೆಯನ್ನೇ ರೂಪಿಸಿಕೊಳ್ಳುವ ಸವಾಲನ್ನು ಸಮರ್ಥವಾಗಿ ಎದುರಿಸಿದ ವಚನಗಾರ್ತಿಯರು ತಮ್ಮ ದೇಹಭಾಷೆಯನ್ನು ಅನುಭಾವದ ಭಾಷೆಯಾಗಿ ರೂಪಿಸಿಕೊಂಡು ಬೆರಗು ಮೂಡಿಸಿದ್ದಾರೆ.

**ಅತ್ತೆ ಮಾಯೆ, ಮಾವ ಸಂಸಾರಿ**
**ಮೂವರು ಮೈದುನರು ಹುಲಿಯಂತವದಿರು**
**ನಾಲ್ವರು ನಗೆವೆಣ್ಣು ಕೇಳು ಕೆಳದಿ**
**ಐವರು ಭಾವದಿರನೊಯ್ವ ದೈವವಿಲ್ಲ**
**ಆರು ಪ್ರಜೆಯತ್ತಿಗೆಯರ ಮೀರಲಾರೆನಾ**
**ತಾಯೆ, ಹೇಳುವಡೆ ಏಳುಪ್ರಜೆ ತೊತ್ತಿರ ಕಾಹು**
**ಕರ್ಮವೆಂಬ ಗಂಡನ ಬಾಯ ಟೊಣೆದು**
**ಹಾದರವನಾಡುವೆನು ಹರನ ಕೂಡೆ..**

(ಪು-೬, ಶಿ.ಶ.ದ.ಸಂ)

ಮೇಲಿನ ವಚನದಲ್ಲಿ ಕುಟುಂಬ ಹಾಗೂ ಅದರೊಳಗಿನ ಸಂಬಂಧಗಳ ಚಿತ್ರವಿದೆ. ಅವೆಲ್ಲವೂ ಹೆಣ್ಣನ್ನು ಬಂಧಿಸುವಲ್ಲಿಯೇ ಸ್ಥಿತವಾಗಿವೆ. 'ಹುಲಿಯಂಥವರು' ಎಂಬಲ್ಲಿ ಭಯದ ಅಭಿವ್ಯಕ್ತಿಯಿದೆ. ಭಯವು ಮೌನವನ್ನು ಉತ್ಪಾದಿಸುತ್ತದೆ. ಈ ಭಯ ಹಾಗೂ ಮೌನಗಳನ್ನು ಒಡೆದುಕೊಂಡು ಅಕ್ಕ ಮಾತನಾಡಬೇಕಿದೆ. ಇಲ್ಲಿ ಬರುವ ಸಂಖ್ಯೆಗಳು ಹಾಗೂ ಬಂಧನ-ಬಿಡುಗಡೆಯ ಆಶಯಗಳು ಆಧ್ಯಾತ್ಮಿಕವಾದ ಹಂಬಲದ ರೂಪಕಗಳಾಗಿವೆ ಎಂಬುದನ್ನು ಅಲಕ್ಷಿಸುವಂತಿಲ್ಲ. ಅದರ ಜೊತೆ ಜೊತೆಗೇ ರೂಪಕದ ನೆಲೆಯಲ್ಲೇ ಆದರೂ ಅಕ್ಕಮಹಾದೇವಿ ಕುಟುಂಬ-ಮದುವೆಗಳು ಒಡ್ಡುವ ಬಂಧನ ಹಾಗೂ ಅದನ್ನು ಮೀರಬೇಕಾದ ಪ್ರತ್ಯಕ್ಷ ಸವಾಲಿನ ಕುರಿತು ಮಾತನಾಡುತ್ತಿದ್ದಾಳೆ.

ಒಂದು ಒಳಧಾರೆಯಾಗಿ, ಸಪ್ತಧ್ವನಿಯಾಗಿ ಇದು ಅನುರಣಿಸುತ್ತದೆ. ವಚನದ ಎರಡನೇಯ ಭಾಗದಲ್ಲಿ ಇದನ್ನೆಲ್ಲ ಮೀರುವ ಚಿತ್ರಣವಿದೆ. 'ಕರ್ಮವೆಂಬ ಗಂಡನ ಬಾಯ ಟೊಣೆದು ಹಾದರವಾನಾಡುವೆನು ಹರನ ಕೂಡೆ' ಎಂಬಲ್ಲಿ ಅದು ಸ್ಫೋಟಿಸುತ್ತದೆ. ಪಾತಿವ್ರತ್ಯವೆಂಬ ಮೌಲ್ಯವನ್ನು ಹೇರುತ್ತಾ 'ಹಾದರ' ಎಂಬ ಪದವನ್ನು ಕೇಳಿದರೆ ಬೆಚ್ಚಿಬೀಳುವ 'ಸಭ್ಯ' ಸಮಾಜಕ್ಕೆ ಅಕ್ಕ ಹೀಗೆ ವಿದ್ರೋಹಾತ್ಮಕವಾಗಿ ಪ್ರತಿಕ್ರಿಯಿಸುತ್ತಾಳೆ. ಒಲುಮೆಯ ಕೂಟವನ್ನು ಅಧಿಕಾರ ಸಂಬಂಧವಾಗಿಸುವ ಮದುವೆಗೆ, ಅದರಾಚೆಗಿನ ಕೂಟವನ್ನು ಹಾದರವೆಂದು ಅನೈತಿಕವೆಂದು ನಿರೂಪಿಸುತ್ತಾ ಹೆಣ್ಣಿನ ದೇಹ-ಮನಸ್ಸುಗಳನ್ನು ನಿಯಂತ್ರಿಸುವ ವ್ಯವಸ್ಥೆಗೆ ಇದು ವಿದ್ರೋಹ. 'ಹರನ ಕೂಡುವ ಹಾದರ' ತಾಂತ್ರಿಕ ಮಿಲನದ ಸಂಜ್ಞೆ ಆಗಿದ್ದರೂ, ಲೋಕದ ನೈತಿಕ-ಅನೈತಿಕವೆಂಬ ದ್ವಂದ್ವವನ್ನು ಏಕಕಾಲಕ್ಕೆ ಅಲ್ಲಗಳೆಯುವ ಪ್ರತಿರೋಧವೂ ಆಗಿ ತೋರುತ್ತದೆ. ಇದು ಗಂಡನ ಹಕ್ಕಿನ ಕೂಟವಲ್ಲ, ಕರ್ತವ್ಯದ ಒಪ್ಪಿಸುವಿಕೆಯೂ ಅಲ್ಲ, ಪಾವಿತ್ರ್ಯದ ಭಯ ಬಂಧನ ಯಾವುದೂ ಇಲ್ಲದ, ಕಲ್ಪಿತ ನೈತಿಕತೆಯ ಹಂಗಿಲ್ಲದ ಉತ್ಕಟ ಮಿಲನವಿದು. ತನ್ನ ಹೆಣ್ತನದ ಅನುಭವವನ್ನು ಅದರ ಸಂಭ್ರಮವನ್ನು ನಿರಾಕರಿಸದೇ, ಅದರ ಸುತ್ತಲಿನ ದಿಗ್ಬಂಧನಗಳನ್ನು ಮಾತ್ರ ಪ್ರತಿರೋಧಿಸುತ್ತ ಜ್ವಲಿಸುವ ಸ್ವಾಯತ್ತ ನೆಲೆಯೊಂದು ಇಲ್ಲಿ ಕಾಣಿಸುತ್ತದೆ.

ಅಕ್ಕಮಹಾದೇವಿಯ ಬತ್ತಲು ಕೂಡ ಆಕೆ ಕಾಯದ ಲಜ್ಜೆಯಳಿಯುವ ಒಂದು ಕ್ರಮ. ಆಕೆ ನಿಜವಾಗಿಯೂ ಬತ್ತಲಾಗಿ ಅಲೆದಳೇ? ಅದು ವಾಸ್ತವಿಕವಾಗಿ ಸಾಧ್ಯವೇ? ಎಂಬ ಪ್ರಶ್ನೆಗಳು ಏಳುತ್ತವೆ. ಅವಧೂತರ ದಿಗಂಬರತ್ವವನ್ನೋ ಜೈನ ಮುನಿಗಳ ದಿಗಂಬರತ್ವವನ್ನೋ, ಆಧ್ಯಾತ್ಮಿಕ ನೆಲೆಯಲ್ಲಿ ಒಪ್ಪಿಕೊಳ್ಳುವ ಸಮಾಜಕ್ಕೆ ಅದೇ ನೆಲೆಯಲ್ಲಿ ಹೆಣ್ಣಿನ ಬೆತ್ತಲನ್ನು ಒಪ್ಪಿಕೊಳ್ಳುವುದು ಕಷ್ಟ ಎಂಬುದೇ ನಮ್ಮ ನೋಟದ ಕ್ರಮದಲ್ಲಿರುವ ಮಿತಿ. ಹೆಣ್ಣುದೇಹವನ್ನು ಉಪಭೋಗದ ದೃಷ್ಟಿಯಿಂದ ಮಾತ್ರ ನೋಡುವಾಗ ಈ ತೊಡಕು. ಒಂದೇ ಹೆಣ್ಣುದೇಹ ಸೂಳೆಯಾಗಿ, ಪತಿವ್ರತೆಯಾಗಿ ಸ್ವೀಕೃತವಾಗುವ ಬಗೆಗಳೇ ಭಿನ್ನ! ಇಂಥ ಭಿನ್ನವಳಿದ ಅಕ್ಕಮಹಾದೇವಿ ಅದನ್ನು ಸಹಜವಾಗಿ ಕಾಣಬೇಕಾದ ನೋಟಕ್ಕೆ ಕಣ್ತೆರೆಸುತ್ತಾಳೆ.

ತನ್ನ ದೇಹದ ಗುಪ್ತಾಂಗಗಳನ್ನು ತನಗಾಗಿ ಮುಚ್ಚಿಕೊಳ್ಳಬೇಕಿಲ್ಲ; ಅದು ನಿಮಗೆ ತೊಂದರೆಯಾಗಬಾರದೆಂದು ಮುಚ್ಚಿಕೊಂಡೆ ಎನ್ನುವುದು ಅವಳ ಅಂತಃಸತ್ವದ ಪರಿಪಕ್ವತೆಯನ್ನು ಎತ್ತಿಹಿಡಿಯುತ್ತದೆ. 'ಲಜ್ಜೆಯಳಿಯುವುದು' ಲೋಕ ಕಟ್ಟಿಕೊಂಡ ನೈತಿಕ ಮಾನದಂಡಗಳನ್ನು ಮೀರಿ ಅತ್ಯಂತ ಎತ್ತರದ ನೆಲೆಯೊಂದನ್ನು ಕಾಣಿಸುತ್ತದೆ. ಮುಚ್ಚಿಕೊಳ್ಳುವ ಎಳಸುತನ ಹಾಗೂ ಬಯಲಾಗುವ ಪಕ್ವತೆಯೆರಡೂ ಇಲ್ಲಿ ಮುಖಾಮುಖಿಯಾಗುತ್ತವೆ.

ಅಕ್ಕಮಹಾದೇವಿ ಮದುವೆ, ಕುಟುಂಬ, ದೇಹಸೂತಕ, ಲಜ್ಜೆ, ಇವೆಲ್ಲವನ್ನೂ ಮೀರುವುದಕ್ಕೆ ಸಾಮಾಜಿಕ ಕ್ರಾಂತಿಯ ಉದ್ದೇಶವಿತ್ತೆಂದೋ, ಅದು ಅವಳ ವ್ಯಕ್ತಿ ಸ್ವಾತಂತ್ರ್ಯದ ಹೋರಾಟವೆಂದೋ ಸೂಚಿಸುವುದು ಪಾರ್ಶ್ವಿಕ ನೋಟವಾಗುತ್ತದೆ. ದೇಹಾನುಭವವನ್ನು ನಿರಾಕರಿಸದೇ ಅದನ್ನು ಕೀಳಾಗಿ ಕಾಣದೆ, ಕೀಳರಿಮೆಯಿಂದ ನರಳದೆ ಅದಕ್ಕೊಂದು ಘನತೆಯನ್ನು ನೀಡುವ ಅವಳ ನಿಲುವು ನಮಗಿಂದು ಕ್ರಾಂತಿಕಾರಕವಾಗಿ ತೋರುತ್ತಿದೆ. ಆದರೆ ಇದು ಅವಳಿಗೆ ಅನಿವಾರ್ಯವಾಗಿತ್ತು. 'ಎನ್ನ ಕಾಯ ಮಣ್ಣು, ಜೀವ ಬಯಲು' ಎಂಬ ಅರಿವಿನ ತುದಿ ತಲುಪಿದ ಅಕ್ಕನಿಗೆ ಜೀವದ ಬಯಲು ತೆರೆಯಲು ಕಾಯದ ಕಳವಳಗಳನ್ನು ದಾಟಲೇಬೇಕಾದ ಅನಿವಾರ್ಯತೆಯಿತ್ತು. ವಿವಾಹ, ಕುಟುಂಬ, ಸಮಾಜ ಮುಂತಾದ ರಚನೆಗಳು ನಿರ್ಮಿಸಿದ ತನ್ನ ಪಾತ್ರಗಳನ್ನು ಭೇದಿಸಿ ಹೊರಬರುವುದು ಮತ್ತೊಂದು ದೊಡ್ಡ ಸವಾಲಾಗಿತ್ತು. ಆಕೆ ಅದನ್ನು ಧೈರ್ಯದಿಂದ ನಿರ್ವಹಿಸಿದಳು. ಲೋಕನಿಂದನೆ, ಲೋಕಾಪವಾದಗಳಿಗೆ ಅಂಜದೆ, ಆಕೆ ತನ್ನನ್ನು ಶೋಧಿಸಿಕೊಂಡ ರೀತಿ ಹಾಗೂ ಅಭಿವ್ಯಕ್ತಿಸಿಕೊಂಡ ರೀತಿ ಇಂದಿಗೂ ಒಂದು ಮಾದರಿ..

ಜ್ಞಾನವೆಂಬುದು ಅಧಿಕಾರ ಎಂಬ ಪರಿಕಲ್ಪನೆ ವಾಸ್ತವಕ್ಕೆ ಹತ್ತಿರವಾದುದು. ಗಂಡಿನ ಅನುಭವಗಳೇ ಜ್ಞಾನವಾದಾಗ ಅದು ಪೂರ್ಣವಾಗಲಾರದು. ಪಿತೃಪ್ರಧಾನ ಚಿಂತನಾ ವ್ಯವಸ್ಥೆ ತನ್ನ ಎಲ್ಲ ಸಂಸ್ಥೆಗಳ ಮೂಲಕ, ಅಮೂರ್ತ, ಸಾಂಸ್ಕೃತಿಕ ಮಾದರಿಗಳ ಮೂಲಕ ಅಧಿಕಾರವಾಗಿ ಹೆಣ್ಣನ್ನು ನಿಯಂತ್ರಿಸುತ್ತದೆಂಬುದನ್ನು ಈಗಾಗಲೇ ಚರ್ಚಿಸಿದ್ದೇವೆ. ಈ 'ಜ್ಞಾನ'ವನ್ನು ಹಾಗೂ ಅದನ್ನು ಸ್ಥಾಪಿಸುವ ಅಧಿಕಾರವನ್ನು ನಿರಚಿಸುವ ಪರಿಯನ್ನು ಶರಣೆ ನೀಲಮ್ಮನ ವಚನದಲ್ಲಿ ಕಾಣಬಹುದು.

**ಮಡದಿಯೆಂಬ ಶಬ್ದ ನಿಶ್ಶಬ್ದವಳಿದಡೆ**
**ನಾನೀಗ ನಿಜಸುಖಿ ಬಸವಾ**
**ಬಸವನಂಗ ಕಂಡಡೆ ನಾನು ಪರಿಣಾಮಿ**
**ಬಸವನ ಹರುಷವ ಕಂಡರಿದಡೆ**
**ನಾವೈಕ್ಯ ಸಂಪನ್ನೆಯಯ್ಯಾ ಸಂಗಯ್ಯ**

(ಪು.೫೭೭ ಶಿ.ಶ. ವ. ಸಂ)

ಅಧಿಕಾರ ಸಂಬಂಧವನ್ನು ಸೂಚಿಸುವ 'ಮಡದಿ' ಶಬ್ದವನ್ನು ನಿಶ್ಶಬ್ದಗೊಳಿಸಬೇಕೆನ್ನುವ ನೀಲವ್ವನ ಪರಿ ಅಚ್ಚರಿ ಹುಟ್ಟಿಸುತ್ತದೆ. ಅವಳು 'ಬಸವಾ!' ಎಂದು ಕರೆಯುವ ಧಾಟಿಯಲ್ಲೇ ಸಲಿಗೆಯ, ಸಮಾನತೆಯ ಧ್ವನಿಯಿದೆ. ಅಧಿಕಾರ

ಸಂಬಂಧದ ಬದಲಿಗೆ ಜೀವಸಂಬಂಧವೊಂದನ್ನು ಸ್ಥಾಪಿಸುವ ಹಂಬಲವಿದೆ. 'ಪಾತ್ರ'ಗಳ ರಚನೆಯನ್ನು ದಾಟುವ ಧೈರ್ಯ ಇಲ್ಲಿ ನೀಲವ್ವನದು.

**ಹಂದೆಯಲ್ಲ ನಾನು**
**'ಹರುಷದ ಧೈರ್ಯವುಳ್ಳ ಹೆಣ್ಣು ನಾನು**
**ಕಾಮವಳಿದವಳಾನಾದ ಕಾರಣ**
**ಬಸವನ ಹಂಗೆನಗಿಲ್ಲವಯ್ಯಾ.** (ಅದೇ.ಪು)

ನೀಲವ್ವ ಇಲ್ಲಿ ದಾಂಪತ್ಯದ ಒಳಗಿದ್ದುಕೊಂಡೇ ಮಾತನಾಡುತ್ತಿರುವುದು ವಿಶೇಷ. ತಾನು ಹೇಡಿಯಲ್ಲ, ಧೈರ್ಯವುಳ್ಳ ಹೆಣ್ಣು ಎಂದು ಹೇಳುವ ಆತ್ಮವಿಶ್ವಾಸವು ಅವಳಿಗೆ ಬಸವನ ಅನುಭಾವ ಮಾರ್ಗದ ಮೂಲಕವೇ ದೊರೆತಿರುವುದು ಸುಳ್ಳಲ್ಲ. ಕಾಮವಳಿದು ದೇಹಭಾವ ಹಾಗೂ ಅದಕ್ಕಂಟಿದ ಅಧಿಕಾರ ರಚನೆಗಳಿಂದ ಆಚೆ ಬಂದ ನೀಲವ್ವ 'ವಿಚಾರ ಸತಿಯಾದೆ ನಾನಯ್ಯಾ ಸಂಗಯ್ಯ' ಎನ್ನುವುದು ಅವಳ ಬೌದ್ಧಿಕ ಪ್ರಖರತೆಯ ದ್ಯೋತಕ. ಪುರುಷನಿಗೆ ಸರಿಸಮನಾಗಿ ತತ್ವ ಜಿಜ್ಞಾಸೆಗಿಳಿಯುವ, ಪ್ರತ್ಯಕ್ಷವಾಗಿ ಆಧ್ಯಾತ್ಮಿಕ ಸಾಧನೆ ಮಾಡುವ 'ವಿಚಾರ ಪತ್ನಿಯರು' ಈ ಶರಣ ಚಳವಳಿಯ ಬಹುದೊಡ್ಡ ಕೊಡುಗೆ. ನೀಲವ್ವ, ಗೊಗ್ಗವ್ವೆ, ಸತ್ಯಕ್ಕ, ಮುಕ್ತಾಯಕ್ಕ, ಮೋಳಿಗೆ ಮಹಾದೇವಿ, ಅಮುಗೆ ರಾಯಮ್ಮ, ಕದಿರ ರೆಮ್ಮವ್ವ ಮುಂತಾದವರ ವಚನಗಳಲ್ಲಿ ಕಾಣುವ ಆಧ್ಯಾತ್ಮಿಕ ಅನುಭವ ಹಾಗೂ ಜಿಜ್ಞಾಸೆಗಳು ಅವರು ತಲುಪಿದ ಅರಿವಿನ ಎತ್ತರವನ್ನು ಕಾಣಿಸುತ್ತವೆ. 'ಅರಿವಿನ ಸ್ಫೋಟ'ದ ಪ್ರಕ್ರಿಯೆ ರೂಪಿಸಿದ ಹೆಣ್ತನದ ಹೊಸ ಮಜಲಿಗೆ ದಾರಿಮಾಡಿಕೊಡುತ್ತವೆ.

**ಮೊಲೆಮುಡಿ ಬಂದಡೆ ಹೆಣ್ಣೆಂಬರು**
**ಮೀಸೆಕಾಸೆ ಬಂದಡೆ ಗಂಡೆಂಬರು**
**ಈ ಉಭಯದ ಜ್ಞಾನ**
**ಹೆಣ್ಣೋ ಗಂಡೋ ನಾಸ್ತಿನಾಥಾ?** – ಗೊಗ್ಗವ್ವೆ
(ಪು.೫೪೭ ಶಿ.ಶ. ವ. ಸಂ)

**ಗಂಡು ಮೋಹಿಸಿ ಹೆಣ್ಣ ಹಿಡಿದಡೆ**
**ಅದು ಒಬ್ಬರ ಒಡವೆ ಎಂದು ಅರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಹಿಡಿದಡೆ**
**ಉತ್ತರವಾವುದೆಂದರಿಯಬೇಕು**
**ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ**
**ನಾಸ್ತಿನಾಥನು ಪರಿಪೂರ್ಣನೆಂಬೆ** – ಗೊಗ್ಗವ್ವೆ
(ಪು.೨೪೬ ಶಿ.ಶ. ವ. ಸಂ)

ಹೆಣ್ಣಿನೊಳಗೆ ಗಂಡು ತಿಳಿವು, ಗಂಡಿನೊಳಗೆ ಹೆಣ್ಣು ಅರಿವು ಇರಲು ಸಾಧ್ಯವೆಂಬ ಮಾತನ್ನು ಈ ವಚನಗಳ ಆಶಯದಲ್ಲಿ ಕಾಣಬಹುದು. ದೇಹಾನುಭವಗಳಿಂದ ಹುಟ್ಟುವ ಜ್ಞಾನವೂ, ದೇಹದ ಉಭಯವಳಿದ ಜ್ಞಾನವೂ ವಚನಕಾರ್ತಿಯರ ರಚನೆಗಳಲ್ಲಿ ಹೀಗೆ ಕಾಣಿಸುತ್ತದೆ. ಆದ್ದರಿಂದ ವಚನಗಾರ್ತಿಯರ ವಚನಗಳೆಲ್ಲ ಒಂದೇ ತಾತ್ವಿಕತೆಯ ಕೂಸುಗಳಲ್ಲ. ತೀರ ಖಾಸಗಿಯಾದ ದೈಹಿಕ ಹಾಗೂ ಮಾನಸಿಕ ಉತ್ಕಟತೆಯೂ, ಪರಿಸರದಿಂದ ಹೀರಿ ಇಂಗಿಸಿಕೊಂಡ ಅರಿವೂ ಬೇರೆ ಬೇರೆ ಪ್ರಮಾಣದಲ್ಲಿ ಬೆರೆತು ಅವರಲ್ಲಿ ಕೆಲಸ ಮಾಡುತ್ತದೆಯೆನಿಸುತ್ತದೆ. ಪ್ರತಿ ಹೆಣ್ಣಿನ ದೇಹದ ಭಾಷೆಯೇ ಬೇರೆ, ಅವಳ ಅರಿಯುವ ಪರಿಯೇ ಬೇರೆ ಎಂಬುದು ಇಲ್ಲಿ ಕಾಣಿಸುತ್ತದೆ.

ಕೆಳವರ್ಗ ಕೆಳಜಾತಿಗಳಿಂದ ಬಂದ ಅನೇಕ ವಚನಗಾರ್ತಿಯರು ಈ ಮಹಾಮಾರ್ಗವನ್ನು ಕಟ್ಟಲು ಕೈ ಜೋಡಿಸಿದ್ದಾರೆಂಬುದು ಸ್ತ್ರೀತ್ವದ ಶೋಧದ ಬಹುಮುಖ್ಯ ಅಂಶ. ಇವರು ಸಂಸಾರವನ್ನು ನಿರಾಕರಿಸಲಿಲ್ಲ. ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಲೇ ಅದನ್ನು ಮೀರುವ ದಾರಿಗಳನ್ನು ಶೋಧಿಸಿದರು. ಕಾಯಕ ಅವರ ಮಂತ್ರವಾಯಿತು. ಕಾಯಕ ಕೊಡುವ ಬಿಡುಗಡೆ ಎಷ್ಟು ಮುಖ್ಯವೋ ಅದು ಸ್ಥಾಪಿಸಬಹುದಾದ ಸಮಾನತೆಯ ನೆಲೆಯೂ ಅಷ್ಟೇ ಮುಖ್ಯ. ಕೀಳರಿಮೆ – ಅಧೀನತೆಗಳಿಂದ ಮುಕ್ತರಾದ ಈ ವಿಚಾರಪತ್ನಿಯರು 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪು ಶಿವಂಗೆ' ಎಂಬ ನಂಬಿಕೆಯ ದಾರಿಯಲ್ಲಿ ನಡೆದರು. ಕುಟುಂಬ ವ್ಯವಸ್ಥೆಯೊಳಗಿದ್ದೇ ಬದಲಾವಣೆ ತರುವ ನಿಲುವು ಇದು. ಬಯಲು ಹೊರಗೆಲ್ಲೋ ಇಲ್ಲ ಅದು ತಮ್ಮೊಳಗೇ ಇದೆಯೆಂಬ ಅರಿವಿನಿಂದಾಗಿ ಆಲಯದೊಳಗಿದ್ದೇ ಬಯಲನ್ನು ಮುಟ್ಟುವ, ಬಯಲಾಗುವ ದಾರಿಗಳನ್ನು ನಿರ್ಮಿಸಲು ಸಾಧ್ಯವಾಯ್ತು. ಸೂಳೆ ಸಂಕವ್ವೆಯಂಥವರು ನಿರ್ಭೀತಿಯಿಂದ ಹೊಸನುಡಿಗಳನ್ನು ಆಡಲು ಸಾಧ್ಯವಾಯಿತು. ಲೋಕದ ಮೀಮಾಂಸೆಯನ್ನೇ ತಲೆಕೆಳಗು ಮಾಡಲು ಧೈರ್ಯ ಲಭಿಸಿತು.

**ಎಲ್ಲರ ಗಂಡಂದಿರು ಮೇಲೆ**
**ಎನ್ನ ಗಂಡ ಕೆಳಗೆ, ನಾ ಮೇಲೆ**
**ಕದಿರರೆಮ್ಮಿಯೊಡೆಯ ಗುಮ್ಮೇಶ್ವರ**
(ಕದಿರರೆಮ್ಮವ್ವೆ, ಶಿ.ಶ. ವ. ಸಂ)

ಲೈಂಗಿಕತೆ, ಅಧಿಕಾರ ಸ್ವರೂಪ, ಮೇಲರಿಮೆ, ಪ್ರಾಮುಖ್ಯತೆ ಹೀಗೆ ಎಲ್ಲ ವಿಷಯಗಳಲ್ಲೂ ಲೋಕದ ಗಂಡಂದಿರು ಮೇಲೆ ಆದರೆ, ಅನುಭಾವಿಗಳಲ್ಲಿ ಇದು ಕೆಳಗು ಮೇಲಾಗಬಹುದು! ಎನ್ನ ಗಂಡಂಗೆ ಅಂಡದ ಬೀಜವಿಲ್ಲ ಎಂಬುದು ಹುಟ್ಟು–ಸಾವುಗಳನ್ನು ದಾಟಿದ ಮುಕ್ತ ಸ್ಥಿತಿಯನ್ನು ಹೇಳುತ್ತಿರಬಹುದು. ಅಹಂನಿರಸನವನ್ನೂ ಹೇಳುತ್ತಿರಬಹುದು. ತಾಂತ್ರಿಕಾಚರಣೆಗಳಲ್ಲಿ ಸ್ತ್ರೀಯೇ ಮುಖ್ಯವಾಗಿದ್ದು, ಅವಳು ಮೇಲಾದ ಭಾವ–ಭಂಗಿಗಳ ಅಭಿವ್ಯಕ್ತಿಯಿದ್ದಿರಬಹುದು. ಹೀಗೆ ಈ ವಚನ ತರ್ಕ–ಅರ್ಥದ ಅಂತಿಮ ನಿಲುವಿಗೆ ನಿಲುಕದೇ ಉಳಿದುಬಿಡುತ್ತದೆ. ಸೂಳೆ ಸಂಕವ್ವೆಯಂಥ ವಚನಗಾರ್ತಿಯ ಹುಟ್ಟೇ ದೇಹ – ಅರಿವು–ಸಾಮಾಜಿಕ ದಿಗ್ಬಂಧನಗಳ ತ್ರಿಕೋನ ವಿನ್ಯಾಸದಲ್ಲಿ ಬಂಧನ ದಾಟಿ ಧುಮ್ಮಿಕ್ಕಿದ ಅಭಿವ್ಯಕ್ತಿಯ ಹುಟ್ಟಾಗಿ ಕಾಣಿಸುತ್ತದೆ. ದೊರೆತಿರುವ ಅವಳ ಒಂದೇ ವಚನ ಮೇಲ್ನೋಟಕ್ಕೆ ಏಕದೇವ ನಿಷ್ಠೆಯ ಕುರಿತು ಹೇಳುತ್ತದೆ. 'ವ್ರತ ಹೀನರನ್ನು ಬೆರೆದಡೆ ಕಾದ ಕತ್ತಿಯಲಿ ಕೈ, ಕಿವಿ, ಮೂಗ, ಕೊಯ್ದರಯ್ಯಾ' ಎಂಬಲ್ಲಿ ಅದು ವ್ಯಕ್ತವಾಗುತ್ತದೆ. ಸೂಳೆ ಸಂಕವ್ವೆಯೆಂದು ತನ್ನ ಕಾಯಕಮೂಲ ಹೆಸರನ್ನು ನಿರ್ಭಿಡೆಯಿಂದ ಹೇಳುವಲ್ಲಿ, ನಿರ್ಲಜ್ಜೇಶ್ವರಾ ಎಂಬ ಅಂಕಿತವನ್ನಿರಿಸಿಕೊಳ್ಳುವಲ್ಲಿಯೇ ಅವಳ ಪ್ರತಿರೋಧ ಗುಪ್ತಗಾಮಿನಿಯಾಗಿ ಹರಿಯುವುದು ಅರಿವಾಗುತ್ತದೆ. ಲಜ್ಜೆಯಿರುವುವಳು ಗೃಹಿಣಿ, ಲಜ್ಜೆಯಳಿದವಳು ಸೂಳೆ ಎಂಬುದು ಲೋಕದ ಗ್ರಹಿಕೆಯಾದರೆ, 'ಲಜ್ಜೆ ಅಳಿಯುವ' ಆಧ್ಯಾತ್ಮಿಕ ಗ್ರಹಿಕೆಯನ್ನು ಮುಖಾಮುಖಿಯಾಗಿಸಿ ಅವಳು ಲೋಕದ ಗ್ರಹಿಕೆಯ ಮಿತಿಗಳನ್ನು ತೋರಿಸುತ್ತಾಳೆ.

ವಚನಾಗಾರ್ತಿಯರಲ್ಲಿ ಸ್ತ್ರೀತ್ವದ ಶೋಧ ಹಾಗೂ ಅದರಿಂದ ದೊರೆತ ಭಿನ್ನ ಅರಿವುಗಳು ಹೊಸಲೋಕ ಮೀಮಾಂಸೆಯನ್ನು ಕಟ್ಟುವಷ್ಟು ಶಕ್ತವಾಗಿವೆ. ದೇಹ ಮೂಲದಿಂದಲೇ ಗುರುತಿಸುತ್ತ, ಅದರ ಕುರಿತು ಮಿಥ್ಯಾ ಪರಿಕಲ್ಪನೆಗಳನ್ನು ಕಟ್ಟುತ್ತ ದೇಹವನ್ನು ಸೂತಕದ ಮನೆಯಾಗಿಸಿ ಲಜ್ಜೆಪಡುವ ಭಾವವಾಗಿ ರೂಪಿಸಿದ ರಚನೆಗಳನ್ನು ನಿರಚಿಸುವಲ್ಲಿ ಈ ಶೋಧವು ಮಹತ್ವದ ಕಾರ್ಯವಾಗಿದೆ. ದೇಹಾನುಭವಗಳ ಮೂಲಕವೇ ದೇವಾನುಭವವನ್ನು ಹೊಂದುವ ವಚನಗಾರ್ತಿಯರ ಪರಿ ಸ್ತ್ರೀಪ್ರಧಾನವಾದ ತಾಂತ್ರಿಕಾಚರಣೆಗಳಿಂದ ಸ್ಫೂರ್ತಿ ಪಡೆದಿರುವುದು ಅಲ್ಲಲ್ಲಿ ಹೊಳೆಯುತ್ತದೆ. ಸಂಸ್ಕೃತಿಯ ಗುಪ್ತಧಾರೆಗಳೊಂದಿಗಿನ ಈ ಅನುಸಂಧಾನವು ಸ್ತ್ರೀತ್ವದ ಶೋಧಕ್ಕೆ ಹೊಸ ಆಯಾಮ ಒದಗಿಸಿದೆ. ಅಷ್ಟೇ ಅಲ್ಲ ಈ ಹೊಸ ಅರಿವಿನ ಅಭಿವ್ಯಕ್ತಿಗೆ ಹೊಸಭಾಷೆಯನ್ನೇ ರೂಪಿಸಿಕೊಳ್ಳುವ ಸವಾಲನ್ನು ಸಮರ್ಥವಾಗಿ ಎದುರಿಸಿದ ವಚನಗಾರ್ತಿಯರು ತಮ್ಮ ದೇಹಭಾಷೆಯನ್ನು ಅನುಭಾವದ ಭಾಷೆಯಾಗಿ ರೂಪಿಸಿಕೊಂಡು ಬೆರಗು ಮೂಡಿಸಿದ್ದಾರೆ. ಶ್ರಮಿಕ ಲೋಕದ ವಚನಗಾರ್ತಿಯರು ಸ್ತ್ರೀತ್ವದ ಸ್ವಾಭಿಮಾನ, ಸಮಾನತೆಯ ಇನ್ನೊಂದು ನೆಲೆಯನ್ನು ಸ್ಥಾಪಿಸಿ ಅದಕ್ಕೆ ಸಮಾಜಿಕ ಘನತೆ ಪ್ರಾಪ್ತವಾಗುವಂತೆ ಮಾಡಿದ್ದಾರೆ. ಇದಕ್ಕೆಲ್ಲ ಹಿನ್ನೆಲೆಯಾಗಿ ವಚನ ಕಾಲದ ಪರಿಸರವಿದೆ. ಸ್ತ್ರೀಯ ಒಳಗಿದ್ದ ಸುಪ್ತ ಚೈತನ್ಯ, ಅವಳ ಆದಮ್ಯ ಅತಃಸತ್ವ ಪ್ರಕಟವಾಗಲು ಈ ಬೌದ್ಧಿಕ ಪರಿಸರವು ಪ್ರೇರಣೆಯಾಯಿತು. ತನ್ನನ್ನು ತಾನು ಶೋಧಿಸಲು ಒಳಗಿನ ಅರಿವು ಹೊರಗಿನ ಬೆಳಕು ಎರಡೂ ಒಟ್ಟಿಗೇ ಕಣ್ತೆರೆದು ಅದ್ಭುತವೊಂದು ಸಂಭವಿಸಿತು ಎಂಬುದು ಹನ್ನೆರಡನೆಯ ಶತಮಾನದ ವಿಶೇಷತೆ. ಸ್ತ್ರೀತ್ವದ ಶೋಧದ ಈ ದಾರಿಯಲ್ಲಿ ಅಂತರ್‌ವಿರೋಧಗಳು ಇರುವುದು ಸಹಜ. ಏಕೆಂದರೆ ಇದು ಸ್ಥಾಪಿತವಾದ ಮಾರ್ಗವಲ್ಲ. ಒಂದು ಸಿದ್ಧಾಂತವಲ್ಲ. ಹೆಣ್ತನವನ್ನು ಅದರ ಅಂತಃಶಕ್ತಿಯನ್ನು ಗುರುತಿಸಲು ಇದ್ದ ಕಣ್ಕಟ್ಟುಗಳನ್ನು ಕಳಚಿಕೊಂಡದ್ದು ವಚನಗಾರ್ತಿಯರ ಸಾಧನೆ. ಈ ಕಳಚುವ ಕ್ರಿಯೆ ಕೆಲವೊಮ್ಮೆ ನೇರವಾಗಿ ಕೆಲವೊಮ್ಮೆ ವಿದ್ರೋಹದ ಮೂಲಕ ಪ್ರಕಟವಾಗಿದೆ. ಕೊನೆಗೂ ಇದೊಂದು ಶೋಧ. ಆ ಶೋಧಕ್ಕೆ ಕಣ್ತೆರೆಯುವ ಕೆಲಸವನ್ನು ಕನ್ನಡದ ಸಂದರ್ಭದಲ್ಲಿ ವಚನಗಾರ್ತಿಯರು ಮಾಡಿದ್ದಾರೆ. ಸ್ತ್ರೀತ್ವದ ಶೋಧ ನಿರಂತರ.



**(ತುಮಕೂರು ವಿಶ್ವವಿದ್ಯಾಲಯದ ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿರುವ ಗೀತಾ ವಸಂತ ಕನ್ನಡದ ಪ್ರಮುಖ ಕವಯತ್ರಿ ಮತ್ತು ವಿಮರ್ಶಕರಲ್ಲೊಬ್ಬರು)**

# ಸಾಹಿತ್ಯ-ಸಂಸ್ಕೃತಿಗಳ ಸಮಕಾಲೀನ (ಕು)ರೂಪಗಳು: ಕೆಲವು ಟಿಪ್ಪಣಿಗಳು

## ಚಂಪಾ-ಬಾಯಿ



ನಾನು ಇತ್ತೀಚಿನ ಮೈಸೂರು ಸಾಹಿತ್ಯ ಸಮ್ಮೇಳನದಲ್ಲಿನ ಚಂಪಾ ಅವರ ಅಧ್ಯಕ್ಷ ಭಾಷಣವನ್ನು ಅದರಲ್ಲಿನ ಪಕ್ಷ ರಾಜಕೀಯದ ದಟ್ಟ ವಾಸನೆಗಾಗಿ ಕಟುವಾಗಿ ಟೀಕಿಸಿ ನನ್ನ ಫೇಸ್‌ಬುಕ್‌ನಲ್ಲಿ ಬರೆದಾಗಲೇ ನನ್ನ ಕೆಲವು ಗೆಳೆಯರು, 'ಮುಂದಿನ *ಸಂಕ್ರಮಣ* ಸಂಚಿಕೆಯಲ್ಲಿ ನಿಮಗೆ ಕಾದಿದೆ ನೋಡಿ!' ಎಂದು ಎಚ್ಚರಿಸಿದ್ದರು. ಆದರೆ ನಾವು ಗೌರವಿಸುವ ಮೌಲ್ಯಗಳಿಗೆ ಅಪಚಾರವಾದಾಗ ಮಾತಾಡದಿರುವುದು ಆತ್ಮವಂಚನೆಯಾದೀತು ಎಂದು ನಂಬಿರುವ ನಾನು ಈ ಚಂಪಾ ಏನು ಬರೆದು ತಮ್ಮ ಯಾವ ತೀಟೆ ತೀರಿಸಿಕೊಳ್ಳುತ್ತಾರೋ ನೋಡೋಣ ಎಂದು ಕುತೂಹಲದಿಂದಲೇ ಕಾಯುತ್ತಿದ್ದೆ. ನಂತರದಲ್ಲಿ ನನ್ನ ಈ ಫೇಸ್‌ಬುಕ್ ಲೇಖನ 'ಉದಯವಾಣಿ' ಪತ್ರಿಕೆಯ ಸಂಪಾದಕರ ಕೋರಿಕೆಯ ಮೇರೆಗೆ ಅಲ್ಲೂ ಪ್ರಕಟವಾಗಿ ಚಂಪಾ ಕಣ್ಣಿಗೂ ಢಾಳಾಗಿ ಬಿದ್ದು ಅಂದೇ ನನಗೊಂದು 'ಎಚ್ಚರಿಕೆ'ಯ ದೂರವಾಣಿ ಸಂದೇಶ ಅವರಿಂದ ಬಂದಿತ್ತು.

ಆದರೂ ಒಂದು ಕಾಲದಲ್ಲಿ ಒಬ್ಬ ಸಾಹಿತಿಯೂ ಆಗಿದ್ದ ಚಂಪಾ ನನ್ನ ಬರಹದಲ್ಲಿನ ಮಾತುಗಳನ್ನು ಸಹನೆಯಿಂದ ಪರಿಶೀಲಿಸಿ (ಇವರೆಲ್ಲ ದೇಶದಲ್ಲಿನ 'ಅಸಹನೆ'ಯ ವಾತಾವರಣವನ್ನು ವಿರೋಧಿಸುತ್ತಿರುವ ಪ್ರಜಾಪ್ರಭುತ್ವವಾದಿ 'ಯೋಧ' ಮಹಾಶಯರಲ್ಲವೇ?) ಅಲ್ಲಿನ ವಿಚಾರಗಳಿಗೆ ಸಾಹಿತ್ಯ ಭಾಷೆಯಲ್ಲೇ-ಅದೆಷ್ಟೇ ಕಟುವಾಗಿದ್ದರೂ ಸರಿ-ಪ್ರತಿಕ್ರಿಯಿಸುತ್ತಾರೆಂಬ ಸಣ್ಣ ಆಸೆಯೂ ಇತ್ತು. ಆದರೆ ಸಮ್ಮೇಳನದ ನಂತರದ ಸಂಚಿಕೆಯಲ್ಲಿ ತಮ್ಮ ಭಾಷಣದ 'ಡಂಗೂರ'ವನ್ನು ತಾವೇ ಹೊಡೆದುಕೊಂಡು ಸುಸ್ತಾದವರಂತೆ, ನಂತರದ ಇತ್ತೀಚಿನ ಸಂಚಿಕೆಯಲ್ಲಿ ನನ್ನಂತೆಯೆ ಇವರ ಭಾಷಣವನ್ನು ಟೀಕಿಸಿದ್ದ ಗಿರಡ್ಡಿ ಗೋವಿಂದರಾಜರ ಜೊತೆಗೆ ನನ್ನ ಮೇಲೂ ನನ್ನ ಜಾತಿಮೂಲದಿಂದ ಆರಂಭಿಸಿ ಅಸಭ್ಯವಾಗಿ ಹರಿಹಾಯ್ದಿದ್ದಾರೆ. (ಇಂಥದಕ್ಕೆ ಪಾಪ ಹೆದರಿಯೇ ಹಲವು ಹಿರಿಯ ಸಾಹಿತಿಗಳು ಈಗ ಇವರ ಆಸ್ಥಾನ ವಿದ್ವಾಂಸರಾಗುವ ದುಃಸ್ಥಿತಿಗೆ ಈಡಾಗಿದ್ದಾರೆ!) ನಮ್ಮ ಈ ಪತ್ರಿಕೆಯನ್ನೂ ಟೀಕಿಸಿದ್ದಾರೆ. ನನ್ನ ಬಗ್ಗೆ ತಮ್ಮದೇ ಗುಪ್ತಚರ ವರದಿಗಳನ್ನು ಪಡೆದುಕೊಂಡ 'ಡಾನ್'ನಂತೆ 'ಬೆದರಿಕೆ'ಯೊಡ್ಡುವ ಶೈಲಿಯಲ್ಲಿ ಅತಿ ದುರಭಿರುಚಿಯ ಮಾತುಗಳನ್ನು ಬರೆದುಕೊಂಡು, ತಾವು ಸಾಹಿತಿಯಾಗಿ ಸಂಪೂರ್ಣ ಸತ್ತಿರುವುದನ್ನು ಖಚಿತಪಡಿಸಿದ್ದಾರೆ.

ಚಂಪಾ ಧಾರವಾಡದಲ್ಲಿ ಸಾಹಿತ್ಯ ವ್ಯಾಪಾರದ ಎಲ್ಲ 'ಬಂಡವಾಳ' ಕಳೆದುಕೊಂಡಾದ ಮೇಲೆ ಗುಡಾರ ಕಿತ್ತುಕೊಂಡು ಬೆಂಗಳೂರಿಗೆ ಬಂದದ್ದೇ ತಮ್ಮೊಳಗಿನ ಪುಢಾರಿತನಕ್ಕೆ ವಿಶಾಲ ಮಾರುಕಟ್ಟೆಯನ್ನು ಹುಡುಕಿಕೊಂಡು ಎಂಬುದನ್ನೂ, ಆನಂತರ ಅವರು ತಮ್ಮ ಬೆಂಗಳೂರು ವಾಸದಲ್ಲಿ ಎತ್ತಿದ ಅವತಾರಗಳಲ್ಲಿ ವಿವಿಧ ತಾತ್ವಿಕ ವೇಷ ತೊಟ್ಟು ಪಡೆದ 'ಸುಪಾರಿ'ಗಳ ಮತ್ತು ಮಾಡಿಕೊಂಡಿರುವ 'ಸಂಪಾದನೆ'ಗಳ ವೈವಿಧ್ಯವನ್ನೂ ಬಲ್ಲ ಎಲ್ಲರಿಗೂ ಈ ಮನುಷ್ಯ ಈಗ ಏನಾಗಿದ್ದಾನೆ ಎಂಬುದು ಚೆನ್ನಾಗಿ ಗೊತ್ತು. ನಿಜವಾಗಿ ಈ ಮನುಷ್ಯನಿಗೆ ವಯಸ್ಸಾಗಿರುವುದು ದಂಡವೇ. ಇರಲಿ, ಆಸಕ್ತರು 'ಹೊಸ ಮನುಷ್ಯ'ದ ಆಗಸ್ಟ್, ೨೦೧೫ರ ವಿಶೇಷ ಸಂಚಿಕೆಯಲ್ಲಿ ಇವರು ನನ್ನ ಮತ್ತು ಪತ್ರಿಕೆಯ ಬಗ್ಗೆ ಬರೆದಿರುವುದನ್ನು ಓದಿ ಇವರದು ನಾಲಿಗೆಯೋ, ಮತ್ತೇನೋ ಎಂದು ತಿಳಿಯಬಹುದಾಗಿದೆ.

## ಮತ್ತೆ ಮತ್ತೆ 'ಬಂಡಾಯ' !

ಈಗ ಬಂಡಾಯಕ್ಕೆ ೪೦ ವರ್ಷವಂತೆ. ಅದು ನೆನಪಿಗೆ ಬಂದಿರುವುದು ಈ ಚುನಾವಣೆಯ ಸಂದರ್ಭದಲ್ಲೇ ಎಂಬುದು ಅದರ ಜಾಯಮಾನಕ್ಕೆ ತಕ್ಕ ಹಾಗೇ ಇದೆ. ಗೆಳೆಯ ಸತೀಶರ 'ಕಟ್ಟುತ್ತೇವ...' ಎಂಬೊಂದು(ಅಂತಿಮವಾಗಿ ಹುಸಿಯಾಗಿ ಹೋದ) ಕವಿತೆಯ ಹೊರತಾಗಿ ಕನ್ನಡದ ಜನ ಯಾವ ಕಾಲಕ್ಕೂ ಗುಣಗುಣಿಸಬಹುದಾದ ಸಾಹಿತ್ಯದ ಯಾವುದೇ ಪ್ರಕಾರದ ಒಂದು ಸಾಲನ್ನೂ ನೀಡದ (ಹಾಗೆ ನೀಡಿದವರು ಬಂಡಾಯ' ಸೇರುವ ಮೊದಲೇ ಒಳ್ಳೆಯ ಸಾಹಿತಿಗಳಾಗಿದ್ದವರು ಎಂಬುದು ಬೇರೆ ವಿಷಯ.) ಈ 'ಬಂಡಾಯ'ವು ಈಗ ಹೆಸರಾಗಿರುವುದೇ ಮುಖ್ಯವಾಗಿ ಎರಡು ಕಾರಣಗಳಿಗೆ: ೧. ಇದು ಸಾಹಿತ್ಯಾಭಿರುಚಿ ಎಂಬುದನ್ನೇ ಅಪಮೌಲ್ಯಗೊಳಿಸಿ ಹಲವು ಎಳೆಯ ಸಾಹಿತಿಗಳ ದಾರಿ ತಪ್ಪಿಸಿತು. ೨. ಸಾಹಿತ್ಯ ಪುಢಾರಿ ಎಂಬ ಹೊಸ ಸಮೂಹವೊಂದನ್ನು ಸೃಷ್ಟಿಸಿ ಅದರಲ್ಲಿನ ಹಲವರನ್ನು ವಿಧಾನಸೌಧಕ್ಕೆ ಕಳಿಸಿತು.

ಸಾಹಿತ್ಯ ರಚನೆಯ ಏಕಾಂತವೇ ಸಾಹಿತ್ಯದ ನಿಜ ಬಂಡಾಯಗುಣವನ್ನು ರೂಪಿಸುವುದು. ಈ ಅರ್ಥದಲ್ಲೇ 'ಬರೆಯುವುದೇ ಬಂಡಾಯ' ಎಂದು ಕಾಮು ಹೇಳಿದ್ದು. ಆದರೆ ನಮ್ಮ ಈ ಬಂಡಾಯ ನೆಚ್ಚಿರುವುದು ತನ್ನ ಸಂಘಟನೆಯನ್ನು. ಹಾಗಾಗಿಯೇ ಇದು 'ಬಂಡಾಯ ಸಂಘಟನೆ'! ಹಾಗಾಗಿಯೇ ಇದಕ್ಕೊಂದು ಪ್ರಣಾಳಿಕೆ, ಮತ್ತು ಒಂದು ಘೋಷ ವಾಕ್ಯ! ಇವನ್ನು ಕೊಟ್ಟ ಡಿ. ಆರ್. ನಾಗರಾಜರೇ ಬಹುಬೇಗ ಈ ತಮ್ಮ ಹುಸಿತನಕ್ಕೆ ತಾವೇ ಹೇಸಿ ಅಲ್ಲಿಂದ ಕಾಲ್ಕಿತ್ತರು ಎಂದ ಮೇಲೆ ಇದರ ಹುಸಿತನದ ಬಗ್ಗೆ ಹೇಳಲು ಇನ್ನೇನು ಉಳಿದಿದೆ? 'ಬಂಡಾಯ-೪೦'ಕ್ಕೆ ಶುಭವಾಗಲಿ!

## ಕನ್ನಡದ ಹೊಸ ಸಾಹಿತ್ಯಶ್ರೀಗಳು!

ಇದೇ ಸಂದರ್ಭದಲ್ಲಿ ನಮ್ಮ ಹಳೆಯ 'ಬಂಡಾಯಿ'ಯಾದ ಗೆಳೆಯ ಅರವಿಂದ ಮಾಲಗತ್ತಿ ನೇತೃತ್ವದ ರಾಜ್ಯ ಸಾಹಿತ್ಯ ಅಕಾಡೆಮಿ, ಈಗಿರುವ ತನ್ನ ಹತ್ತಾರು ಪ್ರಶಸ್ತಿಗಳ ಜೊತೆಗೆ ಇನ್ನೂ ಹತ್ತು ಸೇರಿಸಿ ಆಯ್ದಿರುವ 'ಸಾಹಿತ್ಯಶ್ರೀ'ಗಳಿಗೂ ಶುಭ ಹಾರೈಸೋಣ! ಸರ್ಕಾರ ಕೊಡುತ್ತಿರುವ ಅನುದಾನಗಳನ್ನು ಸಾಹಿತ್ಯ-ಸಂಸ್ಕೃತಿಗಳ ಪ್ರಸಾರಕ್ಕೆ ಖರ್ಚು ಮಾಡಲಾಗದ ನಮ್ಮ ಅಕಾಡೆಮಿಗಳು ಮತ್ತು ಹಿರಿಯ ಲೇಖಕರುಗಳ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಕೆಲವು 'ಪ್ರತಿಷ್ಠಾನ'ಗಳು ಹೀಗೆ ಪ್ರಶಸ್ತಿಗಳ ಸುರಿಮಳೆಯನ್ನೇ ಕರೆಯತ್ತಾ ದುಂದು ಮಾಡುತ್ತಿರುವುದು ನಮ್ಮ ಸಮಕಾಲೀನ ಸಾಹಿತ್ಯಲೋಕ ಎಷ್ಟು ದಿಕ್ಕೆಟ್ಟು ಹೋಗಿದೆ ಎಂಬುದರ ಸೂಚನೆಯೇ ಆಗಿದೆ. ಇಂತಹ ಸಂದರ್ಭಗಳಲ್ಲೇ ನಮಗೆ ಜಿಎಸ್ಸೆಸ್, ಲಂಕೇಶ್, ತೇಜಸ್ವಿಯವರ ನೆನಪು ಕಾಡಹತ್ತುವುದು.

## ಎಚ್‌ಎಸ್ವಿಯವರ ಬಡಕಲು ಊರ್ಮಿಳಾ



ಇತ್ತೀಚಿನ ವರ್ಷಗಳಲ್ಲಿ ತಮ್ಮ ಸಾಹಿತ್ಯ ಪ್ರತಿಭೆಯ ಅಭಿವ್ಯಕ್ತಿಗೆ ಕಾವ್ಯ ಸಾಕಾಗದೆ ಹಲವು ಇತರ ಸಾಹಿತ್ಯ ಪ್ರಕಾರಗಳ ಕಡೆ ಹೊರಳಿಕೊಂಡಿರುವ ನಮ್ಮ ಹಿರಿಯ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿಯವರು ನಮ್ಮ ಪ್ರಾಚೀನ ಸಾಹಿತ್ಯ ಪರಂಪರೆಯ ಮರುಶೋಧನೆಗೆ ತೊಡಗಿದಂತೆ ಕಾಣುತ್ತದೆ. ಇದರ ಒಂದು ಫಲ ಅವರ 'ಊರ್ಮಿಳಾ' ಎಂಬ ಏಕವ್ಯಕ್ತಿ ಪ್ರದರ್ಶನಕ್ಕಾಗಿ ಬರೆದಿರುವ ನಾಟಕ.

ರಾಮಾಯಣದ ಲಕ್ಷ್ಮಣನ ಪತ್ನಿಯಾದ ಊರ್ಮಿಳಾ ನಮ್ಮ ಪ್ರಾಚೀನ ರಾಮಾಯಣಗಳಲ್ಲಿ ಒಂದು ಹೆಸರು ಮಾತ್ರವಾಗಿ ಉಳಿದು ಯಾರಿಗೂ ಬೇಡವಾದ ಪಾತ್ರವಾಗಿದೆ, ಸ್ವಲ್ಪ ಮಟ್ಟಿಗೆ ಟ್ಯಾಗೋರ್ ಮತ್ತು ನಮ್ಮ ಕುವೆಂಪು ಈ ಪಾತ್ರದ ಒಳಶೋಧನೆಯ ಪ್ರಯತ್ನಗಳನ್ನು ಮಾಡಿ ಕುತೂಹಲವನ್ನು ಹುಟ್ಟಿಸಿದ್ದಾರೆ. ಇದರ ವಿಸ್ತರಣೆಯ ಪ್ರಯತ್ನವೋ ಎಂಬಂತೆ ರಚಿತವಾಗಿರುವ ಎಚ್ಚೆಸ್ವಿಯವರ ಈ ಕೃತಿ ಈ ಪಾತ್ರವನ್ನು ಜನಪ್ರಿಯ ಎಡಪಂಥೀಯ ಎರಕದೊಳಕ್ಕೆ ಅಳವಡಿಸುವ ಅಪಕ್ವ ಮತ್ತು ಅಸಹಜ ವಾಂಛೆಗೆ ಸಿಕ್ಕಿ ಹಾಸ್ಯಾಸ್ಪದವಾಗಿಬಿಟ್ಟಿದೆ.

ಸಾಗರದ 'ಸ್ಪಂದನ' ರಂಗತಂಡ ತಮ್ಮೂರಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ



ಈ ಪ್ರದರ್ಶನ ಅದರ ನಿರ್ದೇಶಕ ಶ್ರೀಪಾದ ಭಟ್ ಅವರ ದೃಶ್ಯ ಸಂಯೋಜನೆ ಮತ್ತು ಸಂಗೀತಗಳಾಗಲೀ ಅಥವಾ ಎಂ.ವಿ. ಪ್ರತಿಭಾ ಅವರ ವಿಶೇಷ ಅಭಿನಯ ಪ್ರತಿಭೆಯಾಗಲೀ ಜೀವ ತುಂಬಲಾಗಲಿಲ್ಲ. ಯಾವ ಕಥಾ ಹಿನ್ನೆಲೆಯಾಗಲೀ ಅಥವಾ ಕೃತಿಯೊಳಗಿನ ರಾಚನಿಕ ಸಿದ್ಧತೆಯಾಗಲೀ ಇಲ್ಲದೆ ಊರ್ಮಿಳೆಯ ಬಾಯಲ್ಲಿ ರಾಮಾಯಣವನ್ನು 'ದಸ್ಯು' ಸಂಸ್ಕೃತಿಯ ವಿರೋಧಿ ಸಂಕಥನವನ್ನಾಗಿ ವ್ಯಾಖ್ಯಾನ ಮಾಡಿ ಆಡಿಸುವ 'ದಸ್ಯುಗಳ ಉದ್ಧಾರ ಶ್ವೇತವರ್ಣೀಯರ ಹೆಗಲ ಭಾರ!' (ರಾಮ-ಲಕ್ಷ್ಮಣರು 'ಶ್ವೇತವರ್ಣೀಯ'ರೇ?) ಮುಂತಾದ ಇಂಗ್ಲಿಷ್‌ನಿಂದ ಕಡ ತಂದ ಮಾತುಗಳನ್ನಾಡಿಸುವ ಮೂಲಕ ಎಚ್ಚೆಸ್ವಿಯವರು ಆ ಪಾತ್ರವನ್ನು ಮಾತ್ರವಲ್ಲದೆ ತಮ್ಮ ಇಡೀ ರಚನೆಯನ್ನು ಬಡಕಲಾಗಿಸಿದ್ದಾರೆ ಮತ್ತು ತಮ್ಮ ಸಾಹಿತ್ಯ ಸಮಗ್ರತೆಯನ್ನೂ ಅನುಮಾನಾಸ್ಪದಗೊಳಿಸಿಕೊಂಡಿದ್ದಾರೆ. ಹಾಗಾಗಿಯೇ ಇಡೀ ನಾಟಕದಲ್ಲಿ ಹುಡುಕಿದರೂ ನಾಟ್ಯ ಗುಣವುಳ್ಳ ಒಂದು ಮಾತಾಗಲೀ ದೃಶ್ಯವಾಗಲೀ ಕಾಣುವುದಿಲ್ಲ.

ಸಾಗರದಂತಹ ಸಣ್ಣ ಊರಿನಲ್ಲಿ ಅಪಾರ ಆಸಕ್ತಿ, ಶ್ರದ್ಧೆ ಮತ್ತು ಶ್ರಮ ಹಾಕಿ ರಂಗಮಂದಿರದ ತುಂಬ ಜನ ಸೇರಿಸಬಲ್ಲಂತಹ'ಸ್ಪಂದನ' ತಂಡವು ಮೊದಲು 'ರಂಗ ಕೃತಿ'ಯನ್ನು ಆಯುವಾಗ ಎಚ್ಚರ ವಹಿಸಬೇಕಾಗಿದೆ.

-ಡಿಎಸ್ಸೆನ್

ಧರ್ಮ ವಿಚಾರ

# ಸೂಫಿ ಕಥೆಗಳು



ಕುರ್‍ರಾನ್ ಮತ್ತು.ಶರಿಯತ್‌ಗಳನ್ನು ನಂಬುವುದಾಗಿ ಹೇಳುವ ಸೂಫೀವಾದ ಬೌದ್ಧ ಧರ್ಮದ ಜೆನ್ ಧಾರೆ ಇದ್ದಂತೆಇಸ್ಲಾಂನ ಒಂದು ಅನುಭಾವಿಕ ಧಾರೆ ಎಂದು ಗುರುತಿಸಲಾಗುತ್ತದೆ. ಮತೀಯ ಆಚರಣೆಗಳಾಚೆಯ ತರ್ಕಾತೀತ ನೆಲೆಯಲ್ಲಿ ಸತ್ಯವನ್ನು ಅಸ್ತಿತ್ವದ ಒಳ ಅನುಭವಾಗಿ ಗ್ರಹಿಸಲೆಳಸುವ ಸೂಫಿವಾದ ನೃತ್ಯ, ಸಂಗೀತ, ಚಿತ್ರ ಕಲೆ, ಕಾವ್ಯ ಕಥೆ-ಉಪಕಥೆ-ದೃಷ್ಟಾಂತ ಕಥೆ ಮುಂತಾದ ಲಲಿತ ಕಲೆಗಳ ಮೂಲಕವೂ ತನ್ನ ಅಭಿವ್ಯಕ್ತಿಯನ್ನು ಸಾಧಿಸಿ ಜಗತ್ತಿನ ಗಮನ ಸೆಳೆದಿದೆ.-ಸಂ.

**ಮನುಷ್ಯ ಅಲ್ಲ, ಕೋತಿ**

ಸೂಫಿ ಸಂತನೊಬ್ಬ ಧ್ಯಾನಮಗ್ನನಾಗಿ ಕೂತಿದ್ದ. ಅಲೆಮಾರಿ ದರವೇಶಿಯೊಬ್ಬ ಅವನ ಹತ್ತಿರಕ್ಕೆ ಓಡಿ ಬಂದು ಆತಂಕದಿಂದ 'ಬೇಗ, ನಾವು ಏನಾದರೂ ಮಾಡಬೇಕು, ಬೇಗ. ಕೋತಿ ಚಾಕು ಎತ್ತಿಕೊಂಡಿದೆ,' ಎಂದ.

'ಕೋತಿ ತಾನೇ? ಮನುಷ್ಯ ಅಲ್ಲವಲ್ಲ! ಯೋಚನೆ ಮಾಡಬೇಡ,' ಅಂದ ಸಂತ.

ಸ್ವಲ್ಪ ಹೊತ್ತಲ್ಲೇ ದರವೇಶಿ ಬಂದು ಹೇಳಿದ :'ಕೋತಿ ಚಾಕುವನ್ನು ಬಿಸಾಡಿ ಹೋಗಿದೆ!

**ಪ್ರೀತಿಯ ವಸ್ತು**

ಪ್ರೇಯಸಿಯನ್ನು ನೋಡಲು ಬಂದ ಪ್ರೇಮಿ ಆಕೆಯ ಬಗ್ಗೆ ತಾನು ಬರೆದಿದ್ದ ಕವಿತೆಗಳನ್ನು ಕೊಟ್ಟ. ಆಕೆ ನಿಧಾನವಾಗಿ ಅವನ್ನೆಲ್ಲ ಓದಿದಳು. ಅವಳ ಬಗ್ಗೆ ತನಗೇನು ಅನ್ನಿಸುತ್ತದೆ, ಅವಳೆಂಥ ಚೆಲುವೆ, ಅವಳು ತನ್ನ ಮನಸ್ಸು ಎಷ್ಟು ಸೆಳೆದಿದ್ದಾಳೆ ಅನ್ನುವ ವರ್ಣನೆಗಳು ಆ ಕವಿತೆಗಳಲ್ಲಿದ್ದವು. ಆಕೆ ಅಂದಳು: 'ನೀನು ನನ್ನ ಕಣ್ಣೆದುರಿಗೇ ಇದ್ದೀಯ, ನನ್ನ ಬಗ್ಗೆ ನೇರವಾಗಿಯೇ ತಿಳಿದುಕೊಂಡಿದ್ದೀಯ. ಆದರೂ ನಿನಗೆ ಏನನ್ನಿಸುತ್ತದೆ ಅನ್ನುವ ಭಾವನೆಗಳನ್ನು ಕವಿತೆ ಮಾಡಿದ್ದೀಯ. ಈ ಕವಿತೆಗಳಲ್ಲಿ ನೀನು ಮಾತ್ರ ಇದ್ದೀಯೆ, ನಾನಿಲ್ಲ. ನಿನ್ನನ್ನು ನೀನೇ ಮೋಹಿಸುತ್ತಿದ್ದೀಯ. ನನ್ನ ನಿನ್ನ ನಡುವೆ ನೀನೇ ಇದ್ದೀಯ.'

**ದೃಷ್ಟಿಕೋನ**

ಅವನು ಹೀಗೇ ಹೋಗುತ್ತ ಇರುವಾಗ ಸುಂದರ, ಜಾಣ, ಸಭ್ಯನನ್ನು ಕಂಡು 'ಯಾರು ನೀನು?' ಅಂತ ಕೇಳಿದ.

'ನಾನು ಸೈತಾನ' ಅಂದ ಆ ಜಾಣ, ಸಭ್ಯ, ಸುಂದರ ಪುರುಷ.

'ಸಾಧ್ಯವೇ ಇಲ್ಲ, ಸೈತಾನ ವಿಕಾರವಾಗಿರುತ್ತಾನೆ, ದುಷ್ಟ,' ಎಂದ ಈ ಮನುಷ್ಯ.

'ಮಿತ್ರಾ, ನೀನು ನನ್ನ ವಿರೋಧಿಗಳ ಮಾತು ಕೇಳಿ ಮರುಳಾಗಿದ್ದೀಯ,' ಅಂದ ಸೈತಾನ.

**ಪ್ರತಿಬಾರಿಯೂ ಬೇರೆ**

ಗೊಂದಲಕ್ಕೆ ಗುರಿಯಾದ ಸತ್ಯಾನ್ವೇಷಕನೊಬ್ಬ ಸೂಫಿ ಗುರುವಿನ ಹತ್ತಿರ ಬಂದು ಕೇಳಿದ :'ನನ್ನದು ಒಂದೇ ಪ್ರಶ್ನೆ. ನಾನು ಎಲ್ಲಿಯೇ ಹೋದರು ಸೂಫಿಗಳು ನಾನು ಕೇಳುವ ಒಂದೇ ಪ್ರಶ್ನೆಗೆ ಬೇರೆ ಬೇರೆ ಉತ್ತರ ಕೊಡುತ್ತಾರೆ, ಯಾಕೆ?'

'ನನ್ನ ಜೊತೆ ನಡಿ. ಊರು ಸುತ್ತಾಡಿಕೊಂಡು ಬರೋಣ. ಇದರ ಗುಟ್ಟು ತಿಳಿಯೋಣ,' ಅಂದ ಗುರು.

ಪೇಟೆ ಬೀದಿಗೆ ಹೋದರು. 'ಇದು ಯಾವ ಪ್ರಾರ್ಥನೆಯ ಹೊತ್ತು?' ದಿನಸಿ ಅಂಗಡಿಯವನನ್ನು ಗುರು ಕೇಳಿದ, 'ಬೆಳಗಿನ ಪ್ರಾರ್ಥನೆಯ ಹೊತ್ತು, ಗುರುಗಳೇ,' ಅಂದ ದಿನಸಿಯವನು.

ಸ್ವಲ್ಪ ಹೊತ್ತಾದಮೇಲೆ ದರ್ಜಿಯವನೊಬ್ಬ ಕಂಡ. ಗುರು ಅದೇ ಪ್ರಶ್ನೆ ಕೇಳಿದ.

'ಮಧ್ಯಾಹ್ನದ ಪ್ರಾರ್ಥನೆಯ ಹೊತ್ತು, ಗುರುಗಳೇ,' ಎಂದ.

ಸ್ವಲ್ಪ ಹೊತ್ತಾದಮೇಲೆ ದರ್ಜಿಯವನೊಬ್ಬ ಕಂಡ. ಗುರು ಅದೇ ಪ್ರಶ್ನೆ ಕೇಳಿದ.

'ಮಧ್ಯಾಹ್ನದ ಪ್ರಾರ್ಥನೆಯ ಹೊತ್ತು, ಗುರುಗಳೇ,' ಎಂದ ದರ್ಜಿ.

ಹೀಗೇ ಮಾತಾಡುತ್ತ ಇನ್ನಷ್ಟು ಹೊತ್ತು ಕಳೆಯಿತು. ಪುಸ್ತಕದಂಗಡಿಯವನು ಭೇಟಿಯಾದ. 'ಇದು ಯಾವ ಪ್ರಾರ್ಥನೆಯ ಹೊತ್ತು?' ಗುರು ಅವನನ್ನು ಕೇಳಿದ.

'ಸಂಜೆಯ ಪ್ರಾರ್ಥನೆಯ ಹೊತ್ತು, ಗುರುಗಳೇ,' ಅಂದ ಪುಸ್ತಕದಂಗಡಿಯವನು.

ಗುರು ಸತ್ಯಾನ್ವೇಷಕನತ್ತ ತಿರುಗಿ ಹೇಳಿದ.'ಈ ಪ್ರಯೋಗ ಇನ್ನೂ ಮುಂದುವರೆಸಬೇಕೋ ಅಥವಾ ಒಂದೇ ಪ್ರಶ್ನೆಗೆ ಆಯಾ ಸಂದರ್ಭಕ್ಕೆ ನಿಜವಾದ ಬೇರೆ ಬೇರೆ ಉತ್ತರಗಳು ಸಿಗುತ್ತವೆ ಅನ್ನುವುದು ತಿಳಿಯಿತೋ?'

**ಸಾಲ ತೀರಿಸುವುದು**

ಸೂಫಿಯೊಬ್ಬ ಪೇಟೆ ಬೀದಿಯಲ್ಲಿ ಆಲಿವ್ ಮಾರುತಿದ್ದ. ವ್ಯಾಪಾರ ಡಲ್ ಆಗಿತ್ತು. ಅಲ್ಲಿಗೆ ಬಂದ ಮಹಿಳೆಯೊಬ್ಬಳಿಗೆ ಆಲಿವ್ ಮಾರಲು ಪ್ರಯತ್ನಪಟ್ಟ.

'ನನ್ನ ಹತ್ತಿರ ದುಡ್ಡಿಲ್ಲ,' ಅಂದಳು ಅವಳು.

'ಪರವಾಗಿಲ್ಲ, ಆಮೇಲೆ ಕೊಡಿ,' ಅಂದ.

ಆಕೆಯ ಹಿಂಜರಿಕೆ ಕಡಮೆಯಾಗಲಿಲ್ಲ. ಒಂದು ಆಲಿವ್ ರುಚಿ ನೋಡಿ ಎಂದ.

'ಸಾಧ್ಯವಿಲ್ಲ, ಉಪವಾಸ ಮಾಡುತಿದ್ದೇನೆ,' ಅಂದಳು ಅವಳು.

'ಉಪವಾಸ? ರಂಜಾನ್ ಮುಗಿದು ಆರು ತಿಂಗಳಾಯಿತಲ್ಲಾ!' ಎಂದ ಸೂಫಿ..

'ಮಧ್ಯದಲ್ಲಿ ಒಂದು ದಿನದ ಉಪವಾಸ ಮುರಿದುಬಿಟ್ಟಿದ್ದೆ. ಈಗ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತಿದ್ದೇನೆ' ಅಂದಳು.

'ಅಲ್ಲಾನಿಗೆ ಕೊಟ್ಟ ಮಾತು ಪೂರೈಸುವುದಕ್ಕೇ ಆರು ತಿಂಗಳು ತಗೊಂಡೆಯಲ್ಲಮ್ಮಾ! ನನ್ನ ಸಾಲ ತೀರಿಸಲು ಇನ್ನೆಷ್ಟು ಕಾಲ ತೆಗೆದುಕೊಳ್ಳುತ್ತೀಯೋ ಏನೋ! ನಿನಗೆ ಆಲಿವ್ ಕೊಡಲ್ಲ,' ಅಂದ.

**ಮನುಷ್ಯ-ಹುಲಿ**

ಹಸಿದ ಹುಲಿಯೊಂದು ಒಬ್ಬಾತನನ್ನು ಎಲ್ಲಿ ಹೋದರೂ ಬಿಡದೆ ಅಟ್ಟಿಸಿಕೊಂಡು ಬರುತ್ತಿತ್ತು. ಆತ ಹತಾಶನಾಗಿ ನಿಂತು 'ನನ್ನ ಪಾಡಿಗೆ ನನ್ನ ಯಾಕೆ ಬಿಡಲ್ಲ ನೀನು?' ಅಂತ ಕೇಳಿದ.

'ನನಗೆ ಹಸಿವು ಹುಟ್ಟಿಸುವ ಹಾಗೆ ಯಾಕಿದ್ದೀಯಾ?' ಹುಲಿ ಕೇಳಿತು.

**ನನಗೆ ಬೇಕಾದರೇನು ಮಾಡಲಿ?**

ಅರಬನೊಬ್ಬ ತನ್ನ ನಾಯಿಯನ್ನು ಕರೆದುಕೊಂಡು ಮರುಭೂಮಿಯಲ್ಲಿ ಸಾಗುತ್ತಿದ್ದ. ಕುರಿಯ ಚರ್ಮದ ಚೀಲದಲ್ಲಿ ನೀರನ್ನು ತುಂಬಿ ಹೆಗಲಿಗೆ ನೇತುಹಾಕಿಕೊಂಡಿದ್ದ. ಆ ಮನುಷ್ಯ ಹೆಜ್ಜೆ ಹೆಜ್ಜೆಗೂ ಜೋರಾಗಿ ಅಳುತ್ತಾ ಗೋಳಾಡುತ್ತಿದ್ದ.

ಎದುರಿಗೆ ಇನ್ನೊಬ್ಬ ಮನುಷ್ಯ ಬಂದ. 'ಯಾಕಪ್ಪಾ, ಯಾಕೆ ಹೀಗೆ ಅಳುತ್ತಿದ್ದೀಯಾ?' ಅಂತ ಕೇಳಿದ.

'ನನ್ನ ನಾಯಿ ಬಾಯಾರಿಕೆಯಿಂದ ಒದ್ದಾಡುತ್ತ ಸಾಯುವ ಹಾಗೆ ಆಗಿಬಿಟ್ಟಿದೇ...' ಅನ್ನುತ್ತ ಮತ್ತಷ್ಟು ಅತ್ತ ಆ ಅರಬ.

'ನಾಯಿಗೆ ಒಂದಿಷ್ಟು ನೀರು ಕುಡಿಸಬಾರದಾ?' ಎದುರಿಗೆ ಸಿಕ್ಕ ಮನುಷ್ಯ ಕೇಳಿದ.

'ಅಯ್ಯೋ, ದಾರಿ ಇನ್ನೂ ದೂರ. ನನಗೆ ಬಾಯಾರಿದರೆ ಗತಿಯೇನು?' ಅಂದ ಅರಬ!.

**ಜಗಳ**

ಮೌಲಾನಾ ಪೇಟೆ ಬೀದಿಯಲ್ಲಿ ಹೋಗುತ್ತಿದ್ದ. ಯಾರೋ ಇಬ್ಬರು ಜೋರಾಗಿ ಜಗಳವಾಡುತ್ತಿದ್ದರು. ಒಬ್ಬರನ್ನೊಬ್ಬರು ಮೂದಲಿಸುತ್ತಿದ್ದರು. 'ನೀನು ಇನ್ನೊಂದು ಬೈಗುಳ ಬೈದರೆ ನಾನು ತಿರುಗಿ ಸಾವಿರ ಕೆಟ್ಟ ಮಾತು ಆಡಬಲ್ಲೆ, ಹುಷಾರು!' ಅಂದ ಒಬ್ಬನು.

ಮೌಲಾನಾ ಇಬ್ಬರ ಮಧ್ಯೆ ಹೋಗಿ ನಿಂತು, 'ಗೆಳೆಯಾ, ನೀನು ನನ್ನನ್ನು ಸಾವಿರ ಬೈಯಬಹುದು. ನಾನು ಮಾತ್ರ ಒಂದೇ ಒಂದು ಮಾತೂ ಆಡುವವನಲ್ಲ,' ಎಂದು ಶಾಂತ ಧ್ವನಿಯಲ್ಲಿ ಹೇಳಿದ.

ಜಗಳವಾಡುತಿದ್ದ ಇಬ್ಬರಿಗೂ ನಾಚಿಕೆಯಾಯಿತು. ಜಗಳ ಬಿಟ್ಟು ಗೆಳೆಯರಾದರು.

**ನಿಷ್ಠಾವಂತ**

'ನಿನ್ನ ನಿಷ್ಠೆಯನ್ನು ಪರೀಕ್ಷೆ ಮಾಡಿದೆ. ನೀನು ಅಚಲ ನಿಷ್ಠಾವಂತ. ನಿನ್ನ ನಿಷ್ಠೆಯಿಂದ ಒಂದಿಷ್ಟೂ ಕದಲುವವನಲ್ಲ. ನಿನಗಿಲ್ಲಿ ಜಾಗವಿಲ್ಲ, ಹೋಗಬಹುದು,' ಎಂದು ಹೇಳಿದ ಗುರು.

'ಹೋಗುತ್ತೇನೆ, ಗುರುಗಳೇ. ಆದರೆ ನಿಷ್ಠೆಯಿಂದಿರುವುದು ಹೇಗೆ ಕೆಟ್ಟಗುಣವಾದೀತು, ನನಗೆ ಅರ್ಥವಾಗಲಿಲ್ಲ, ತಿಳಿಸಿ.' ಎಂದ ಶಿಷ್ಯ.

'ಇಷ್ಟು ದಿನವೂ ನಿನ್ನ ನಿಷ್ಠೆಯನ್ನು ಪರೀಕ್ಷೆಮಾಡಿದೆ. ನಿರುಪಯುಕ್ತ ಜ್ಞಾನ, ತೋರಿಕೆಯ ತೀರ್ಮಾನ ಇವುಗಳ ಬಗ್ಗೆ ನಿನ್ನ ನಿಷ್ಠೆ ಅಚಲವಾದದ್ದು. ಅದಕ್ಕೇ ನಿನಗೆ ಇಲ್ಲಿ ಜಾಗವಿಲ್ಲ.' ಎಂದ ಗುರು.

(ಆಯ್ಕೆ : ಡಿಎಸ್ಸೆಸ್ ಅನುವಾದ : ಓಎಲ್ಲೆನ್)

## ಪುಸ್ತಕಾವಲೋಕನ

**ಪು : ಪಾಬ್ಲೊ ನೆರೂಡ ನೆನಪುಗಳು ಕನ್ನಡಕ್ಕೆ : ಓ ಎಲ್. ನಾಗಭೂಷಣ ಸ್ವಾಮಿ ಪ್ರ : ಲಡಾಯಿ ಪ್ರಕಾಶನ, ಗದಗ ಪು ೩೨೮, ಬೆಲೆ: ರೂ.೩೩೦**

# ದೇವರಾಗಲು ಒಲ್ಲದ ಕವಿಯ ನೆನಪುಗಳು




**ನೆ**ರೂಡನಂತಹ ಸಮೃದ್ಧ ಕವಿಯ ಸಮೃದ್ಧ ಜೀವನ ಕಥಾನಕವನ್ನು ಓದುವುದು ಎಂದರೆ ಅದಿರನ್ನು ಕೈಯಲ್ಲಿ ಹಿಡಿದು ಅದು ಹೇಗೆ ಅದ್ಭುತವಾದ –ಅನರ್ಘ್ಯವಾದ ಲೋಹವಾಯಿತು ಎಂದು ಊಹಿಸಿಕೊಂಡಂತೆ. ಅವನು ತನ್ನ ಶ್ರೀಮಂತವಾದ ಬದುಕನ್ನು ಯಾವುದೇ ಕಾಲಾನುಕ್ರಮಣಿಕೆಯ ಶಿಸ್ತುಬದ್ಧ ಮಾರ್ಗವನ್ನು ಅನುಸರಿಸದೆ ತನ್ನ ಮನಸ್ಸು ಹರಿದಕಡೆ ಚಲಿಸುತ್ತ ನಡೆದು ನಿರೂಪಿಸುವುದನ್ನು ನೋಡಿದರೆ ಅವನ ಕಾವ್ಯದ ಅಡೆ–ತಡೆಗಳಿಲ್ಲದ ಸ್ವಚ್ಛಂದತೆಯೇ ನೆನಪಾಗುತ್ತದೆ. ಯಾವ ವರ್ಗೀಕರಣಗಳ ಇಕ್ಕಟ್ಟಿಗೆ ಬೀಳದೆ, ಅದರಾಚೆ ಸುಮ್ಮನಿರುವ ಬದುಕಿನ ನಿರುಮ್ಮಳ ಭಾವವನ್ನು ನಗ್ನವಾಗಿ ಅನುಭವಿಸಬೇಕು ಎನ್ನುವ ತೀವ್ರ ಹಂಬಲದ ನೆರೂಡನ ಬದುಕು ಆರಂಭದಿಂದಲೂ ಬಹಳ ಆಸಕ್ತಿದಾಯಕವಾಗಿದೆ. ಚಿಲಿಯ ದಟ್ಟ ಕಾಡುಕಣಿವೆ, ನದಿಬಯಲುಗಳಲ್ಲಿ ಅಲೆಯುತ್ತ ಬೆಳೆದ ಅವನಿಗೆ ಚಿಕ್ಕಂದಿನಲ್ಲೇ ಮನುಷ್ಯ ಮಾತ್ರವಲ್ಲ, ನಿಸರ್ಗದ ನಿಗೂಢಶಕ್ತಿಗಳನ್ನೂ ಒಳಗೊಳ್ಳುವಂತೆ ಕವಿತೆ ಬರೆಯಬೇಕು ಎಂಬ ಹಂಬಲ ಉಂಟಾಗುತ್ತದೆ.ಅದು ಕ್ರಮೇಣ ಅವನೇ ಹೇಳುವಂತೆ 'ಸ್ವಂತಕ್ಕೆ ನಿಕಟವಾಗಿರುವುದು ಮತ್ತು ಹಾಗೆಯೇ ಒಟ್ಟು ಮನುಷ್ಯಕುಲಕ್ಕೆ ನಿಕಟವಾಗಿರುವಂತೆ ಬರೆಯುವುದು' ಎಂಬ ರೂಪವನ್ನು ಪಡೆಯಿತು ಎಂಬುದರ ಉಜ್ವಲ ಉದಾಹರಣೆಯಂತೆ ನಾವು ಅವನ ಆತ್ಮಕತೆಯನ್ನು ಓದಬಹುದು.

ಪ್ರಕೃತಿಯ ಅಗಾಧತೆಯನ್ನು ಹೀರಿಕೊಂಡು ಬೆಳೆಯುತ್ತ ಮುಂದೆ ನೆರೂಡ ಹಲವು ದೇಶಗಳ ಪ್ರವಾಸ, ಅಲ್ಲಿನ ಜನರ ಬದುಕು ಬವಣೆ, ಜೀವನ ವೈವಿಧ್ಯ, ಆಧ್ಯಾತ್ಮ, ರಾಜಕೀಯದ ಕರಾಳ ಪರಿಣಾಮಗಳನ್ನು ಅರಿಯುತ್ತ, ಬಹಳ ಉತ್ಕಟವಾಗಿ ಹಲವು ಹೆಣ್ಣುಗಳ ಜೊತೆಗಿನ ಪ್ರೇಮ–ಕಾಮಗಳ ಬದುಕನ್ನು ಅನುಭವಿಸುತ್ತ ತನ್ನ ಸಂವೇದನೆಯನ್ನು ಹೇಗೆ ರೂಪಿಸಿಕೊಂಡ ಎಂಬ ವಿವರಗಳನ್ನು ಆತ್ಮ ಕಥಾನಕದಲ್ಲಿ ಕಾಣಬಹುದು. ಮುಖ್ಯವಾಗಿ ಅವನು ಚಿಲಿಯ ರಾಯಭಾರಿಯಾಗಿ–ಪ್ರಭಾವಶಾಲಿ ಕವಿಯಾಗಿ ರಂಗೂನ್, ಕೊಲಂಬೋ, ಜಾವಾ, ಸಿಂಗಪೂರ್, ಚೈನಾ, ಕ್ಯೂಬಾ, ರಷ್ಯಾ, ಅಮೆರಿಕಾ ಹೀಗೆ ಹಲವು ದೇಶಗಳನ್ನು ಸುತ್ತುತ್ತ ಅಲ್ಲಿನ ಪ್ರಮುಖ ರಾಜಕೀಯ ನಾಯಕರು, ಪ್ರಭಾವಶಾಲಿ ಬರಹಗಾರರನ್ನು ಭೇಟಿಯಾದ ಬಗೆಗಿನ ವಿವರಗಳೂ ಇಲ್ಲಿವೆ. ರಾಯಭಾರಿಯಂತಹ ರಾಜಕೀಯವಾಗಿ ಬಹು ಸೂಕ್ಷ್ಮವಾದ, ಸಾಮಾಜಿಕವಾಗಿ ಅತಿ ಗಣ್ಯಹುದ್ದೆಯನ್ನು ನಿಭಾಯಿಸುತ್ತಲೇ ನೆರೂಡ ವ್ಯವಸ್ಥೆಯ ಬರ್ಬರತೆಯನ್ನು, ರಾಜಕೀಯ–ಆಧ್ಯಾತ್ಮಿಕ ಸಿದ್ಧಾಂತಗಳ ನಿಷ್ಪ್ರಯೋಜಕತೆಯನ್ನು, ಜೀವನದ ಸಮೃದ್ಧತೆ ಸರಳತೆಗಳನ್ನು ಏವೆತಪ್ಪದೆ ಗಮನಿಸುವುದನ್ನು ನೋಡಿದಾಗ ಅವನ ಕಾವ್ಯ ಯಾಕೆ ಪ್ರಪಂಚದಾತ್ಯಂತ ಎಲ್ಲ ವರ್ಗ–ವಯೋಮಾನದ ಜನರ ಅಂತರಂಗದ ಒಳಗೆ ಇಳಿಯಿತು ಎಂಬುದಕ್ಕೆ ಕಾರಣಗಳು ದೊರೆಯುತ್ತವೆ.

ಪ್ರಪಂಚದಾತ್ಯಂತ ಜನಪ್ರಿಯವಾಗಿರುವ ನೆರೂಡನ ಕಾವ್ಯದ ಕಾರಣದಿಂದ ಅವನ ಕಮ್ಯುನಿಸ್ಟ್ ಚಿಂತನೆ, ತನ್ನ ಕಾಲದ ರಾಜಕೀಯ ನಿಲುವುಗಳ ವಿರೋಧ ಇತ್ಯಾದಿ ವಿವರಗಳು ಕನ್ನಡಿಗರಿಗೂ ಬಹುಪಾಲು ಚಿರಪರಿಚಿತವೇ ಆಗಿರುವುದರಿಂದ ಅವನ್ನು ಮತ್ತೆ ಇಲ್ಲಿ ಚರ್ಚಿಸುವ ಅಗತ್ಯವಿಲ್ಲ. ಅದನ್ನು ಹೊರತುಪಡಿಸಿ, ನೆರೂಡ ಭಾರತವನ್ನು ಒಳಗೊಂಡಂತೆ ಪೂರ್ವದೇಶಗಳ ರಾಜಕೀಯ ಸಾಮಾಜಿಕ ಆಧ್ಯಾತ್ಮಿಕ ಸ್ಥಿತಿಗಳ ಕುರಿತು ಮಾಡುವ ಟಿಪ್ಪಣಿಗಳ ಕಾರಣದಿಂದ ಕನ್ನಡದಲ್ಲಿ ದೊರಕುವ ಆತ್ಮಕಥಾನಕ ಅವನ ಕುರಿತ ನಮ್ಮ ಅರಿವನ್ನು ವಿಸ್ತರಿಸುವಂತಿದೆ. ಪೂರ್ವದೇಶಗಳ ಬದುಕು, ಅಲ್ಲಿನ ತತ್ವಶಾಸ್ತ್ರ ಇವೆಲ್ಲವುಗಳು ಪಶ್ಚಿಮ ಬದುಕಿನ ಕಳವಳ, ನ್ಯೂರಾಸಿಸ್, ಗೊಂದಲ, ಸಮಯ ಸಾಧಕಗುಣಗಳ ಉಪಉತ್ಪನ್ನಗಳು ಎಂಬಂತೆ ನೋಡುವ ಅವನಿಗೆ ಪಶ್ಚಿಮ ನಾಗರಿಕತೆಯ ಕಟುಟೀಕಾಕಾರರಾಗಿದ್ದ ಗಾಂಧಿ ಕೇವಲ ಪಕ್ಕಾ ವ್ಯವಹಾರಸ್ಥನಂತೆ ಕಾಣುವುದು ಕಿಟಕಿಯಲ್ಲಿ ಇಣುಕಿನೋಡುತ್ತ ಸಂಸ್ಕೃತಿಗಳ ಮೌಲ್ಯಮಾಪನಮಾಡುವ ಪ್ರವಾಸಿಯೊಬ್ಬನ ಬೀಸುಗ್ರಹಿಕೆಯಂತೆ ಕಾಣುತ್ತದೆ. ಅದಿರಲಿ, ಆಧ್ಯಾತ್ಮ ಮತ್ತು ಆಫೀಮುಗಳ ಅಮಲಲ್ಲಿ ಮುಳುಗಿರುವ ಭಾರತೀಯ ಸಮಾಜದ ಕುರಿತ ನೆರೂಡಾನ ಟಿಪ್ಪಣಿಗಳು ಬಹಳ ಮಹತ್ವದ್ದಾಗಿವೆ. ಹಾಗೆ ನೋಡಿದರೆ ಪೂರ್ವದೇಶಗಳ ಕಡೆಗೆ ನೆರೂಡ ಬಂದಿದ್ದು ಭಾರತದಂತಹ ಪ್ರಾಚೀನ ಚೈತನ್ಯದೊಡನೆ ಇರಬೇಕು ಇಲ್ಲಿನ ಕರುಣಾಜನಕವಾದ ದೊಡ್ಡಸಂಸಾರದ ಭಾಗವಾಗಿ ಇರಬೇಕು ಎಂಬ ದೊಡ್ಡ ಆಶಯದಿಂದ.ಆದರೆ ಇಲ್ಲಿ ಬಂದಾಗ ಜೀವಂತ ಬುದ್ಧನ ಹಾಗೆ ನಟಿಸುತ್ತ ದಿನಕ್ಕೊಂದು ಕಿತ್ತಳೆ ತಿಂದು ಆರೋಗ್ಯವನ್ನು ವೃದ್ಧಿಸಿಕೊಳ್ಳುವ ಬಗೆಯಲ್ಲಿ ದಿನಕ್ಕೊಂದು ಹೆಣ್ಣಿನ ಸಂಗ–ಮದುವೆಗೆ ಅಣಿಯಾಗುವ ಬುದ್ಧನ ಅನುಯಾಯಿಯೊಬ್ಬನನ್ನು ಕಂಡು ಅಸಹ್ಯಪಡುತ್ತಾನೆ. ವ್ಯಾಪಾರದ ಅಂಗಡಿಗಳಂತಿರುವ ಪವಿತ್ರ ಕ್ಷೇತ್ರಗಳು, ಸದಾ ಅಫೀಮಿನ ಅಮಲಿನಲ್ಲಿರುವ ಕೂಲಿಕಾರ್ಮಿಕವರ್ಗಗಳನ್ನು ಕಂಡು ಜನ ಆಧ್ಯಾತ್ಮಿಕತೆಯನ್ನೋ, ಆಫೀಮನ್ನೋ ಆಶ್ರಯಿಸುವುದು ಅವುಗಳಿಂದ ಸ್ವರ್ಗದಂತಹ ಅನುಭೂತಿ ದೊರಕುತ್ತದೆ ಎಂಬ ಕಾರಣದಿಂದಲ್ಲ. ಬದಲಾಗಿ ಅವು ಸಾಮಾಜಿಕ ಬದುಕಿನ ಅಸಮಾನತೆ ಶೋಷಣೆಗಳಿಂದ ಹೊರಬರುವ ತಾತ್ಕಾಲಿಕ ಕವಾಟಗಳನ್ನು ತೆರೆಯುತ್ತವೆ ಎಂಬ ಕಾರಣದಿಂದ ಎಂದು ಹೇಳುವುದು ಗಮನಾರ್ಹ ಸಂಗತಿಯಾಗಿದೆ.

ಜಾಣ ನಾಟಕಕಾರನಂತೆ ಕಾಣುವ ನೆಹರೂ ಹಾಗೂ ಮಾವೋ ಕುರಿತ ಟಿಪ್ಪಣಿಗಳೂ ದೀರ್ಘ ಚರ್ಚೆಗೆ ಅರ್ಹವಾಗಿವೆ. ನೆರೂಡ ಚೈನಾದಲ್ಲಿ ಮಾವೋತ್ಸೆ ತುಂಗನನ್ನು ಭೇಟಿಯಾಗಿ ಮಾವೋಗೆ ಒಬ್ಬ ಮಹಾಕಾವ್ಯದ ನಾಯಕನಿಗೆ ದೊರಕುವ ಪ್ರಭಾವಳಿ ಸಿಕ್ಕಿರುವುದನ್ನು ನೋಡಿ ಚಕಿತನಾಗುತ್ತಾನೆ. ಅಲ್ಲಿನ ಜನ ಮಾವೋನನ್ನು ಕುರುಡಾಗಿ ಕೆಮ್ಮುಕಫಗಳಿಂದ ಶುರುವಾಗಿ ಅಂತಾರಾಷ್ಟ್ರೀಯ ರಾಜಕೀಯ ಸಮಸ್ಯೆಗಳಿಗೆಲ್ಲವಕ್ಕೂ ಮಾವೋವಾದವೇ ಮದ್ದು ಎಂಬ ಅನುಕರಣಶೀಲ ಭ್ರಮೆಯಲ್ಲಿ ಸಿಲುಕಿರುವುದನ್ನು ಕಾಣಿಸುತ್ತಾನೆ. ಮನುಷ್ಯನೊಬ್ಬ ಪುರಾಣಪುರುಷನಾಗುವ – ಸಮಾಜದ ಕ್ರಾಂತಿಕಾರಿ ಪ್ರಜ್ಞೆಯನ್ನು ಒಬ್ಬ ವ್ಯಕ್ತಿಯ ಆಳ್ವಿಕೆಗೆ ಪೂರ್ಣವಾಗಿ ಅಡಿಯಾಳಾಗಿಸುವ ದುರಂತವನ್ನು ಕಂಡು ಮರುಗುತ್ತಾನೆ.

ತೀವ್ರ ಕಮ್ಯುನಿಸ್ಟ್ ಸಿದ್ಧಾಂತಿಯಾದ ನೆರೂಡ ಹಲವು ದೇಶಗಳ ರಾಯಭಾರಿಯಾಗಲು ನಡೆಸಿದ ವಶೀಲಿಬಾಜಿ, ಖಾಸಗಿ ಆಸ್ತಿಯನ್ನು ವಿರೋಧಿಸುವ ಚಿಂತಕನಾಗಿ ತನ್ನ ಮನೆಯಲ್ಲಿ ಅಪಾರವಾಗಿ ಸಂಗ್ರಹಿಸಿಕೊಂಡಿದ್ದ, ಕಪ್ಪೆ ಚಿಪ್ಪುಗಳು, ಬೊಂಬೆಗಳು, ಪ್ರಪಂಚದ ಅತ್ಯುತ್ತಮ ಪುಸ್ತಕಗಳು; ಬರ್ಮಾದ ಮುಗ್ಧ ಹೆಂಗಸು, ಕೊಲಂಬೋದ ದಲಿತ ಹೆಣ್ಣೊಬ್ಬಳನ್ನು ಒಳಗೊಂಡಂತೆ ಹಲವರ ಹೆಣ್ಣುಗಳ ಜೊತೆಗಿನ ಒಡನಾಟಗಳ ಕಾರಣದಿಂದ ಅವನು ಬದುಕಿರುವಾಗಲೇ ತೀಕ್ಷ್ಣವಾದ ವಿಮರ್ಶೆ ವಿವಾದಗಳಿಗೆ ಗುರಿಯಾಗಿದ್ದ. ಅದೇನೇ ಇದ್ದರೂ ಕವಿಯೊಬ್ಬ ಪುಟ್ಟ ದೇವರಲ್ಲ. ಯಾವ ದೇವರ ಅವತಾರವೂ ಅಲ್ಲ ಎಂಬ ತನ್ನ ಬಲವಾದ ನಂಬಿಕೆಗೆ ಅನುಗುಣವಾಗಿ ತಾನು ಅನುಭವಿಸಿದ್ದನ್ನು ಸಂವೇದಿಸಿದ್ದನ್ನು ಬಹಳ ಮುಕ್ತವಾಗಿ– ಅಷ್ಟೇ ತೀವ್ರವಾಗಿ ನಿರೂಪಿಸುವ ಕಾರಣದಿಂದ ನೆರೂಡನ ಆತ್ಮಕಥಾನಕ ಆಪ್ತವಾಗುತ್ತದೆ.

ತೇಜಸ್ವಿನಿ ನಿರಂಜನ, ನಿಸಾರ್ ಅಹಮದ್, ಲಂಕೇಶ್, ನಟರಾಜ್ ಹುಳಿಯಾರ್, ದಲಿತ ಬಂಡಾಯದ ಹಲವು ಲೇಖಕರು, ನಯನಾ ಕಾಶ್ಯಪ್, ಜ.ನಾ. ತೇಜಶ್ರೀ ಮೊದಲಾದವರು ನೆರೂಡನ ಬದುಕು ಹಾಗೂ ಕಾವ್ಯದ ಅನುವಾದ, ಸೈದ್ಧಾಂತಿಕತೆ, ಜೀವಪರತೆಗಳನ್ನು ಚರ್ಚಿಸುತ್ತ ಬರೆಯುತ್ತ ಬಂದ ಕಾರಣದಿಂದ ಕನ್ನಡದಲ್ಲಿ ನೆರೂಡ ಸಂವೇದನೆಯೊಂದು ಅಂತರ್ಜಲದ ಬುಗ್ಗೆಗಳಂತೆ ಅಲ್ಲಲ್ಲಿ ಏಳುತ್ತಲೇ ಇದೆ. ಓಎಲ್‌ನಾಗಭೂಷಣ ಸ್ವಾಮಿಯವರು ತಮ್ಮ ಅನುವಾದದ ಮೂಲಕ ಇಂಥ ಅಂತರ್ಜಲದ ಹರಿವಿಗೆ ಇನ್ನಷ್ಟು ವೇಗವನ್ನು ತುಂಬಿದ್ದಾರೆ. ನಮ್ಮನ್ನು, ನಮ್ಮ ಭಾವಗಳನ್ನು ಆವಾಹಿಸಿಕೊಳ್ಳುವ ಶಕ್ತಿ ನೆರೂಡನ ಕಾವ್ಯಕ್ಕೆ ಮಾತ್ರವಲ್ಲ ಅವನ ಗದ್ಯಕ್ಕೂ ಇದೆ. ಇಂಥ ಆವಾಹನೆಯ ಗುಣವನ್ನು ಅದರ ಎಲ್ಲ ತೀವ್ರತೆಯೊಂದಿಗೆ ಓಎಲ್ಲೆನ್ ತಂದಿದ್ದಾರೆ. ಅನುವಾದವೆಂದರೆ ಕೇವಲ ಪದಬದಲಿನ ಕೆಲಸವಲ್ಲ. ಅದೊಂದು ಸಹ ಸೃಜನತೆ ಎಂಬುದನ್ನು ತಿಳಿಸಿದ ಓಎಲ್ಲೆನ್ ಅವರಿಗೆ ಕನ್ನಡದ ಓದುಗರ ಪರವಾಗಿ ಕೃತಜ್ಞತೆಗಳು.

**– ಡಾ.ಎಸ್. ಸಿರಾಜ್ ಅಹಮದ್**

**ಪು : ಸದಭಿರುಚಿಯ ತಲ್ಲೀನತೆ** ಲೇ. : ಎಸ್.ಬಿ **ಶಾಪೇಟಿ** ಪ್ರ: **ವಾಚಸ್ಪತಿ ಪ್ರಕಾಶನ,** ಮೈಸೂರು ಪು: ೩೬೮ ಬೆಲೆ: **ರೂ.೨೭೫/-**

## ಆಡಳಿತಗಾರನೊಬ್ಬನ ಬದುಕಿನ ಸರಳ ನಿರೂಪಣೆ




**ಸ**ರಳತೆ, ನೈತಿಕತೆ, ಸಂವೇದನಾಶೀಲ ನಿರೂಪಣೆಯಿಂದ ನಮ್ಮನ್ನು ಸೆಳೆಯುವ ಎಸ್.ಬಿ ಶಾಪೇಟಿ ಅವರ ಆತ್ಮಕಥನ 'ಸದಭಿರುಚಿಯ ತಲ್ಲೀನತೆ' ತನ್ನ ಪ್ರಾಮಾಣಿಕತೆಯ ದೃಷ್ಟಿಯಿಂದಲೂ ನಮ್ಮ ಗಮನ ಸೆಳೆಯುವ ಒಂದು ಕೃತಿಯಾಗಿದೆ. ಎಸ್ ಬಿ ಶಾಪೇಟಿಯವರು ಕನ್ನಡದ ಪ್ರತಿಭಾವಂತ ಅಧ್ಯಾಪಕ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿದವರು. ಸುಪ್ರಸಿದ್ಧ ಕುಲಪತಿಗಳಾದ ಶ್ರೀ ಡಿ ಸಿ ಪಾವಟೆ ಅವರ ಜೊತೆ ಕೆಲಸ ಮಾಡಿ ಸೈ ಎನಿಸಿಕೊಂಡವರು ಹೌದು. ಒಟ್ಟು ಆರು ವಿಭಾಗಗಳಲ್ಲಿ ನಿರೂಪಿತವಾಗಿರುವ ಈ ಕೃತಿ ಲೇಖಕರ ಆಡಳಿತದ ಅನುಭವಗಳನ್ನು ಪ್ರಧಾನವಾಗಿಟ್ಟುಕೊಂಡು, ಶಿಕ್ಷಣ ಕ್ಷೇತ್ರದ ಆಡಳಿತದ ಹಲವು ಮಜಲುಗಳನ್ನು ಓದುಗರಿಗೆ ಸರಳವಾಗಿ ಪರಿಚಯಿಸುತ್ತದೆ. ಯಾವುದೇ ಭಾವಾತಿರೇಖ ಅಥವಾ ಹೆಚ್ಚಿನ ಭಾವಾವೇಶವಿಲ್ಲದೆ ಕಟ್ಟಿರುವ ಈ ಪುಸ್ತಕದ ಮೊದಲೆರಡು ಭಾಗಗಳಲ್ಲಿ ಬಾಲ್ಯದ ನೆನಪು ಮತ್ತು ಪ್ರೌಢಾವಸ್ಥೆ ಬಂದ ಮೇಲೆ ಹದಿನೆಂಟು ವರುಷಗಳ ಕಾಲ ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುದುದರ ಕುರಿತಾದ ವಿಪುಲ ವಿವರಗಳಿವೆ.

ಬಹಳ ಮುಖ್ಯವಾಗಿ ಕನ್ನಡ-ಮರಾಠಿ ದ್ವಿಭಾಷಿಕ ಪರಿಸರದಲ್ಲಿ ಬದುಕಿಯೂ ಕನ್ನಡದ ಬಗೆಗಿನ ಪ್ರೀತಿ, ಸೆಳೆತ ಮತ್ತು ಅದನ್ನು ಉಳಿಸಿಕೊಳ್ಳುವ ಅವರ ತಹತಹ ನಮ್ಮನ್ನು ಸೆಳೆಯುತ್ತದೆ. ತಾವು ಓದಬೇಕಾದರೆ ಎದುರಿಸಿದ ಸಂಕಷ್ಟ, ಅವರ ಗುರುಗಳ ನಿರ್ವಾಜ್ಯ ಪ್ರೀತಿ-ಪ್ರೇಮಗಳನ್ನು ಸಹ ಈ ಭಾಗದಲ್ಲಿ ಕಟ್ಟಿಕೊಡಲಾಗಿದೆ. ಇದರ ಒಂದು ಅಧ್ಯಾಯದಲ್ಲಿ ದಾಖಲಾದ ಹಾಗೆ ಅವರ ಗುರುಗಳೇ ಪರೀಕ್ಷಾ ಸಂದರ್ಭದಲ್ಲಿ ಹಾಸ್ಟೆಲ್ಲಿಗೆ ಬಂದು ಅವರನ್ನು ಎಬ್ಬಿಸಿ ಓದುವಂತೆ ಪ್ರಚೋದಿಸುತ್ತಿದ್ದರಂತೆ!!! ಅವರು ಕೊಲ್ಹಾಪುರದಲ್ಲಿರಬೇಕಾದರೆ ರಾಜಾರಾಮ ಕಾಲೇಜಿನಲ್ಲಿ ಅವರು ಕನ್ನಡ ವಿಭಾಗವನ್ನು ಉಳಿಸಿಕೊಳ್ಳಲು ದಿಟ್ಟವಾಗಿ ಹೋರಾಟ ಮಾಡಿರುವುದು ಅವರಿಗಿರುವ ಕನ್ನಡ ಪ್ರೇಮವನ್ನು ಎತ್ತಿ ತೋರಿಸುತ್ತದೆ. ಈ ಕೃತಿಯ ಮೂರನೆಯ ಸುದೀರ್ಘ ಭಾಗವು ಎಸ್.ಬಿ.ಶಾಪೇಟಿಯವರು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಆಡಳಿತಗಾರನಾಗಿ ಎದುರಿಸಿದ ಸವಾಲುಗಳು, ಆ ಕಾಲದಲ್ಲಾದ ಹಲವು ಬಗೆಯ ಬಿಕ್ಕಟ್ಟುಗಳು ಹಾಗೂ ಅವರು ಪರೀಕ್ಷಾ ಕ್ಷೇತ್ರದಲ್ಲಿ ತಂದ ಸುಧಾರಣೆಗಳ ಬಗ್ಗೆ ವಿವರವಾಗಿ ದಾಖಲಿಸುತ್ತದೆ. ಈ ಭಾಗವು ಒಬ್ಬ ಆಡಳಿತಗಾರ ಸ್ವಜನ ಪಕ್ಷಪಾತ ಮಾಡದೆ, ಭ್ರಷ್ಟಾಚಾರ ಮಾಡದೆ ನೇರವಾಗಿ ಮತ್ತು ನೈತಿಕವಾಗಿ ಹೇಗೆ ಆಡಳಿತ ಮಾಡಬೇಕೆಂದು ತೋರಿಸಿಕೊಡುತ್ತದೆ. ಆಡಳಿತಕ್ಕೆ ನೈತಿಕತೆಯ ಮತ್ತು ವಿವೇಕದ ಸ್ಪರ್ಶ ಇರಬೇಕೆಂಬುದನ್ನು ಒತ್ತಿ ಒತ್ತಿ ಹೇಳುತ್ತದೆ. ಉದಾಹರಣೆಯಾಗಿ ದೂರದ ನೇಪಾಲದಿಂದ ಬಂದ ಒಬ್ಬ ವಿದ್ಯಾರ್ಥಿಗೆ ಕಾನೂನು ಮೀರಿ ಮಾನವೀಯತೆಯ ಆಧಾರದ ಮೇಲೆ ವಿದ್ಯಾರ್ಥಿವೇತನ ನೀಡಿರುವುದನ್ನು ದಾಖಲಿಸುತ್ತಾರೆ. ಇದಕ್ಕೆ ಶಾಪೇಟಿಯವರು ನೀಡುವ ಸಮರ್ಥನೆ ಎಂದರೆ 'ಕಾನೂನು ಇರುವುದು ಮನುಷ್ಯರಿಗೆ ಹೊರತು ಕಾನೂನಿಗಾಗಿ ಮನುಷ್ಯರಲ್ಲ'. ಇಂತಹ ನೈತಿಕತೆ, ಪ್ರಾಮಾಣಿಕತೆ ಮತ್ತು ದಿಟ್ಟತನದ ವ್ಯಕ್ತಿತ್ವವನ್ನು ಕಟ್ಟಿಕೊಡುವ ಅನೇಕ ಪ್ರಸಂಗಗಳು ಇಲ್ಲಿ ದಾಖಲಾಗಿವೆ. ಅನೇಕ ಬಾರಿ ಸರ್ಕಾರವನ್ನೇ ಎದುರು ಹಾಕಿಕೊಂಡು ತೀಕ್ಷ್ಣ ರೀತಿಯ ಭಿನ್ನಾಭಿಪ್ರಾಯದ ಪತ್ರ ಬರೆದಿರುವುದನ್ನೂ ನಿರೂಪಿಸಲಾಗಿದೆ. ಹಾಗೆಯೇ ಶಿಕ್ಷಣ ಕ್ಷೇತ್ರದ ಭ್ರಷ್ಟಾಚಾರ, ವಿಶ್ವವಿದ್ಯಾಲಯದ ಪ್ರೊಫೆಸರುಗಳ ಸಣ್ಣತನ, ವಿಶ್ವವಿದ್ಯಾಲಯದ ಕ್ಯಾಂಪಸ್ ಒಳಗಿರುವ ಜಾತಿ ರಾಜಕೀಯವನ್ನು ಈ ಭಾಗದಲ್ಲಿ ಶಾಪೇಟಿಯವರು ಬಹಳ ವಿಷಾದದಿಂದ ಪ್ರಸ್ತಾಪಿಸುತ್ತಾರೆ.

ನಾಲ್ಕನೇ ಭಾಗದಲ್ಲಿ ಇವರ ಹಲವು ಸ್ನೇಹಿತರ ಹಾಗೂ ಕನ್ನಡದ (ಧಾರವಾಡದ) ಮುಖ್ಯ ಕವಿ, ಪತ್ರಕರ್ತರ ಬಗೆಗೆ ಪರಿಚಯಾತ್ಮಕ ನೆಲೆಯ ಬರವಣಿಗೆ ಇದೆ. ಸಹಜವಾಗಿಯೇ ಸ್ವಲ್ಪ ದೇಶಾವರಿ ಎನಿಸುವ ಭಾಗ ಇದು. ಹೆಚ್ಚಿನ ವಿಶ್ಲೇಷವಿಲ್ಲದ ಟಿಪ್ಪಣಿ ಸ್ವರೂಪದ ಬರವಣಿಗೆಯನ್ನು ಈ ಭಾಗದಲ್ಲಿ ಗಮನಿಸಬಹುದು. ಐದನೇ ಭಾಗದ ಒಂದು ಅಧ್ಯಾಯದಲ್ಲಿ ಕನ್ನಡದ ಪ್ರೊಫೆಸರ್ ಒಬ್ಬರು ಇವರ ಆತ್ಮಕಥನ ಓದಿ 'ಅದರಲ್ಲೇನಿದೆ' ಎಂದು ಪ್ರಶ್ನಿಸಿದನ್ನು ದಾಖಲಿಸುತ್ತಾ ಆ ಪ್ರೊಫಸರ್‌ದ್ದು ಏಕಪಕ್ಷೀಯ ಓದು ಎಂದು ಸೂಚಿಸುತ್ತಾರೆ. ಅಷ್ಟೇ ಅಲ್ಲ, ಇಂಥಹ ಪಕ್ಷಪಾತಿ ಓದಿಗೆ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ಪೂರಕವೆಂಬಂತೆ ನಾಡಿನ ದೊಡ್ಡ ಲೇಖಕರು, ಕವಿಗಳು, ಎಂದರೆ ಚನ್ನವೀರ ಕಣವಿ, ಗಿರಡ್ಡಿ ಗೋವಿಂದರಾಜ, ಜಿ.ಎಸ್.ಶಿವರುದ್ರಪ್ಪ, ಕಾಳೇಗೌಡ ನಾಗವಾರ ಮೊದಲಾದವರು ತಮ್ಮ ಕೃತಿಯನ್ನು ಹೊಗಳಿ ಬರೆದಿರುವುದನ್ನು ದಾಖಲಿಸಿದ್ದಾರೆ. ಇದೊಂದು ಅನಗತ್ಯವಾದ, ಸ್ವಲ್ಪ ಮುಜುಗರ ಉಂಟುಮಾಡುವ ಪ್ರತಿಕ್ರಿಯೆ ಎನಿಸುತ್ತದೆ. ಈ ಭಾಗದಲ್ಲಿ ಅವರ ನಿವೃತ್ತಿಯ ನಂತರದ ಜೀವನವನ್ನು ಕೂಡಾ ದಾಖಲಿಸಿದ್ದಾರೆ, ಆಧ್ಯಾತ್ಮದತ್ತ ಒಲವನ್ನು ವ್ಯಕ್ತಪಡಿಸಿ ಹಿಮಾಲಯಕ್ಕೆ ಹೋಗಿಬಂದಿದ್ದರ ವಿವರವನ್ನು ಕೂಡಾ ನೀಡಿದ್ದಾರೆ, ಒಟ್ಟಾರೆ ದೃಷ್ಟಿಯಿಂದ ಇವರದ್ದು ಬಹಳ ನೈತಿಕವಾದ ಸರಳವಾದ ಮತ್ತು ತಮ್ಮ ವೃತ್ತಿಗೆ ಯಾವಾಗಲೂ ನ್ಯಾಯ ಒದಗಿಸಿದ ವ್ಯಕ್ತಿತ್ವ, ಬಹಳ ಸಾರ್ಥಕವಾದ ಬದುಕಿನ ವಿವರಗಳನ್ನು ಈ ಕೃತಿ ನಿರೂಪಿಸುತ್ತದೆ.

ಕೊನೆಯದಾಗಿ, ಇಷ್ಟೆಲ್ಲ ಪ್ರಾಸಂಗಿಕ ವಿವರಗಳಿದ್ದರೂ, ನೈತಿಕ ಬದುಕಿನ ಸ್ಪರ್ಷವಿದ್ದರೂ ಈ ಆತ್ಮಚರಿತ್ರೆಗೆ ಗಂಭೀರ ಸ್ವರೂಪದ ಕೆಲವು ಕೊರತೆಗಳಿವೆ. ಆತ್ಮಕತೆ ಎಂಬ ಪ್ರಕಾರವೇ ಮನುಷ್ಯನ ಅಂತರಂಗದ ಒಳತೋಟಿಯ ನಿವೇದನೆ ಮತ್ತು ವಿಶಾಲಾರ್ಥದಲ್ಲಿ ಒಂದು ಕಾಲಘಟ್ಟದ ಸಾಮಾಜಿಕತೆಯ ಹಿನ್ನಲೆಯಲ್ಲಿ ಬಂದಿರುವಂತದ್ದು. ಈ ಕೃತಿಯಲ್ಲಿ ಈ ಬಗೆಯ ವೈಯಕ್ತಿಕ ಬದುಕಿನ ಭಾವಜಗತ್ತಿನ ವಿವರಗಳು ಹೆಚ್ಚಿಲ್ಲ. ಅವರ ಪತ್ನಿ ಮತ್ತು ಕುಟುಂಬಸ್ಥರ ಕುರಿತಾದ ದಟ್ಟ ವಿವರಗಳು ಕೂಡಾ ಗೈರು ಹಾಜರಾಗಿವೆ. (ನಾಲ್ಕು ಮಕ್ಕಳು ಸುಖೀ ಕುಟುಂಬಸ್ಥರು ಎಂಬ ಮಾತನ್ನು ಹೊರತು ಪಡಿಸಿ). ಹೀಗಾಗಿ ವಿಶಾಲಾರ್ಥದಲ್ಲಿ ಈ ಕೃತಿಗೆ ಸಾಮಾಜಿಕ ಮಹತ್ವ ಕಡಿಮೆ ಆಗಿದೆಯೇನೋ ಎಂಬ ಅನುಮಾನ ನನ್ನದು.

**-ಅವಿನಾಶ್ ಟಿ.**

Statement about Ownership and other particulars about News paper 'Hosa Manushya'

FORM 1V

| | |
|---|---|
| 1. Place of Publication : | Shimoga |
| 2. Printers name : | D.S. Nagabhushana |
| Nationality : | Indian |
| Address : | HIG-5, 'Nudi', Kallalli Extn, Vinoba Nagara Shimoga-577204 |
| 3. Publishers Name: | D.S.Nagabhushana |
| Nationality : | Indian |
| Address : | Same as above |
| 4. Editor's name : | D.S.Nagabhushana |
| Nationality : | Indian |
| Adddress : | Same as above |
| 5. Name of Individuals who own the News paper : | D.S.Nagabhushana, |
| Address : | Same as above |

I, D.S.Nagabhushana hereby declare that the particulars given above are true to the best of my knowledge and belief.

Shimoga Sd/-
31.3.2018 D.S.Nagabhushana

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**
ಗೊಟ್ಟಿಗೆರೆ, ಬನ್ನೇರುಘಟ್ಟ
**ಬೆಂಗಳೂರು**

**ತಿಂಗಳ ಸಾಲುಗಳು...**



**ನೀವು ನಿಜವಾಗಿಯೂ ಗೌರವಾನ್ವಿತ ಬದುಕು ನಡೆಸಬಯಸುವುದಾದರೆ ಅತ್ಯುತ್ತಮ ರೂಪದ ಸಹಾಯವಾದ ಸ್ವಸಹಾಯವೇ ನಿಜವಾದ ಮಾರ್ಗ**

**–ಡಾ. ಬಿ.ಆರ್. ಅಂಬೇಡ್ಕರ್**

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
ಲೆಕ್ಕ ಪರಿಶೋಧಕರು, ಮೈಸೂರು
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)